# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ–2021




ಬಿಡಿ ಪ್ರತಿ: ರೂ.10.00



# ಅಪರಂಜಿ

ತಿಳಿನಗೆಯ ಕಾರಂಜಿ


ಸಂಪುಟ 38
ಸಂಚಿಕೆ - 4
ಜನವರಿ - 2021



**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್



**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ವ್ಯಂಗ್ಯಚಿತ್ರ - ಚರಿತ್ರೆ | ಶಿವಕುಮಾರ್ | 5 |
| ಭೂಮಿ ಮೇಲಿನವರು | ಕುಮುದಾ ಪುರುಷೋತ್ತಮ್ | 8 |
| ಹೊಸ ವರುಷ-ಹಳೆಯ ನೆನಪು | ಸಿ. ಆರ್. ಸತ್ಯ | 10 |
| ಆ ಐದು ದಿನಗಳು | ಗೌತಮ | 17 |
| ಆಸ್ಪತ್ರೆಯಲ್ಲಿ ರಸ ನಿಮಿಷಗಳು | ಪ್ರಕಾಶ್ | 23 |
| ಹೀಗೊಂದು ಕಾಫಿ ಪುರಾಣ | ವಿದ್ಯಾ ಮೂರ್ತಿ | 25 |
| ತುಂತುರು | ದಂನಆ | 30 |
| ದೇಹ ಹೀಗಿರಬೇಕಿತ್ತು | ಸವಾಲು - ಜವಾಬು | 31 |


ಮುಖಪುಟ ವ್ಯಂಗ್ಯಚಿತ್ರ :
**ಡಾ॥ ಜೆ. ಬಾಲಕೃಷ್ಣ**


ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: beluru1ramamurthy@gmail.com



For Online payment of subscription: KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
**Please mention your subscription number.**

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

ಹೊಸವರುಷದಲ್ಲಿ ಕರೋನಾ ನಿರ್ಗಮನವಾಗಿ ಜಗತ್ತಿನಲ್ಲಿ
**ಸಂತಸ ತುಂಬಿ ತುಳುಕಾಡಲಿ ಎಂದು ಅಪರಂಜಿಯ ಪ್ರಾರ್ಥನೆ.**

***

ರಾಮನಗರ : ಪರಿಣಾಮ ಬೀರದ ಬಂದ್. – ಸುದ್ದಿ
**ಶ್ರೀರಾಮರಕ್ಷೆ !!**

***

ಚಿಕ್ಕಬಳ್ಳಾಪುರ : 'ಭಾಗ್ಯನಗರ' ಹೆಸರಿಡಲು ಒತ್ತಾಯ – ಸುದ್ದಿ
**ಇನ್ನು ದೊಡ್ಡಬಳ್ಳಾಪುರದವರು ಏನು ಮಾಡುತ್ತಾರೋ ?!**

***

'ಮುಂದಿನ ಚುನಾವಣೆಯಲ್ಲಿ ಬಿ.ಜೆ.ಪಿ.ಗೆ ಪಾಠ'–ಹೇಳಿಕೆ
**ಅವರು ಕಲಿಯಬೇಕಲ್ಲ !!**

***

ಮಾಗಡಿ ಕೆರೆಯಲ್ಲಿ ಚೈನಾದ ಚೆಲುವೆಯರು !! – ಪತ್ರಿಕೆ
**ಹುಬ್ಬೇರಿಸಬೇಡಿ, ಸುದ್ದಿ ' ಹೆಬ್ಬಾತು' ವಲಸೆ ಹಕ್ಕಿಗಳದ್ದು !!**

***

'ಅಮೆರಿಕಾ ಸರ್ಕಾರಿ ಶಾಲೆಗಳಲ್ಲಿ ಕನ್ನಡ' – ಪತ್ರಿಕೆ
**ಅಲ್ಲಿನ ಮಕ್ಕಳು ಅನುನಾಸಿಕಗಳನ್ನು ವಿಪುಲವಾಗಿ ಬಳಸುತ್ತಾರಂತೆ !!**

***

'ಎಪ್ಪತ್ತು ಲಕ್ಷ ಜನರ ದತ್ತಾಂಶ ಸೋರಿಕೆ'– ಸುದ್ದಿ
**ಇದಕ್ಕೆ 'ಸೀಲ್' ಎಲ್ಲಿಂದ ತರೋಣ ?!**

***

'ನೈಜ ಕ್ರೋಢೀಕರಿತ 'ಇಂಗು ' – ಭಾರಿ ಜಾಹಿರಾತು
**ಅಂದರೆ , ನಾವು..................ಇದುವರೆಗೂ ?!**

***

ಪ್ರತಿಪಕ್ಷಗಳ ಅನುಪಸ್ಥಿತಿಯಲ್ಲಿ ವಿಧಾನಸಭಾ ಕಲಾಪ – ಪತ್ರಿಕೆ
**ಹಾಗಾದರೆ ನಿಶ್ಶಬ್ದ ವಾತಾವರಣ ಇದ್ದಿರಬೇಕು !!**

***

# ನಮ್ಮ ನಿಮ್ಮಲ್ಲಿ

♦ ಶಿವಕುಮಾರ್

ತುಂಬು ಉತ್ಸಾಹದಿಂದ ಅಪರಂಜಿ 2021ಕ್ಕೆ ಕಾಲಿಡುತ್ತಿದ್ದಾಳೆ. ಇದಕ್ಕೆ ಕಾರಣಗಳು ಹಲವಾರು. ಸ್ವಲ್ಪ ತಾಳಿ ಅಂದ್ರಾ? 'ಉತ್ಸಾಹದಿಂದಿರೋಕ್ಕೆ ಕಾರಣಗಳಾದ್ರೂ ಯಾಕೆ? ಹೇಳಿ ಕೇಳಿ ನಗೆಗಾರ್ತಿ ಅವಳು. ಸುಮ್ನೆ ಜಾಲಿಯಾಗಿ ಇರಬಹುದಲ್ಲಾ' ಅಂತ ನೀವು ಕೇಳಿದ್ರೆ, ಆ ಮಾತೂ ಸರೀನೇ ಅಂತ ಒಪ್ಕೊಳ್ಳಲೇ ಬೇಕಾಗುತ್ತೆ. ಆದರೂ ಸಂಪಾದಕನಾಗಿ ಕಾರಣಗಳನ್ನ ಲಿಸ್ಟ್ ಮಾಡಿಕೊಂಡಿರೋದ್ರಿಂದ ಹೇಳೇ ಬಿಡ್ತೀನಿ. ಪರಾಂಬರಿಸಿ. 'ಏನ್ರೀ, ನಿಮ್ ತುತ್ತೂರಿನ ನೀವೇ ಊದಿ ಕೊಳ್ಳೋದಕ್ಕೆ ಶುರುಮಾಡ್ಬಿಟ್ಟಿದ್ದೀರಾ?' ಅಂದ್ರಾ. ಅದು ಹಾಗಲ್ಲ. ಮದುವೆ ಸಮಾರಂಭ ಎಲ್ಲಾ ಅಚ್ಚುಕಟ್ಟಾಗಿ ನಡೆದು ಮದುಮಕ್ಕಳು ಮಧುಚಂದ್ರಕ್ಕೆ (ಮುಂಬರುವ ಕಷ್ಟಕೋಟಲೆಗಳ ಅರಿವಿಲ್ಲದೇ) ಜಿಗಿಯುತ್ತಾ ಹೊರಟನಂತರ ನೀವು ಗಂಡ ಹೆಂಡತಿ ಇಬ್ಬರೇ ಬೀಗ, ಬೀಗಿತ್ತಿಯರೊಂದಿಗೆ ಆರಾಮವಾಗಿ ಕುಳಿತು ಹರಟುಲ್ಲವೇ. ಆ ಬಾಬ್ತು ಇದು.

ಮೊದಲಿಗೆ ಅಪರಂಜಿ ಬಳಗದ ನಾವೆಲ್ಲಾ ಸೇರಿ ಮಾರ್ಚ್ 2020ರಲ್ಲಿ ಶುರುವಾದ ದಿಗ್ಬಂಧನಗಳ ಸರಣಿಯನ್ನ ನಿಭಾಯಿಸಿ, ಒಂದು ತಿಂಗಳೂ ತಪ್ಪದಂತೆ ಮೊದಲು ಆನ್‌ಲೈನ್‌ನಲ್ಲಿ ಅನಂತರ ಅಚ್ಚಿಸಿದ ಪತ್ರಿಕೆಗಳನ್ನು ಓದುಗರಿಗೆ ತಲುಪಿಸುವುದರಲ್ಲಿ ಯಶಸ್ವಿಯಾಗಿದ್ದು ಅಪರಂಜಿಯ ಮುಡಿಗೇರಿದ ಮೊದಲ ಗರಿ. ಇನ್ನೊಂದು ತೃಪ್ತಿ ತಂದ ವಿಷಯವೆಂದರೆ ನಾವು ಹೊರತಂದ ಹಲವು ವಿಶೇಷಾಂಕಗಳು ಓದುಗರಿಂದ ಬಹುವಾಗಿ ಮೆಚ್ಚುಗೆಯನ್ನು ಪಡೆದವು. ಮೇ ತಿಂಗಳಲ್ಲಿ ಕೃತಜ್ಞತಾ ವಿಶೇಷಾಂಕ, ಸೆಪ್ಟೆಂಬರಿನಲ್ಲಿ ಮಹಿಳಾ ವಿಶೇಷಾಂಕ ಇವೆರಡೂ ನಮಗೆ ಸಾಕಷ್ಟು ಮುದ ತಂದವು. ಓದುಗರಿಗೂ ತಂದಿರಬೇಕು ಅಂತ ನಮ್ಮ ಗುಮಾನಿ. ಅಕ್ಟೋಬರಿನ ಸಂಚಿಕೆಯಲ್ಲಿ ಅಣಕು ಗದ್ಯಗಳ ಸರಣಿ ಬಂದದ್ದು ಬರಹಗಾರರಾದ ನಮಗೆಲ್ಲಾ ಬಹು ಚೇತೋಹಾರಿಯಾಗಿತ್ತು.

ಕಳೆದ ವಾರ ಜನವರಿ ಸಂಚಿಕೆಯ ತಯಾರಿ ನಡೆಸುತ್ತಿದ್ದಾಗ ಅನಿರೀಕ್ಷಿತವಾಗಿ ಶ್ರೀಯುತ (ಡಾಕ್ಟರ್) ಜೆ.ಬಾಲಕೃಷ್ಣ ಅವರು ವ್ಯಂಗ್ಯಚಿತ್ರ ಚರಿತ್ರೆ ಬಗ್ಗೆ ಬರೆದ ತಮ್ಮ ಪುಸ್ತಕವನ್ನು ನನಗೆ ಕಳುಹಿಸಿದರು. ಶ್ರೀಯುತರು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರು. ಈ ಪುಸ್ತಕ ತುಂಬ ಚೆನ್ನಾಗಿದೆ. ಇದನ್ನು ಈ ಸಂಚಿಕೆಯಲ್ಲೇ ಪರಿಚಯಿಸಿರುವೆ. ಪುಸ್ತಕ ನೋಡಿದ ತಕ್ಷಣ ಅವರಿಗೆ ಪತ್ರ ಬರೆದು ಮುಖಪುಟಕ್ಕೆ ಒಂದು ವ್ಯಂಗ್ಯಚಿತ್ರ ರಚಿಸಿ ಕೊಡಿರೆಂದು ಭಿಡೆಯಿಲ್ಲದೇ ಕೇಳಿದೆ. ತುಂಬ ಸೊಗಸಾದ ಚಿತ್ರವೊಂದನ್ನು ಬಿಡಿಸಿ ತಕ್ಷಣವೇ ನನಗೆ ಕಳುಹಿಸಿದರು. ಕೊರೋನಾ ಹಿಡಿತದಿಂದ ಹೊರಬರುತ್ತಾ ಹೊಸವರ್ಷವನ್ನು ಆಶಾಭಾವನೆಯಿಂದ ಸ್ವಾಗತಿಸುವ ಭಾವವನ್ನು ಈ ಚಿತ್ರ ಬಹು ಆಪ್ತವಾಗಿ ಬಿಂಬಿಸಿದೆ. ಬರಲಿರುವ ಅನಿಶ್ಚಿಯದ ದಿನಗಳ ಅಲೆಗಳ ನಡುವೆ ಹಾಸ್ಯದ ಹರಿಗೋಲಿನಲ್ಲಿ ಹೊರಟಿರುವ ಅಪರಂಜಿ ಬಳಗಕ್ಕೆ ಸೇರಿರುವ ಶ್ರೀಯುತ ಬಾಲಕೃಷ್ಣರಿಗೆ ತುಂಬು ಹೃದಯದ ಸ್ವಾಗತ.

ಇನ್ನೊಂದು ವಿಷಯ. ಅಮೆರಿಕೆಯಿಂದ ಗೆಳೆಯ ವಾಸು ನನಗೊಂದು ಲಿಂಕ್ ಕಳಿಸಿದರು. https://digital.sanchaya.net ಎಂಬ ಈ ಲಿಂಕ್ ನಲ್ಲಿ ಹಳೆಯ ಕನ್ನಡ ಪುಸ್ತಕಗಳ ರಾಶಿಯೇ ಲಭ್ಯವಿದೆ. ಅದರಲ್ಲಿ ನನಗೆ ದೊರಕಿದ ಅನರ್ಘ್ಯ ರತ್ನವೊಂದು ಪಾ.ವೆಂ ಆಚಾರ್ಯರ ' ಸುಭಾಷಿತ ಚಮತ್ಕಾರ' ಎಂಬ ಪುಸ್ತಕ. ಇದರಲ್ಲಿನ ಹಲವು ಸುಭಾಷಿತಗಳನ್ನು ಆಯ್ದು ಈ ಸಂಚಿಕೆಯಲ್ಲಿ ಅಳವಡಿಸಿರುವೆ. ಕರೋನಾ ಹಾವಳಿಯಿಂದ ಬೇಸತ್ತ ಮನಗಳಿಗೆ ಈ ತುಂಟ ಸುಭಾಷಿತಗಳು ಉಲ್ಲಾಸ ತರುವುವೆಂದು ನನ್ನ ನಂಬಿಕೆ.

ಈ ಸಂಚಿಕೆಯಲ್ಲಿ 'ದೇಹ ರಚನೆ ಹೀಗಿರಬೇಕಿತ್ತು' ಎಂಬ ಶೀರ್ಷಿಕೆಯಡಿ ಹಲವಾರು ಬರಹಗಾರ/ಗಾರ್ತಿಯರು ತಮ್ಮ ಸ್ವಚ್ಛಂದ ಚಿಂತನೆಗಳನ್ನು ಹಂಚಿಕೊಂಡಿದ್ದಾರೆ. ಇದನ್ನು ನೋಡಿ ಮುಂದಿನ ಸ್ಪರ್ಧೆಗಳಿಗೆ, ಸವಾಲುಗಳಿಗೆ ನೀಡಬಹುದಾದ ವಿಷಯಗಳ ಬಗ್ಗೆ ನಿಮ್ಮಲ್ಲಿ ಏನಾದರೂ ಸಲಹೆಗಳಿದ್ದರೆ ಅಗತ್ಯವಾಗಿ ನಮಗೆ ಬರೆದು ತಿಳಿಸಿ. ಹೊಸವರುಷ ನಿಮ್ಮೆಲ್ಲರನ್ನೂ ಉಲ್ಲಾಸಭರಿತರನ್ನಾಗಿಸಲಿ ಎಂಬುದೇ ಅಪರಂಜಿಯ ಪ್ರಾರ್ಥನೆ.

ಅಪರಂಜಿ ಪತ್ರಿಕೆಯ ಹಿತೈಷಿಗಳೂ, ಲೇಖಕರೂ ಆಗಿದ್ದ ಹಿರಿಯ ಚೇತನ ಶ್ರೀಯುತ ಹಾ.ಮ್ಯೆ. ಸೂರಿಯವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿ ದೊರಕಲೆಂದು ಅಪರಂಜಿ ಪ್ರಾರ್ಥಿಸುತ್ತಾಳೆ. ■

## ಮಾಹಿತಿಗಾಗಿ ವಿನಂತಿ

ಕಳೆದ ಲಾಕ್‌ಡೌನ್ ತಿಂಗಳುಗಳಲ್ಲಿ ಹಲವು ಸದಸ್ಯರು ನಮಗೆ ಆನ್ ಲೈನ್‌ನಲ್ಲಿ ಚಂದಾ ಹಾಗೂ ದೇಣಿಗೆಗಳನ್ನು ಕಳುಹಿಸುವಾಗ ತಮ್ಮ ವಿಳಾಸಗಳನ್ನು ಕಳಿಸುವುದನ್ನು ಮರೆತಿದ್ದಾರೆ. ಇದರಿಂದಾಗಿ ಸಂದಾಯವಾದ ಹಣಕ್ಕೆ ರಸೀತಿ ಕಳುಹಿಸಲು ಆಗುತ್ತಿಲ್ಲ.

**ವಿವರಗಳು ಹೀಗಿವೆ.**

1. ಏಪ್ರಿಲ್ 5 2020 ಶ್ರೀ. ಎನ್ ಗೌರೀಶ್ ರೂ 750
2. ಜೂನ್ 15 2020 ಶ್ರೀ ಅನುರಾಗ್ ರಾವ್ ರೂ 750 (NEFT ID: 12532)
3. ಆಗಸ್ಟ್ 7 2020 O/W- 20/15 INDIAN OVERSEAS BANK ರೂ 5000
4. ನವೆಂಬರ್ 15 2020 ಶ್ರೀ ರಮೇಶ್ ಕೃಷ್ಣಪ್ಪ ರೂ. 750 (IMPS)

ಮೇಲ್ಕಂಡ ಮಹನೀಯರುಗಳು ಈ ಪ್ರಕಟಣೆಯನ್ನು ಗಮನಿಸಿದ ಕೂಡಲೇ ತಮ್ಮ ವಿಳಾಸವನ್ನು ನಮಗೆ ಜೀಮೇಯ್ಲ್ ಮೂಲಕ ತಿಳಿಸಬೇಕೆಂದು ವಿನಯಪೂರ್ವಕ ಬಿನ್ನಹ. ನಮ್ಮ ಜೀಮೇಯ್ಲ್ ಇಂತಿದೆ. koravanjiaparanji@gmail.com

ಪುಸ್ತಕ ಪರಿಚಯ

# ವ್ಯಂಗ್ಯಚಿತ್ರ– ಚರಿತ್ರೆ

ಲೇಖಕರು: **ಡಾ. ಜೆ. ಬಾಲಕೃಷ್ಣ**
j.balakrishna@gmail.com
ಪ್ರಕಾಶನ: ಅಸೀಮ ಅಕ್ಷರ, ಬೆಂಗಳೂರು –560092

ಪರಿಚಯಿಸಿದವರು : **ಶಿವಕುಮಾರ್**

ಮಾನ್ಯ ಬಾಲಕೃಷ್ಣ ಅವರು ವಿಶ್ವಾಸವಿಟ್ಟು ನನಗೆ ಕಳುಹಿಸಿದ "ವ್ಯಂಗ್ಯಚಿತ್ರ– ಚರಿತ್ರೆ" ಪುಸ್ತಕದ ಮೇಲೆ ಕಣ್ಣಾಡಿಸಿದಾಗ ಇದೊಂದು ಅಪೂರ್ವ ಪುಸ್ತಕ ಎಂದು ಅನ್ನಿಸಿತು. ಕನ್ನಡದಲ್ಲಿ ಇಂತಹ ಪುಸ್ತಕವೊಂದನ್ನು ನಾನು ಮೊಟ್ಟಮೊದಲ ಬಾರಿಗೆ ನೋಡಿದ್ದು. ಸುಮಾರು ಇನ್ನೂರಕ್ಕೂ ಮಿಕ್ಕಿದ ಪುಟಗಳಲ್ಲಿ ವ್ಯಂಗ್ಯಚಿತ್ರಗಳ ಉಗಮ, ಬೆಳೆದು ಬಂದ ದಾರಿ ಇವುಗಳನ್ನು ಬಹು ಸಮರ್ಥವಾಗಿ, ಆಸಕ್ತಿ ಮೂಡಿಸುವ ರೀತಿಯಲ್ಲಿ ಲೇಖಕರು ದಾಖಲಿಸಿದ್ದಾರೆ.

ಈ ಪುಸ್ತಕದ ಹರಹು ಬಹು ವಿಸ್ತಾರ. ಮೂವತ್ತು ಸಾವಿರ ವರ್ಷಗಳಷ್ಟು ಹಿಂದೆ ಆದಿಮಾನವ ಫ್ರಾನ್ಸ್‌ನಲ್ಲಿನ ಚಾವೆಟ್ ಮತ್ತು ಲಾ ಬಾಮ್–ಲೆಟ್ರೋನ್ ಗುಹೆಗಳ ಒಳಗೋಡೆಗಳ ಮೇಲಿನ ಭಿತ್ತಿಚಿತ್ರಗಳ ಉಲ್ಲೇಖದಿಂದ ಈ ಕಥನ ಪ್ರಾರಂಭವಾಗುತ್ತದೆ. ಈ ಕಲೆಗಾರಿಕೆಯ ಮುಂದಿನ ಹಂತವೆಂದರೆ ಗ್ರೀಕ್ ನಾಗರಿಕತೆಯ ಮಡಕೆ ಕುಡಿಕೆಗಳ ಮೇಲಿನ ಚಿತ್ರಕಲೆ. ಸುಮಾರು ಮೂರುಸಾವಿರ ವರ್ಷಗಳ ಹಿಂದಿನ ಗ್ರೀಸ್‌ನ ಪ್ರಾಚೀನ ಕ್ಲಾಸಿಕಲ್ ಮತ್ತು ಹೆಲ್ಲಿನಿಸ್ಟಿಕ್ ಅವಧಿಗಳು ವೈಭವ ನಾಗರೀಕತೆಯ ಅವಧಿಗಳಾಗಿದ್ದವು. ಗ್ರೀಕರು ಮಣ್ಣಿನ ಮಡಕೆ ಕುಡಿಕೆಗಳನ್ನು ದಿನನಿತ್ಯ ಕಾರ್ಯಗಳಲ್ಲಿ ಬಳಸುತ್ತಿದ್ದರು. ಅಂದಿನ ಕಲೆಗಾರರಿಗೆ ಈ ವಸ್ತುಗಳೇ ತಮ್ಮ ಕೌಶಲದ ಪ್ರದರ್ಶನಕ್ಕೆ ಉತ್ತಮ ಮಾಧ್ಯಮಗಳಾಗಿದ್ದವು. ಈ ಗ್ರೀಕ್ ಕುಂಬಾರಿಕೆಯ ಕಲಾವೈಭವದ ವಿವರಣೆಗಾಗಿಯೇ ಮೀಸಲಿಟ್ಟಿರುವ ಒಂದು ಅಧ್ಯಾಯವನ್ನು ಈ ಪುಸ್ತಕದಲ್ಲಿ ಕಾಣಬಹುದು.

ಟಿಪ್ಪು ಬ್ರಿಟಿಷರನ್ನು ಎದುರಿಸುತ್ತಿದ್ದ ದಂತಕತೆಯೂ ಸಹಾ ಟಿಪ್ಪು ವ್ಯಂಗ್ಯಚಿತ್ರದ ವಸ್ತುವಾಗಲು ಪ್ರೇರಣೆ ನೀಡಿತ್ತು. ಟಿಪ್ಪು ಬದುಕಿದ್ದಾಗಲೇ, 1791ರಲ್ಲಿ ಜೇಮ್ಸ್ ಗಿಲ್ ರೇ ಎಂಬ ವ್ಯಂಗ್ಯಚಿತ್ರಕಾರ ಇಂಗ್ಲೆಂಡಿನಲ್ಲಿ 'ದ ಕಮಿಂಗ್ ಆನ್ ಆಫ್ ದ ಮಾನ್ಸೂನ್ ಆರ್ ದ ರಿಟ್ರೀಟ್ ಫ್ರಮ್ ಸೆರಿಂಗಪಟಂ' ಎಂಬ ಶೀರ್ಷಿಕೆಯಡಿಯಲ್ಲಿ ರಚಿಸಿದ ವ್ಯಂಗ್ಯಚಿತ್ರ ಟಿಪ್ಪುವಿನ ಬಗೆಗೆ ಬರೆದ ಜಗತ್ತಿನ ಮೊದಲ ವ್ಯಂಗ್ಯಚಿತ್ರವೆನ್ನಲು ಅಡ್ಡಿಯಿಲ್ಲ.

ಈ ಪುಸ್ತಕದ  ಇನ್ನೊಂದು ಅಧ್ಯಾಯ 1918ರ ಸ್ಪಾನಿಷ್ ಫ್ಲೂ ಸಮಯದಲ್ಲಿ ರಚಿತಗೊಂಡ ವ್ಯಂಗ್ಯಚಿತ್ರಗಳ ಪರಿಚಯ ನೀಡುತ್ತದೆ. ನ್ಯೂಯಾರ್ಕ್ ವರ್ಲ್ಡ್ ಸಂಚಿಕೆಯಲ್ಲಿನ ಚಿತ್ರವೊಂದರಲ್ಲಿ ಬಸ್ಸೊಂದರಲ್ಲಿ ಪ್ರಯಾಣ ಮಾಡುತ್ತಿರುವ ಮುದುಕನೊಬ್ಬ ಕೇವಲ ತನ್ನ ಒಂದು ಸೀನಿನಿಂದ ಕುಳಿತಿದ್ದ ಜನರನ್ನು ಎದ್ದು

ಓಡುವಂತೆ ಮಾಡಿದ್ದು ಬಹು ಚೆನ್ನಾಗಿ ಮೂಡಿಬಂದಿದೆ.

ಹತ್ತೊಂಭತ್ತನೆಯ ಶತಮಾನದಲ್ಲಿ ಡಾರ್ವಿನ್ ತನ್ನ ವಿಕಾಸವಾದವನ್ನು ಮಂಡಿಸಿದಾಗ ಅದು ಒಂದು ಕ್ರಾಂತಿಕಾರಕ ಬೆಳವಣಿಗೆಯೇ ಎನ್ನಬಹುದು. ಆಗ ಚಿತ್ರಕಾರರೆಲ್ಲಾ ಡಾರ್ವಿನ್‌ನನ್ನು ಲೇವಡಿ ಮಾಡಿದ್ದೇ ಮಾಡಿದ್ದು. ಆ ದಿನಗಳಲ್ಲಿ ಹಾರ್ನೆಟ್ ಪತ್ರಿಕೆಯ 1871 ಸಂಚಿಕೆಯೊಂದರಲ್ಲಿ ಡಾರ್ವಿನ್‌ನನ್ನು ಒರಾಂಗುಟಾನ್ ರೀತಿಯಲ್ಲಿ ಚಿತ್ರಿಸಲಾಗಿತ್ತು.


ರಾಜಕೀಯ ವ್ಯಂಗ್ಯಚಿತ್ರಗಳ ಯುಗ ಪ್ರಾರಂಭವಾದಾಗ ಮಹಾತ್ಮ ಗಾಂಧಿಯವರ ಸಾಟಿಯಿಲ್ಲದ ಸ್ವಾತಂತ್ರ ಹೋರಾಟ ಅನೇಕ ವ್ಯಂಗ್ಯಚಿತ್ರಗಳ ರಚನೆಗೆ ಕಾರಣವಾಯಿತು. ರಂಗಾ ಎಂಬ ಖ್ಯಾತ ವ್ಯಂಗ್ಯಚಿತ್ರಕಾರರು ಎರಡೇ ಗೆರೆಗಳಲ್ಲಿ ಗಾಂಧಿಯವರ ಚಿತ್ರವನ್ನು ಮೂಡಿಸಿದ್ದು ಕಲೆಗಾರರ ಪ್ರತಿಭೆಗೆ ನಿದರ್ಶನ. ಈ ಚಿತ್ರ ಅಂದಿನ ಖ್ಯಾತ ವಾರಪತ್ರಿಕೆ ಶಂಕರ್ಸ್ ವೀಕ್ಲಿಯಲ್ಲಿ ಪ್ರಕಟವಾಗಿತ್ತು.

ವ್ಯಂಗ್ಯಚಿತ್ರಗಳ ಚರಿತ್ರೆಯ ಪುಸ್ತಕದಲ್ಲಿ ಆರ್ ಕೆ ಲಕ್ಷ್ಮಣ್ ಇಲ್ಲದಿರಲು ಸಾಧ್ಯವೇ. ಕಪ್ಪು ಹಣವನ್ನು ಹೊರತೆಗೆಯುವ ಪ್ರಯತ್ನಗಳನ್ನು ಲೇವಡಿ ಮಾಡುವ ಲಕ್ಷ್ಮಣ್ ರಚಿತ ಚಿತ್ರವೊಂದು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಅಚ್ಚಾಗಿತ್ತು.

ಬಾಲಕೃಷ್ಣರವರು ಈ ಪುಸ್ತಕದಲ್ಲಿ ವ್ಯಂಗ್ಯಚಿತ್ರ ಕುರಿತಂತೆ ಚಾರಿತ್ರಿಕ ನೋಟ, ನಾಗರಿಕತೆ ಸಾಗಿಬಂದ ದಾರಿಯಲ್ಲಿ ವ್ಯಂಗ್ಯಚಿತ್ರಗಳ ಪಾತ್ರ, ಯುದ್ಧದ ಸನ್ನಿವೇಶ ಮುಂತಾದುವುಗಳನ್ನು ಜಾಗತಿಕವಾಗಿ ಗುರುತಿಸಿಕೊಳ್ಳುವ ಪ್ರಯತ್ನವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಸಂಶೋಧನಾತ್ಮಕ ಗುಣಗಳನ್ನು ಹೊಂದಿರುವ ಈ ಲೇಖನಗಳ ಸಂಗ್ರಹ ವ್ಯಂಗ್ಯಚಿತ್ರಕಲೆಯ ಆಸಕ್ತರಿಗೆ ಒಂದು ಅಮೂಲ್ಯ ಕೊಡುಗೆಯಾಗಿದೆ.




ಹೆರಾಕ್ಲೆಸ್‌ನನ್ನು ಅನುಕರಿಸುವ
ಸಟೈರ್ (ಕ್ರಿ.ಪೂ. 460–450)



ಬೋಳುತಲೆಯ ಉದ್ದನೆ ದಾಡಿಯ
ಡಾರ್ವಿನ್ನನ ಮುಖ ವ್ಯಂಗ್ಯಚಿತ್ರಕಾರರಿಗೆ
ಹೇಳಿ ಮಾಡಿಸಿದಂತಿತ್ತು (ಹಾರ್ನೆಟ್, 1871)




ದ ಕಮಿಂಗ್ ಆನ್ ಆಫ್ ದ ಮಾನ್ಸೂನ್ಸ್ ಆರ್ ದ ರಿಟ್ರೀಟ್ ಫ್ರಂ ಸೆರಿಂಗಪಟಂ
(ಜೇಮ್ಸ್ ಗಿಲ್‌ರೇ, 1791)





ರಂಗಾರವರ ಮಹಾತ್ಮ ಗಾಂಧಿ



ಹೆಣ್ಣು ಮಕ್ಕಳೆಂದರೆ ತಗ್ಗಿ ಬಗ್ಗಿ ನಡೆಯಬೇಕು.
ಇರಾನಿನ ನಾಹಿದ್ ಜಮಾನಿಯವರ ವ್ಯಂಗ್ಯಚಿತ್ರ




ವಿವಾದಕ್ಕೊಳಗಾಗಿ ಎನ್.ಸಿ.ಇ.ಆರ್.ಟಿ. ಪಠ್ಯಪುಸ್ತಕದಿಂದ ತೆಗೆಯಲಾದ
ಆರ್.ಕೆ.ಲಕ್ಷ್ಮಣ್‌ರವರ ವ್ಯಂಗ್ಯಚಿತ್ರ




ಸೀನಿದರೆ ಸೀಟು ದೊರಕುತ್ತದೆ (ನ್ಯೂ ಯಾರ್ಕ್ ವರ್ಲ್ಡ್, 1918)

# ಭೂಮಿ ಮೇಲಿನವರು!

**•ಕುಮುದಾ ಪುರುಷೋತ್ತಮ್**

ನಮ್ಮ ರಾಮಣ್ಣ ಬಿಹಾರದ ಧನ್‌ಬಾದ್ ಬಳಿಯ ಕಲ್ಲಿದ್ದಲು ಗಣಿಯೊಂದರಲ್ಲಿ ಅಧಿಕಾರಿಯಾಗಿದ್ದ. ದಿನದ ಹೆಚ್ಚುವೇಳೆ ಬಲಿಚಕ್ರವರ್ತಿಯಂತೆ ಪಾತಾಳದಲ್ಲೇ ಆಡಳಿತ ನಡೆಸುತ್ತಿದ್ದ. ಎಲ್ಲೋ ಒಮ್ಮೊಮ್ಮೆ ಥೇಟ್ ಬಲಿಚಕ್ರವರ್ತಿಯಂತೆಯೇ ಭೂಮಿಗೆ ಬಂದು ವಿಶ್ರಾಂತಿ ಪಡೆದು ಮತ್ತೆ ಪಾತಾಳಕ್ಕೆ ಹಿಂದಿರುಗುತ್ತಿದ್ದ. ವರ್ಷಕ್ಕೊಮ್ಮೆ ರಜೆಯಲ್ಲಿ ಊರಿಗೆ ಬಂದಾಗ ಅವನಗೆ ಎಲ್ಲವೂ ಅತಿಶಯವೆನಿಸುತ್ತಿತ್ತು. ಬಂಧುಗಳು ಮನೆಗೆ ಬಾ ಎಂದು ಕರೆದೊಡನೆ ತಪ್ಪದೇ ಅವರಲ್ಲಿಗೆ ಹೋಗಿ ಬರುತ್ತಿದ್ದ.

"ನಾಳೆ ಶೇಶಕ್ಕನ ಮನೆಗೆ ಊಟಕ್ಕೆ ಹೋಗುತ್ತಿದ್ದೇನೆ. ಮಾರ್ಕೆಟ್ಟಿನಲ್ಲಿ ಸಿಕ್ಕಿ ಬಾ ಅಂದ್ಲು." ಎಂದ ಒಮ್ಮೆ.

"ಅವಳು ಹೇಳಿದ್ದು ಸರಿಯಾಗಿ ಕೇಳಿಸ್ಕೊಂಡ್ಯೇನೋ? ಅವಳ ಕೈ ಬಿಗಿ. ಹಾಗೆಲ್ಲಾ ಊಟಕ್ಕೆ ಕರೆಯೋವ್ಳಲ್ಲಾ. ನಾಳೆ ಊಟಕ್ಕೆ ಬಾ ಅಂತ ಬಾಯಿ ಬಿಟ್ಟು ಸ್ಪಷ್ಟವಾಗಿ ಹೇಳಿದ್ಲಾ?" ಅನುಮಾನದಿಂದ ಕೇಳಿದೆ.

"ಊಟಕ್ಕೇಂತ ಪ್ರತ್ಯೇಕವಾಗಿ ಹೇಳ್ಲಿಲ್ಲಾ ಒಪ್ದೆ. ಮನೇಗೆ ಬಾ ಅಂದ್ಲು. ಯಾವಾಗ ಬರ್ಲಿ ಅಂತ ಕೇಳಿದ್ದಕ್ಕೆ ಯಾವಾಗ ಬೇಕಾದ್ರೂ ಬಾ. ನನ್ನ ಮನೆ ಬಾಗಿಲು ನಿನಗ್ಯಾವಾಗ್ಲೂ ತೆರೆದಿರುತ್ತೆ ಅಂದ್ಲು. ಹಾಗಾದ್ರೆ ಮಧ್ಯರಾತ್ರಿ ಹನ್ನೆರಡಕ್ಕೆ ಬರ್ಲಾ ಅಂತ ತಮಾಶೆ ಮಾಡಿ ಕೇಳ್ದೆ. ಬೇಡ ರಾತ್ರಿ ಯಾಕೆ ಮಧ್ಯಾಹ್ನ ಹನ್ನೆರಡಕ್ಕೇ ಬಾ ಅಂದ್ಲು. ಮಧ್ಯಾಹ್ನ ಹನ್ನೆರಡು ಅಂದ್ರೆ ಇನ್ನೇನು? ಊಟಕ್ಕೇಂತಾನೇ ಅರ್ಥ. ನಾಳೆ ಹೋಗ್ತಾಇದ್ದೀನಿ" ಎಂದ ರಾಮಣ್ಣ.

ಮರು ಮುಂಜಾನೆ ನಸುಕಿನಲ್ಲೆದ್ದು ಸ್ನಾನ ಮುಗಿಸಿ ಸಿದ್ಧವಾದ. ಅವನಿಗೆ ಅಂದು ಇನ್ನಿಲ್ಲದ ಸಂಭ್ರಮ. "ಪಾಪ ಶೇಶಕ್ಕ. ನಿಮಗೆಲ್ಲಾ ಅವಳ ಬಗ್ಗೆ ದುರಾಗ್ರಹ. ನನ್ನನ್ನು ಕಂಡ್ರೆ ಬಹಳ ವಿಶ್ವಾಸ. ನನಗಾಗಿ ಅದಿನ್ನೆಷ್ಟು ವಿಧ ಅಡುಗೆ ಮಾಡಿರ್ತಾಳೋ. ನಾನದಕ್ಕೆ ನ್ಯಾಯ ಒದಗಿಸಬೇಕು. ಅದಕ್ಕೇ ನನಗಿವತ್ತು ನಾಷ್ಟಾ ಬೇಡ" ಎಂದು ಖಾಲಿ ಹೊಟ್ಟೆಯಲ್ಲಿ ಶೇಶಕ್ಕನ ಮನೆಬಾಗಿಲು ಹನ್ನೆರಡಕ್ಕೆ ಸರಿಯಾಗಿ ತಟ್ಟಿದ. ಸುಮಾರು ಬಾರಿ ತಟ್ಟಿದರೂ ಶೇಶಕ್ಕ ಬಾಗಿಲು ತೆರೆಯಲೇ ಇಲ್ಲ, ನಿರಾಸೆಯಿಂದ ಹಿಂದಿರುಗುವುದರಲ್ಲಿದ್ದಾಗ ನಿದ್ದೆಗಣ್ಣಿನ ಶೇಶಕ್ಕ ಆಕಳಿಸುತ್ತಾ ಬಂದು ಬಾಗಿಲು ತೆರೆದಳು. ರಾಮಣ್ಣ ಒಳಗೆ ಹೋದರೆ ಭಾವ ಹಾಲಿನ ಮಧ್ಯದಲ್ಲಿ ಚಾಪೆ ಹಾಸಿ ಶಾಲು ಹೊದ್ದು ಗೊರಕೆ ಕಛೇರಿ ನಡೆಸುತ್ತಿದ್ದಾರೆ!

"ಭಾವನ್ಗೆ ಹುಶಾರಿಲ್ವಾ? ಊಟದ ಹೊತ್ತಲ್ಲಿ ಮಲ್ಗಿದ್ದಾರೆ?"

ಶೇಶಕ್ಕ ನಕ್ಕಳು. "ನಿನಗೀಗ ಊಟದ ಹೊತ್ತೇನೋ? ತಮಾಶೆ ಮಾಡ್ತೀಯಾ? ಈವತ್ತು ದ್ವಾದಶಿ ಅಂತ ಮರೆತುಹೋಯ್ತಾ? ಒಂಬತ್ತಕ್ಕೆಲ್ಲಾ ಪಾರಣೆ ಮುಗ್ಸಿ ಇಬ್ರೂ ಮಲ್ಗಿದ್ವು. ನೀ ಬಂದು ಎಚ್ಚರಿಸದಿದ್ದರೆ ಇನ್ನೂ ಮಲ್ಗಿರ್ತಿದ್ದೆ."

ರಾಮಣ್ಣನೇನು ಕಮ್ಮಿ? ತನ್ನ ಪಟ್ಟೊಂದನ್ನು ಹಾಕಿದ.

"ನೀನು ಪಾರಣೆ ಅಂತ ಮೊದ್ಲೇ ಹೇಳಿದ್ರೆ ಒಂಬತ್ತಕ್ಕೇ ಬರ್ತಿದ್ದೆ. ಈಗೇನಾಯ್ತು ಬಿಡು. ಬೆಳಗ್ನಿಂದ ಏಕಾದಶಿ ಆಗಿದೆ. ಈಗ ಪಾರಣೆ ಮಾಡ್ತೀನಿ ಎಲೆ ಹಾಕು" ಎಂದು ಕೈಕಾಲು ತೊಳೆಯಲು ಮೇಲೆದ್ದ. ಶೇಶಕ್ಕ ಏನು ಕಮ್ಮಿ? ಮರು ಪಟ್ಟು ಹಾಕಿದಳು. "ವನವಾಸದಲ್ಲಿದ್ದ ಪಾಂಡವರ ಮನೆಗೆ ದೂರ್ವಾಸ ಮುನಿಗ್ಳು

ಬಂದ್ಹಂಗಾಯ್ತು. ಖಾಲಿಯಾಗಿದ್ದ ಪಾತ್ರೆಗಳ್ನ ಚೊಕ್ಕಟವಾಗಿ ತೊಳೆದು ಬೋರಲು ಹಾಕಿದ್ದೀನಿ".

ಹಾಲಿನಲ್ಲಿ ಮಲಗಿ ನಿದ್ರಿಸುವಂತೆ ನಟಿಸುತ್ತಿದ್ದ ಭಾವ ಈಗ ಎದ್ದು ಕುಳಿತರು. "ಶೇಶೂ, ನಿನ್ನ ತಮ್ಮ ಅಪರೂಪಕ್ಕೆ ಬಂದಿದ್ದಾನೆ. ಅದೂ ಊಟದ ವೇಳೆಗೆ ಸರ್ರ್ಯಾಗಿ. ಪಾತ್ರೆ ಖಾಲಿಯಾದ್ರೆ ಏನಾಯ್ತು? ಒಳಗೆ ಹೋಗಿ ದೊಡ್ಡ ಲೋಟದಲ್ಲಿ ಬಿಸಿ ಹಾಲಾದ್ರೂ ತಂದ್ಕೊಡು. ಸಕ್ರೆ ಹಾಕೋದು ಮರೀಬೇಡ" ಎಂದು ಆಜ್ಞಾಪಿಸಿದರು ಕಂತೆಗೆ ತಕ್ಕ ಬೊಂತೆಯಾಗಿದ್ದ ಭಾವ. ಹಸಿದ ಹೊಟ್ಟೆಗೆ ಯಾವ್ದೋ ಒಂದು ಎಂದುಕೊಂಡು ಹಾಲಿಗಾಗಿ ಕಾಯುತ್ತ ಕುಳಿತ ರಾಮಣ್ಣ. ಒಂದು ಪಾವು ಲೋಟದ ತುಂಬಾ ಹೊಗೆಯಾಡುತ್ತಿದ್ದ ಬಿಸಿಹಾಲು ತಂದು ಶೇಶಕ್ಕ ಮುಂದೆ ಹಿಡಿದಳು. ಒಂದೇ ಒಂದು ಗುಟುಕು ಕುಡಿದ ಅಷ್ಟೇ. ಅದೇನಾಯ್ತೋ. ಲೋಟ ಅಲ್ಲಿಟ್ಟು ವಾಶ್ ಬೇಸನ್ನಿಗೆ ಓಡಿ ವಾಂತಿ ಮಾಡಿ ಬಾಯ್ತೊಳೆದು ಬಂದ.

" ಶೇಶಕ್ಕ, ಹಾಲು ಗಂಜಲದ ವಾಸ್ನೆ. ಅಸಯ್ಯ, ಕುಡೀಲಿಕ್ಕೆ ಆಗ್ತಿಲ್ಲ" ಉಗ್ಗಡಿಸಿದ.

"ರಾಮೂ, ನಿಂಗೂ ವಾಸ್ನೆ ಬಂತೇನೋ? ಬೆಳಗ್ನಿಂದ ಗಂಜಲದ ವಾಸ್ನೆ ಅಂತ ಮಕ್ಕಳು ಯಾರೂ ಹಾಲೇ ಕುಡ್ದಿಲ್ಲ. ಕರೆದಿದ್ದ ಹಾಲು ಪಾತ್ರೆ ತುಂಬ ಹಾಗೇ ಕೂತಿದೆ. ಚೆಲ್ಲಬೇಕಲ್ಲಾಂತ ಸಂಕ್ಟ ಅಗ್ತಿತ್ತು. ನೀನಾದ್ರು ಕುಡೀತಿಯೇನೋ ಅಂತ ಆಸೆಯಿಂದ ಕೊಟ್ಟೆ. ಹಾಲು ವರ್ತನೆಯ ಸಿದ್ದಮ್ಮ ಹಾಲು ಕರೆಯೋ ಮುನ್ನ ಕೆಚ್ಚಲು ಸರಿಯಾಗಿ ತೊಳೆದಿಲ್ಲಾಂತ ಕಾಣುತ್ತೆ. ಸೋಂಬೇರಿ. ಈ ಸಲ ಹಣ ಹಿಡ್ಕೊಂಡು ಬುದ್ಧಿ ಕಲಿಸ್ತೀನಿ" ಎಂದ ಧಾರಾಳಿ ಶೇಶಕ್ಕ ಲೋಟದ ಹಾಲನ್ನು ಚರಂಡಿಗೆ ಸುರಿಯಲು ಹೋದಳು.

ಮನೆಗೆ ಬಂದ ರಾಮಣ್ಣ ನಾ ಕಲೆಸಿಕೊಟ್ಟ ಮೊಸರನ್ನ ಉಪ್ಪಿನಕಾಯನ್ನು ಚಪ್ಪರಿಸಿ ತಿಂದ. ಹೋಗುವ ಮುನ್ನ ಅವ ಹೇಳಿದ್ದಿದು. "ಭೂಮಿ ಮೇಲಿರೋ ನಾಗರಿಕರಿಗಿಂತ ನನ್ನೂರ ಪಾತಾಳವಾಸಿ ಕಾರ್ಮಿಕರೇ ಎಷ್ಟೋ ಸುಸಂಸ್ಕೃತರು. ಚಾಯ್ ಪೀವೋ ಸಾಬ್ ಎಂದು ಫ್ಲಾಸ್ಕಿನಿಂದ ಸುರಿದು ತಮ್ಮ ಪಾಲನ್ನು ನನ್ನೊಂದಿಗೆ ಹಂಚ್ಕೊತಾರೆ."

■

---

# ಕೋಣನ ಮುಂದೆ ಕಿನ್ನರಿ

(ಸುಭಾಷಿತ ಚಮತ್ಕಾರ)

ನೂರೊಂದು ಕಷ್ಟಗಳ ಹಣೆಯಲ್ಲಿ ಬರೆ ವಿಧಿಯೆ
ಎಲ್ಲ ಸೈರಿಸುವೆ ನಾ ತುಟಿಯ ಬಿಚ್ಚದೆಲೆ :
ರಸವರಿಯದವರೆದುರು ಕವಿತೆಯೋದುವದೊಂದ
ಬರೆಯದಿರು ಬರೆಯದಿರು ಬರೆಯದಿರು ನನಗೆ

ಇತರದುಃಖಶತಾನಿ ಯಥೇಚ್ಛಯಾ
ವಿಲಿಖ ತಾನಿ ಸಹೇ ಚತುರಾನನ ।
ಅರಸಿಕೇಷು ಕವಿತ್ವನಿವೇದನಂ
ಶಿರಸಿ ಮಾ ಲಿಖ ಮಾ ಲಿಖ ಮಾ ಲಿಖ ॥

**ಪಾ.ವೆಂ.ಆಚಾರ್ಯ**

# ಹೊಸ ವರುಷ; ಹಳೆಯ ನೆನಪುಗಳು.

**●ಸಿ.ಆರ್.ಸತ್ಯ**

ಯಾಕೋ ಏನೋ ಅಬ್ದುಲ್ ಕಲಾಂ ಅವರೊಡನೆ ಕಳೆದ ಕೆಲವು ರಸ ನಿಮಿಷಗಳು ಜ್ಞಾಪಕಕ್ಕೆ ಬರುತ್ತಿವೆ!

ಕೇರಳದ ತಿರುವನಂತಪುರದ ಬಳಿಯಲ್ಲಿ ಇರುವ "ತುಂಬಾ" ಎಂಬ ಬೆಸ್ತರ ಹಳ್ಳಿ ಭಾರತದ ಬಾಹ್ಯಾಕಾಶ ತಂತ್ರಜ್ಞಾನದ ಉಗಮ ಸ್ಥಳ. ಇಲ್ಲಿಯೇ ಭಾರತದ ಬಾಹ್ಯಾಕಾಶ ಪಿತಾಮಹ ಡಾ.ವಿಕ್ರಂ ಸಾರಾಭಾಯಿ, ಡಾ.ಅಬ್ದುಲ್ ಕಲಾಂ ಇಂತಹವರ ನೇತೃತ್ವದಲ್ಲಿ ಇಂದು "ಇಸ್ರೋ" ಬಳಸುವ ಮೂಲ ತಂತ್ರಜ್ಞಾನಗಳೆಲ್ಲಾ ಮೂಡಿ ಬಂದದ್ದು. ಆಗ ಅಬ್ದುಲ್ ಕಲಾಂ ಅವರೊಡನೆ ರಾಕೆಟ್ ಎಂಜಿನಿಯರ್ ಆಗಿ ಕೆಲಸ ಮಾಡುವ ಸುಯೋಗ ನನ್ನದಾಗಿತ್ತು. ಅಲ್ಲಿ ನಡೆದ ಕೆಲವು ಲಘು ಘಟನೆಗಳನ್ನು ಈಗ ಮೆಲುಕು ಹಾಕುತ್ತಿದ್ದೇನೆ.

ನಾನು ಅವರ ಕೆಳಗೆ ಒಬ್ಬ ರಾಕೆಟ್ ಎಂಜಿನಿಯರ್ ಆಗಿ ಸೇರಿದ್ದೇ ಒಂದು ಆಕಸ್ಮಿಕ ಸಂಗತಿ ಎನ್ನಬೇಕು. ನನ್ನ ಎಂಜಿನಿಯರ್ ವಿದ್ಯಾಭ್ಯಾಸ ಮುಗಿದ ಮೇಲೆ ಅಣು ಶಕ್ತಿ ಇಲಾಖೆಯು ನಡೆಸುತ್ತಿದ್ದ ಸ್ನಾತಕೋತ್ತರ ಮಟ್ಟದ ತರಬೇತಿ ಪಡೆದು, "ತುಂಬಾ" ರಾಕೆಟ್ ಕೇಂದ್ರಕ್ಕೆ ನನ್ನ ಇನ್ನೊಬ್ಬ ಸಹೋದ್ಯೋಗಿ ರಾವ್ ಅವರೊಡನೆ ವರ್ಗಾವಣೆ ಆದೆ. ಆಗ ಈ ಕೇಂದ್ರ (ಟರ್ಲ್ಸ್: ತುಂಬಾ ಈಕ್ವಟೋರಿಯಲ್ ರಾಕೆಟ್ ಲಾಂಚಿಂಗ್ ಸ್ಟೇಶನ್) ಅಣುಶಕ್ತಿ ಇಲಾಖೆಯ ಕೆಳಗೇ ಇತ್ತು. ಟ್ರಿವೇಂಡ್ರಂನಲ್ಲಿ ಬಂದು ಇಳಿದ ಮಾರನೆಯ ದಿನ, ರಾವ್ ಮತ್ತು ನಾನು, ಊರ ಬಸ್ಸನ್ನು ಹತ್ತಿ ತುಂಬಾಗೆ ಬಂದಿಳಿದೆವು, ಆ ಬೆಸ್ತರ ಹಳ್ಳಿಯಲ್ಲಿದ್ದ ಒಂದು ಚರ್ಚ್‌ನಲ್ಲಿ ಸ್ಥಾಪಿತವಾಗಿದ್ದ ರಾಕೆಟ್ ಉಡಾವಣ ಕೇಂದ್ರದ ಕಛೇರಿಗೆ ಹೋದೆವು. ಸಂಸ್ಥೆಯ ನಿರ್ದೇಶಕ ಎಚ್. ಜಿ.ಎಸ್. ಮೂರ್ತಿ ಅವರು ನಮ್ಮಿಬ್ಬರನ್ನೂ ಒಳಕ್ಕೆ ಬರಹೇಳಿದರು. ಅಲ್ಲಿ ಹೋದಾಗ ಅವರ ಬಲಭಾಗಕ್ಕೆ ಸ್ವಲ್ಪ ದೃಢಕಾಯರಾಗಿದ್ದ ಬೆಳ್ಳಗಿನ ವ್ಯಕ್ತಿಯೊಬ್ಬರು, ಅವರ ಎಡಭಾಗಕ್ಕೆ ಸಣ್ಣಗೆ ಕಪ್ಪು ಬಣ್ಣದ ಕುಳ್ಳ ವ್ಯಕ್ತಿ ಒಬ್ಬರು ಕುಳಿತಿದ್ದರು. ಮೂರ್ತಿ ಅವರು, ಸರಿ ಈ ಇಬ್ಬರಲ್ಲಿ ನಿಮಗೆ ಯಾರು ಬೇಕೋ, ಅವರನ್ನು ನೀವೇ ಆಯ್ಕೆ ಮಾಡಿಕೊಳ್ಳಿ ಎಂದರು. ತಕ್ಷಣ (ಯಾಕೆಂದು ತಿಳಿಯದು!) ಬಲಗಡೆ ಇದ್ದ ವ್ಯಕ್ತಿ 'ನನ್ನ ಇಲಾಖೆಗೆ ರಾವ್ ಇರಲಿ' ಎಂದರು. ಮೂರ್ತಿ ಇನ್ನೊಬ್ಬರ ಕಡೆ ತಿರುಗಿದರು. ಅವರು, 'ಇರುವುದೇ ಇಬ್ಬರು. ಒಬ್ಬರನ್ನು ಆಗಲೇ ಆಯ್ಕೆ ಮಾಡಿ ಆಯಿತು . ನನಗಿನ್ಯಾವ ಆಯ್ಕೆ ಇದೆ?. ಸತ್ಯ, ನೀವು ನನ್ನ ಇಲಾಖೆಗೆ ಸೇರಿ. ನನ್ನ ಹೆಸರು ಅಬ್ದುಲ್ ಕಲಾಂ' ಎಂದು ಹೇಳುತ್ತಾ ಮೇಲೆದ್ದು ಕೈ ಕುಲುಕಿದರು! ಈ ಹಸ್ತಲಾಘವದಿಂದ ಮೂಡಿ ಬಂದ ಅವರೊಡನೆಯ ಬಾಂಧವ್ಯ ಅವರು ದೈವಾಧೀನರಾಗುವವರೆಗೂ ಗಟ್ಟಿಯಾಗೇ ಉಳಿಯಿತು. ಅವರ ಕೆಳಗೆ ಒಬ್ಬ ರಾಕೆಟ್ ಎಂಜಿನಿಯರ್ ಆಗಿ ಅನಂತರ ನಾನಾ ಜವಾಬ್ದಾರಿಗಳನ್ನು ಹೊತ್ತ ನನ್ನನ್ನು ಅವರು ಸ್ನೇಹಿತನಾಗಿಯೇ ಕೊನೆಯವರೆಗೆ ಕಂಡದ್ದು; ಅವರು ಬದುಕಿರುವ ತನಕ ನನ್ನನ್ನು 'ಸತ್ಯ' ಎಂದು ಕರೆಯಲೇ ಇಲ್ಲ–ಅವರು ನನಗಿಟ್ಟ ನಾಮಧೇಯ 'ಬಡ್ಡೀ'( Buddy)!

ಪ್ರಾರಂಭದಲ್ಲಿ ನನಗೆ ಎರಡು ರೀತಿಯ ಕೆಲಸಗಳನ್ನು ಕೊಟ್ಟರು. ಒಂದು: ಆ ಕೇಂದ್ರದಿಂದ ಉಡಾವಣೆ ಆಗುತ್ತಿದ್ದ ಅನೇಕ ಬಗೆಯ ರಾಕೆಟ್ ಗಳಿಗೆ ವಿಜ್ಞಾನಿಗಳಿಗೆ ಅವಶ್ಯವುಳ್ಳ ಅವರ ಸಲಕರಣೆಗಳನ್ನು ರಾಕೆಟ್‌ನ ಮೂತಿ, (ನೋಸ್ ಕೋನ್) ನಲ್ಲಿ ಅಳವಡಿಸಿ, ಆ ನೋಸ್ ಕೋನ್ ಭಾಗವನ್ನೇ ಅವಕ್ಕೆ ಅನುಗುಣವಾಗಿ ವಿನ್ಯಾಸ ಮಾಡಿ ಅದರೊಳಗೆ ಇತರ ಎಲೆಕ್ಟ್ರಾನಿಕ್ ಮತ್ತು ಇನ್ನು ಕೆಲವು ಉಪವ್ಯವಸ್ಥೆಗಳನ್ನು ಜೋಡಿಸಿ, ಕೊನೆಗೆ ಅದನ್ನು ರಾಕೆಟ್‌ಗೆ ಜೋಡಣೆ ಮಾಡುವುದು. ಎರಡನೆಯದು: ಬಾಹ್ಯಾಕಾಶ ಕ್ಷೇತ್ರಕ್ಕೆ ಅವಶ್ಯವಾಗಿದ್ದ "ಸಮ್ಮಿಶ್ರ ವಸ್ತು"ವಿನ ತಂತ್ರಜ್ಞಾನವನ್ನು ಸ್ಥಳೀಯವಾಗಿ ವೃದ್ಧಿಪಡಿಸುವುದು. ಹೀಗೆ ಅವರೊಡನೆ ಆದ ಒಡನಾಟದ ಬಗ್ಗೆ ಹೇಳುವುದು ಬಹಳವಿದ್ದರೂ, ಅವರ ವ್ಯಕ್ತಿತ್ವದ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡಲೇ ಬೇಕೆನ್ನಿಸುತ್ತದೆ.

ಅವರೊಬ್ಬ ಕರ್ಮಯೋಗಿ. ನಾವು ತಿರುವನಂತಪುರಕ್ಕೆ ಹೋದಾಗ ಬ್ರಹ್ಮಚಾರಿಗಳಾಗಿದ್ದೆವಷ್ಟೆ. ನಾವೆಲ್ಲರೂ ಅಲ್ಲಿಯ ಒಂದು ಲಾಡ್ಜ್ ವಾಸಿಗಳಾಗಿದ್ದೆವು. ನಮ್ಮ ಜೊತೆ ಕಲಾಂ ಅವರೂ ಅಲ್ಲಿಯೇ ಇದ್ದರು. ಅವರ ವಿಭಾಗದಲ್ಲಿದ್ದ ನನಗೆ ಮಿಕ್ಕ ಎಂಜಿನಿಯರುಗಳಿಗೆ ಇದ್ದಂತೆ ಆಫೀಸಿಗೆ ಹೋದರೆ ಲಾಡ್ಜ್ ಗೆ ಬರುವ ಯೋಚನೆಯೇ ಬರುತ್ತಿರಲಿಲ್ಲ. ಕಾರಣ ಇಷ್ಟೆ. ಕಲಾಂ ದಿನಕ್ಕೆ ಕನಿಷ್ಟ 12–14 ಗಂಟೆಗಳಷ್ಟು ಕೆಲಸ ಮಾಡಲೇ ಬೇಕು. ನಾವು ಅವರ ಶಿಷ್ಯರಲ್ಲವೇ? ಅವರೊಡನೆ ನಾವೂ ಇರಲೇಬೇಕು. ಏನೂ ಸೌಲಭ್ಯವಿಲ್ಲದ ಅಂದಿನ ತುಂಬಾ ಕೇಂದ್ರದಲ್ಲಿ ನಮಗೆ ದೊರೆಯುತ್ತಿದ್ದ ಆಹಾರವೆಂದರೆ ಕಟ್ಟಂ ಚಾಯ, ಕೇರಳದ ತಿಂಡಿ ಉನ್ನಿಅಪ್ಪಮ್ ಹೀಗೆ. ಇಂತಹ ಬ್ರಹ್ಮಚಾರಿ ಜೀವನ ಶೈಲಿಯಿಂದ ನಮಗೆಲ್ಲರಿಗೂ ಹೆಚ್ಚು ಕಮ್ಮಿ 'ಅಸಿಡಿಟಿ' ತೊಂದರೆ ಇತ್ತೆಂದರೆ ಉತ್ಪ್ರೇಕ್ಷೆಯೇನಲ್ಲ. ಕೆಲವೊಮ್ಮೆ ನಾವು ರಾತ್ರಿ 11 ಅಥವಾ 12 ಗಂಟೆ ವೇಳೆಗೆ ಕೆಲಸದಿಂದ ಮರಳಿದಾಗ ಏನಾದರೂ ತಿನ್ನಲು ಒಂದೋ ಎರಡೋ ಚಿಕ್ಕ 'ಚಾಯ' ಹೋಟೆಲ್‌ಗಳೇ ತೆಗೆದಿರುತ್ತಿದ್ದವು. ನಮ್ಮ ತರಹ ಕಲಾಂ ಕೂಡ ಶಾಖಾಹಾರಿಯೇ! ಮಾಣಿ ನಮ್ಮ ಟೇಬಲ್‌ಗೆ ಬಂದಾಗ, ತಿನ್ನೋದಕ್ಕೆ ಅದಿದೆಯೇ? ಇದಿದೆಯೇ? ಅಂತ ಕಲಾಂ ಕೇಳುತ್ತಿದ್ದರೆ, ಅದಕ್ಕೆ ಅವನು ಇಲ್ಲ, ಇಲ್ಲ ಅಂತ ತಲೆ ಅಲ್ಲಾಡಿಸುತ್ತಿದ್ದ. ಒಂದು ದಿನ ಹಸಿವಿನಿಂದ ರೇಗಿದ ಕಲಾಂ, "ಸರಿ, ಹಾಗಾದರೆ ನಮಗೆಲ್ಲರಿಗೂ ಒಂದು ಪ್ಲೇಟ್ 'ಇಲ್ಲ'ನೇ ಕೊಡು ಅಂತ ಗುಡುಗಿದರು. ಮಾಣಿ ತಬ್ಬಿಬ್ಬಾದ!

ಒಂದೇ ಬಾರಿ ಕಲಾಂ, ನಾನು, ಮತ್ತಿಬ್ಬರು ಬ್ರಹ್ಮಚಾರಿಗಳು ಮೂರು ದಿನಗಳ ಕಾಲ ಕೊಡೈಕೆನಾಲ್‌ಗೆ ರಜದ ಮೇಲೆ ಹೋಗಿದ್ದೇವಷ್ಟೆ. ಆದರೆ ಅಲ್ಲಿ ಆದ ಅನುಭವವೇ ಬೇರೇ ರೀತಿಯದು! ಕೊಡೈನಲ್ಲಿ ಹೋಟೆಲ್ ರಾಜಾ ಎಂಬಲ್ಲಿ ಮುಂಗಡವಾಗಿಯೇ ನಮ್ಮ ರೂಮುಗಳನ್ನು ಕಾದಿರಿಸಿದ್ದೆವು. ಅಲ್ಲಿ ತಲುಪಿದಾಗ ಹೋಟೆಲ್ ಲಾಬಿಯಲ್ಲಿ ಹೆಸರು ನೋಂದಾಯಿಸಿ ರೂಮುಗಳ ಬೀಗದ ಕೈಗಳನ್ನು ಪಡೆಯಲು ಸುಮಾರು ಗಿರಾಕಿಗಳು ನಿಂತಿದ್ದರು. ನೋಡಿದರೆ ಅವರೆಲ್ಲರೂ ಆಗ ತಾನೇ ಮದುವೆಯಾಗಿ ಮಧುಚಂದ್ರಕ್ಕೆಂದು ಬಂದ ನವ ವಧುವರರೇ ಆಗಿದ್ದರು! ಮ್ಯಾನೇಜರ್ ಅವರಿಗೆ ರೂಮಿಗೆ ಸೇರಲು ಆದ್ಯತೆ ಕೊಡುತ್ತಿದ್ದ. ಹೀಗಾಗಿ ನಮ್ಮ ನಮ್ಮ ರೂಮುಗಳಿಗೆ ಸೇರಿಕೊಳ್ಳಲು ಸುಮಾರು ಹೊತ್ತೇ ಅಲ್ಲಿ ಕಾದು ನಿಂತಿದ್ದೆವು.

ಮಾರನೆಯ ದಿನ ಬೆಳಿಗ್ಗೆ ಉಪಹಾರಕ್ಕೆಂದು ರೆಸ್ಟೋರೆಂಟ್‌ಗೆ ಬಂದರೆ, ಅಲ್ಲೂ ಅದೇ ಕತೆಯೇ!. ಎಲ್ಲಾ ಟೇಬಲ್‌ಗಳಲ್ಲೂ ಹನಿಮೂನ್ ಜೋಡಿಗಳೇ ಕೂತಿದ್ದರು. ನಮ್ಮ ಸರದಿ ಬಂದು ನಮಗೆ ಒಂದು ಟೇಬಲ್ ಸಿಗುವುದಕ್ಕೆ ಮುಕ್ಕಾಲು ಗಂಟೆಯ ಕಾಲ ಕಾಯಬೇಕಾಯಿತು. ನಮ್ಮ ಈ ತಾಪತ್ರಯ ಇನ್ನೂ ಮುಂದುವರೆಯಿತು. ಹೋಟೆಲ್‌ನವರೇ ನಮಗೆಲ್ಲಾ ಊರು ಸುತ್ತಿಸಲು ಅವರದೇ ಒಂದು ಬಸ್ ಅನ್ನು ವ್ಯವಸ್ಥೆ ಮಾಡಿದ್ದರು. ಉಪಹಾರವಾದ ಮೇಲೆ ಎಲ್ಲರನ್ನೂ ಅದರಲ್ಲಿ ಕೂರಲು ಹೇಳಿದರು. ಬಸ್‌ನೊಳಗೆ ಹತ್ತಿದರೆ, ಅಲ್ಲೂ ನಮಗೆ ತೊಂದರೆ ಕಾದಿತ್ತು. ಇದ್ದ ಸೀಟುಗಳಲ್ಲೆಲ್ಲಾ ಹನಿಮೂನ್ ಜೋಡಿಗಳೇ ತುಂಬಿದ್ದರು. ನಾವು, ಅಂದರೆ, ಅವರೊಡನೆ ಇದ್ದ ಏಕಮಾತ್ರ ಬ್ರಹ್ಮಚಾರಿ ಗುಂಪು, ನಿಂತುಕೊಂಡೇ ಊರು ಸುತ್ತಬೇಕಾಯಿತು! ಈ ಘಟನೆಯಿಂದ ನಮಗೆ ಆದ ಬೇಜಾರು ಅಷ್ಟಿಷ್ಟಲ್ಲ. ಏನಾದರೂ ಇನ್ನೊಮ್ಮೆ ಈ ಕೊಡೈಕೆನಾಲ್‌ಗೆ ಬಂದರೆ, ನಾವು ಮದುವೆಯಾದ ಮೇಲೇ ಬರಬೇಕು ಅಂತ ನಿರ್ಧಾರ ಮಾಡಿದೆವು. ಆದರೆ, ನಂತರ, ಈ ನಿರ್ಧಾರ ನಮ್ಮಲ್ಲಿ ಮೂರು ಜನರಿಗೆ ಮಾತ್ರ ಅನ್ವಯವಾಯಿತು. ಕಲಾಂ, ಜೀವನ ಪರ್ಯಂತ ಬ್ರಹ್ಮಚಾರಿಯಾಗೇ ಉಳಿದರು! ನಾವುಗಳು ಮದುವೆಯೇನೋ ಮಾಡಿಕೊಂಡು ನಮ್ಮ ನವ ವಧುಗಳಿಗೆ ಮನೆಯ ಅಡುಗೆಮನೆ ಬಿಟ್ಟು ಕೊಟ್ಟರೂ, ಕೆಲಸದ ಒತ್ತಡದಿಂದ ಮನೆಗೆ ಬಂದು ಊಟ ಮಾಡಲೂ ಅವಕಾಶ ಸಿಕ್ಕುತ್ತಿರಲಿಲ್ಲ. ಬೇಸರಗೊಂಡ ನಮ್ಮ ಪತ್ನಿಯರು ಒಮ್ಮೆ ಕಲಾಂ ಮುಂದೆ ಚಿಕ್ಕ 'ಧರಣಿ' ನಡೆಸಿ ನಮ್ಮ ಗಂಡಂದಿರನ್ನು ನಮಗೆ ಬಿಟ್ಟುಕೊಡಿ ಎಂದು ಕೇಳಿದಾಗ, ಕಲಾಂ ನಾಚಿಕೆಯಿಂದ ಅಲ್ಲಿಂದ ಕಣ್ಮರೆಯಾದರು!

ಒಂದು ರಾಕೆಟ್ ಉಡಾವಣೆ ಕೆಲವು ವೈಜ್ಞಾನಿಕ ಕಾರಣದಿಂದಾಗಿ ವಿಜ್ಞಾನಿ ಹೇಳಿದ್ದ ಒಂದು ನಿರ್ದಿಷ್ಟ ದಿನ, ನಿರ್ದಿಷ್ಟ ಸಮಯಕ್ಕೆ ಸರಿಯಾಗಿ ಆಗಬೇಕಿತ್ತು. ಈ ಸಮಯದಲ್ಲಿ ಅವರು ವಿಶ್ಲೇಷಣೆ ಮಾಡುತ್ತಿದ್ದಆಕಾಶದ ಒಂದು ನಿರ್ದಿಷ್ಟ ಜಾಗದಲ್ಲಿ,ಒಂದು ನಕ್ಷತ್ರ ಕಾಣುವುದರ ಮೇಲೆ ಅವಲಂಬಿತವಾಗಿತ್ತು. ಆದರೆ, ಏನೇನೋ ಕಾರಣಗಳಿಂದ, ನಮ್ಮ ಕೆಲಸ ಮಂದಗತಿಯಲ್ಲಿ ಸಾಗುತ್ತಿತ್ತು. ಇದರಿಂದ ಒಮ್ಮೆ ನಾವು ರಾತ್ರಿ ಹಗಲು ಆ ರಾಕೆಟ್ ಉಡಾವಣೆಗೆ ವಿಶ್ರಾಂತಿಯಿಲ್ಲದೇ , ಆಹಾರವಿಲ್ಲದೇ ನಮ್ಮ ಲ್ಯಾಬೊರೇಟರಿಯಲ್ಲಿ ಕೆಲಸದಲ್ಲಿದ್ದೆವು. ಮಧ್ಯ ರಾತ್ರಿಯಲ್ಲಿ ನಮ್ಮ ನಿರ್ದೇಶಕರಾದ ಮೂರ್ತಿ ಅವರು ಕೊಚಿನ್ ನಿಂದ ಟ್ರಿವೇಂಡ್ರಂ ಗೆ ವಾಪಸ್ಸು ಬರುತ್ತಿದ್ದರು. ರಸ್ತೆಯಿಂದಲೇ ನಮ್ಮ ಲ್ಯಾಬೋರೇಟೊರಿಯಲ್ಲಿ ದೀಪಗಳು ಉರಿಯುತ್ತಿದ್ದುದ್ದನ್ನು ನೋಡಿ, ಅಲ್ಲಿ ನಿಂತಿದ್ದ ಸೆಕ್ಯುರಿಟಿ ಆಳನ್ನು "ಈ ಸಮಯದಲ್ಲಿ ಒಳಗಡೆ ಯಾರಿದ್ದಾರೆ?" ಅಂತ ಕೇಳಿದರಂತೆ. ಅವನು "ಕಲಾಂ ಸಾರ್ ಮತ್ತು ಅವರ ಶಿಷ್ಯರು" ಅಂತ ಹೇಳಿದನಂತೆ. ಈ ವಿಷಯವನ್ನು ಕೇಳಿ ಮೂರ್ತಿ ಅವರು ದಿಢೀರನೆ ನಮ್ಮ ಲ್ಯಾಬೋರೇಟೊರಿಗೆ ಬಂದರು. ಅವರಿಗೆ ಕೋಪ ಉಕ್ಕಿ ಬರುತ್ತಿದ್ದುದ್ದು ನಮ್ಮ ಕಣ್ಣಿಗೆ ಬೀಳದೇ ಇರಲಿಲ್ಲ. 'ಕಲಾಂ, ನೀವೂ ನಿಮ್ಮ ಶಿಷ್ಯರೂ ಈಗಲೇ ಮನೆಗೆ ಹೊರಡಿ. ಹೀಗೆ ಆಹಾರ ನಿದ್ರೆ ಇಲ್ಲದೆ ನೀವುಗಳು ಕೆಲಸ ಮಾಡುವುದು ಸರಿಯಲ್ಲ.ಸಾಕು, ಮನೆಗೆ ಹೊರಡಿ!' ಅಂತ ಗುಡುಗಿದರು. ಆದರೆ ಕಲಾಂ ಇದಕ್ಕೆ ತಕ್ಷಣ ಒಪ್ಪಲಿಲ್ಲ. 'ಸರ್, ನಾವು ಹೀಗೆ ಕೆಲಸ ಮುಗಿಸದಿದ್ದರೆ ಉಡಾವಣೆ ದಿನ ಮುಂದೂಡಬೇಕಾಗುತ್ತೆ. ವಿಜ್ಞಾನಿ ಹೇಳಿದ ಸಮಯ ಮೀರಿಹೋಗುತ್ತೆ' ಅಂತ

ವಿವರಣೆ ಕೊಟ್ಟರು. ಮೂರ್ತಿ ಅವರ ಕೋಪ ಇನ್ನಷ್ಟು ಮೇಲಕ್ಕೇರಿತು. 'ಈ ಬಾರಿ ಆ ವಿಜ್ಞಾನಿಗೆ ನಕ್ಷತ್ರ ಕಂಡು ಬರದಿದ್ದರೆ ಆಘಾತವೇನೂ ಆಗುವುದಿಲ್ಲ. ಅದೇ ನಕ್ಷತ್ರ ಇನ್ನೊಂದು ಬಾರಿ ಆಕಾಶದಲ್ಲಿ ಬರುತ್ತೆ. ಅದಕ್ಕಾಗಿ ನಿಮ್ಮ ಆರೋಗ್ಯ ಕೆಡಿಸಿಕೊಳ್ಳುವ ಅವಶ್ಯಕತೆ ಏನೂ ಇಲ್ಲ. ಈಗಲೇ ಲ್ಯಾಬೋರೇಟೊರಿಗೆ ಬೀಗ ಹಾಕಿ ನಿಮ್ಮ ಲಾಡ್ಜ್ ಗೆ ಹೊರಡಿ. ನಾಳೆ ವಿಶ್ರಾಂತಿ ಪಡೆದು ಮಧ್ಯಾಹ್ನದ ಮೇಲೆ ಬನ್ನಿ. ಇಲ್ಲದಿದ್ದರೆ ನಾನು ಸೆಕ್ಯುರಿಟಿಯವರಿಗೆ ಹೇಳಿ ನಿಮ್ಮನ್ನು ಇಲ್ಲಿಂದ ಹೊರಗೆ ತಳ್ಳಿಸ್ತೀನಿ!' ಅಂತ ಬೈದು ಹೊರಟರು. ಕಲಾಂ ಅವರು ಪೆಚ್ಚಾಗಿ, "ಆಗಲಿ ಸರ್" ಅಂತ ಒಪ್ಪಿಕೊಂಡು, ಅವರು ಕಣ್ಮರೆಯಾದ ಮೇಲೆ, 'ಸರಿ, ಹೊರಡೋಣ ಬನ್ನಿ. ಆದರೆ ಬೆಳಿಗ್ಗೆ ಎಂಟು ಗಂಟೆಗೇ ಇಲ್ಲಿ ಮತ್ತೆ ಬರೋಣ' ಅಂತ ನಮಗೆ ಗುಟ್ಟಾಗಿ ಹೇಳಿದರು, ಹಾಗೆಯೇ ಮಾಡಿದೆವು! ವಿಜ್ಞಾನಿ ಮೊದಲೇ ನಿರ್ಧರಿಸಿದ ದಿನದಲ್ಲೇ ಉಡಾವಣೆ ಸರಿಯಾದ ಸಮಯಕ್ಕೇ ಆಯಿತು! ಕಲಾಂ ಅವರ ಕಾರ್ಯ ವೈಖರಿಗೆ ಇದೊಂದು ಸೂಕ್ತ ಉದಾಹರಣೆ.

ಇನ್ನೊಮ್ಮೆ ಮೂರ್ತಿ ಅವರ ರೂಮಿಗೆ ಒಬ್ಬ ವೃದ್ಧರು ಬಂದು, "ನಾನು ಕಲಾಂ ಅವರ ತಂದೆ. ಅವನಿಂದ ಕಾಗದವಿಲ್ಲ ಪತ್ರವಿಲ್ಲ. ಊರಿಗೆ ಬಂದು ನಮ್ಮನ್ನು ನೋಡುವುದೂ ಇಲ್ಲ. ಅವನ ಮುಖ ನೋಡಿ ಒಂದು ವರುಷದ ಮೇಲಾಯಿತು" ಅಂತ ಕಣ್ಣೀರಿಟ್ಟರು. ಮೂರ್ತಿ ಕಲಾಂ ಅವರನ್ನು ಕರೆದು, "ಕಲಾಂ, ನಿಮ್ಮ ಕೆಲಸ ಇದ್ದೇ ಇರುತ್ತೆ. ಮೊದಲು ನಿಮ್ಮ ತಂದೆಯವರನ್ನು ಸಿಟಿಗೆ ಕರೆದುಕೊಂಡು ಹೋಗಿ, ವಿಶ್ರಾಂತಿಯಲ್ಲಿ ಅವರೊಡನೆ ಒಂದೆರಡು ದಿನಗಳು ಕಳೆದು, ನಂತರ ಅವರನ್ನು ರಾಮೇಶ್ವರದಲ್ಲಿ ಬಿಟ್ಟು ಬನ್ನಿ. ಅಲ್ಲಿಯ ತನಕ ನನಗೆ ಮುಖ ತೋರಿಸಬೇಡಿ" ಅಂದರು. ಕಲಾಂ "ಸರಿ, ಸರ್." ಅಂತ ತಂದೆಯವರೊಡನೆ ಹೊರಟರು. ಮಾರನೆಯ ಬೆಳಿಗ್ಗೆ ಎಂಟು ಗಂಟೆಗೇ ಆಫೀಸಿನಲ್ಲಿ ಹಾಜರಾದರು! ಅವರ ತಂದೆಯನ್ನು ಏನು ಮಾಡಿದರೆಂದು ನಮಗೆಲ್ಲಾ "ಮಿಸ್ಟರಿ" ಯಾಗೇ ಉಳಿಯಿತು!

ಕಲಾಂ ಅವರು ನಮ್ಮ ದೇಶದ ಮೊದಲ ಉಪಗ್ರಹ ಉಡಾವಣ ರಾಕೆಟ್ ಎಸ್.ಎಲ್.ವಿ–3 ಯೋಜನೆಯ ನಿರ್ದೇಶಕರಾಗಿದ್ದಾಗ, ಶ್ರೀಹರಿಕೋಟ ಉಡಾವಣ ಕೇಂದ್ರದಲ್ಲಿ ಆದ ಮೊದಲನೆಯ ಪರೀಕ್ಷಾರ್ಥ ಉಡಾವಣೆ ತಾಂತ್ರಿಕ ದೋಷದಿಂದ ವಿಫಲವಾಗಿ ರಾಕೆಟ್ ಬಂಗಾಲ ಕೊಲ್ಲಿಯಲ್ಲಿ ಬಿತ್ತು. ಇದು ಮಾಧ್ಯಮದಲ್ಲಿ ಒಂದು 'ಜೋಕ್' ಆಗಿ ಪರಿಣಮಿಸಿತು. 'ಎಸ್.ಎಲ್.ವಿ ಅಂದರೆ ಸೀ ಲೊವಿಂಗ್ ವೆಹಿಕಲ್' ಅಂತ ಅರ್ಥ ಕಲ್ಪಿಸಿದರು. ಆಗ ಟ್ರಿವೇಂಡ್ರಂ ನಲ್ಲಿ ನಾವು ತಿಂಡಿ ತಿನ್ನುವ ಹೋಟೆಲ್‌ನಲ್ಲಿ ಮಾಲೀಕ, ರಾಕೆಟ್ ದೋಸೆ ಅಂತ ರಾಕೆಟ್ ಮೂತಿಯ ರೂಪದಲ್ಲಿ ಸುಮಾರು ಒಂದು ಅಡಿಗೂ ಉದ್ದವಿದ್ದ ದೋಸೆ ಮಾಡಿ ತಟ್ಟೆಯಲ್ಲಿ ಅಡ್ಡಡ್ಡಾಗಿ ಇಟ್ಟು ಕೊಡುತ್ತಿದ್ದ. ಈ ದೋಸೆಯನ್ನು ಪ್ಲೇಟ್‌ನಲ್ಲಿ ಮೇಲಕ್ಕೆ ಎತ್ತಿ ಇಟ್ಟು ಕೊಡಬೇಕು, ರಾಕೆಟ್ ಆಕಾಶಕ್ಕೆ ತಾನೇ ಹೋಗೋದು? ಅಂತ ಅಲ್ಲಿದ್ದ ಒಬ್ಬ ಗಿರಾಕಿ ಹೇಳಿದ್ದಕ್ಕೆ, ಮಾಲಿಕ, "ಇಲ್ಲ ಸರ್, ಇದು ಸಮುದ್ರಕ್ಕೆ ಹೋಗೋ ರಾಕೆಟ್! ಅದಕ್ಕೆ ಹೀಗೆ ಇಟ್ಟೆ" ಅಂದ. ಇನ್ನೊಬ್ಬರು ಕಲಾಂ ಕಾಲೆಳೆಯುವುದಕ್ಕೆ, "ಶಿವಕಾಶಿಯಲ್ಲಿ ಮಾಡೋ ರಾಕೆಟ್ ಗಳೆಲ್ಲಾ ಎಷ್ಟು ಚೆನ್ನಾಗಿ ಹೋಗುತ್ವೆ. ನಾವುಗಳು ( ಅವರು 'ನೀವುಗಳು' ಎಂದು ಅರ್ಥ ಬರುವ ಹಾಗೆ ಹೇಳಿದ್ದು) ಅಲ್ಲಿಗೆ ಹೋಗಿ ಆ ತಂತ್ರಜ್ಞಾನವನ್ನಾದರೂ

ಕಲಿಯಬಹುದಲ್ಲಾ!" ಅಂತ ಕೊಂಕು ಮಾತು ಆಡಿದರು. ಈ ಎಲ್ಲಾ ವ್ಯಂಗ್ಯ ನುಡಿಗಳಿಗೆ ಕಲಾಂ ನಕ್ಕರು ಮಾತ್ರ. ಎರಡನೆಯ ಬಾರಿ ಉಡಾವಣೆ ಮಾಡಿದ ಎಸ್.ಎಲ್.ವಿ–3, ಭಾರತದ ಮೊದಲನೆಯ ಉಪಗ್ರಹ 'ರೋಹಿಣಿ' ಯನ್ನು ಭೂ ಕಕ್ಷೆಯಲ್ಲಿ ಯೋಜಿಸಿದಂತೆ ಸೇರಿಸಿತು ಮತ್ತು ಇಸ್ರೋಗೆ ಈ ತಂತ್ರಜ್ಞಾನದ ಪರಿಣತಿಯನ್ನು ತಂದಿತು.

ಕಲಾಂ ಅವರ ಕೈ ಬರಹದ ವೈಖರಿ ನನಗೆ ಜ್ಞಾಪಕ ಬರುತ್ತಿದೆ. ಅವರು ಒಬ್ಬ ಎಂಜಿನಿಯರ್ ಆಗಿದ್ದರೂ, ತಾಂತ್ರಿಕ ಚಿತ್ರಗಳನ್ನು ಬರೆಯಲು ಬರುತ್ತಿರಲಿಲ್ಲ. ಅವರ ಕೈಬರಹ ಹೇಗಿತ್ತೆಂದರೆ ಕೆಲವೊಮ್ಮೆ ತಾನು ಏನು ಬರೆದಿದ್ದೀನಿ ಎಂದು ಅವರಿಗೇ ಓದಲಸಾಧ್ಯವಾಗುತ್ತಿತ್ತು. ಒಂದು ದಿನ ಅವರೊಡನೆ ನಾನು ನಮ್ಮ ಕೇಂದ್ರದ ನಿರ್ದೇಶಕರೊಡನೆ ಆದ ಮೀಟಿಂಗ್‌ನಲ್ಲಿದ್ದೆ. ನಿರ್ದೇಶಕರು ಹೇಳಿದ್ದನೆಲ್ಲಾ ಕಲಾಂ ಅವರ ಡೈರಿಯಲ್ಲಿ ಬರೆದುಕೊಂಡರು. ನಂತರ ನಮ್ಮ ಆಫೀಸಿಗೆ ಬಂದಮೇಲೆ ಆ ಡೈರಿಯನ್ನು ತೆಗೆದಿಟ್ಟು ಕೊಂಡು, ತಲೆಯ ಮೇಲೆ ಕೈಹೊತ್ತು ನಿಸ್ಸಹಾಯಕರಾಗಿ ಕೂತಿದ್ದರು. ಏನಾಯಿತು? ಅಂತ ಕೇಳಿದೆ. ನಾನು ಬರೆದಿರುವ ಕೆಲವು ಪದಗಳು ಏನು ಅಂತ ತಲೆ ಚಚ್ಚಿಕೊಳ್ಳುತ್ತಿದ್ದೇನೆ ಎಂದರು. ನಾನು ಅವರ ಡೈರಿಯಲ್ಲಿ ಅವರ ಬರಹವನ್ನು ನೋಡಿದೆ. ವಿಷಯದ ಹಿನ್ನೆಲೆಯಲ್ಲಿ ಮತ್ತು ಅವರ ಕೈಬರಹವನ್ನು ದಿನ ನಿತ್ಯ ನೋಡುತ್ತಿದ್ದ ನನಗೆ ಆ ಪದಗಳು ಏನು ಅಂತ ಅರ್ಥವಾಯಿತು. ಅವರಿಗೆ ಹೇಳಿದೆ. ಸತ್ಯ, ನನ್ನ ಮಾನ ಉಳಿಸಿದಿರಿ ಅಂತ ನಿಟ್ಟುಸಿರು ಬಿಟ್ಟರು!

ಅವರು ಇಸ್ರೋ ಸಂಸ್ಥೆಯಲ್ಲದೆ ರಕ್ಷಣ ಇಲಾಖೆಯಲ್ಲಿ ಜವಾಬ್ದಾರಿಯುತ ಹುದ್ದೆಗಳನ್ನು ನಿಭಾಯಿಸಿ, ನಂತರ ರಾಷ್ಟ್ರಪತಿಯಾಗಿದ್ದು ಎಲ್ಲರಿಗೂ ತಿಳಿದ ವಿಷಯ. ಈ ಸಮಯಾವಧಿಯಲ್ಲಿ ನನ್ನ ಮತ್ತು ನನ್ನ ಹೆಂಡತಿ ಶ್ಯಾಮಲ ಹಾಗೂ ನಮ್ಮ ಮಕ್ಕಳೊಡನೆ ಒಂದಲ್ಲ ಒಂದು ರೀತಿಯಲ್ಲಿ ಅವರೊಡನೆ ಸಂಬಂಧ ಬೆಳೆಯುತ್ತಲೇ ಇತ್ತು. ನಾವು ಒಮ್ಮೆ ರಾಷ್ಟ್ರಪತಿ ಭವನ್‌ಗೆ ಭೇಟಿ ಕೊಟ್ಟಾಗ ನಮ್ಮೊಡನೆ ಅವರು ಕಳೆದ ಘಳಿಗೆಗಳನ್ನು ಮರೆಯಲು ಅಸಾಧ್ಯ. ಹಿಂದೆ ಬೆಂಗಳೂರಿಗೆ ಬಂದಾಗ ಒಂದು ದಿನ ನಮ್ಮ ಮನೆಯಲ್ಲಿ ಊಟ ಮಾಡಿದ್ದನ್ನು ಜ್ಞಾಪಿಸಿಕೊಳ್ಳುತ್ತಾ ಶ್ಯಾಮಲಳ ಜೊತೆ ಅವಳು ಅಂದು ಬಡಿಸಿದ್ದ ಉಪ್ಪಿನಕಾಯಿ ಬಗ್ಗೆ ಸುಮಾರು ಹೊತ್ತು ಮಾತನಾಡಿದರು! ನಿಮ್ಮ ರಾಷ್ಟ್ರಪತಿ ಭವನದಲ್ಲಿ ಅದೆಷ್ಟು ಜನ ಪರಿಣತ ಅಡುಗೆಯವರು ಇದ್ದರೋ ನನಗೆ ಗೊತ್ತಿಲ್ಲ. ಅವರಲ್ಲಿ ಯಾರಿಗಾದರೂ ಇಂತಹ ಉಪ್ಪಿನಕಾಯನ್ನು ಮಾಡಲು ಹೇಳ ಬಾರದೇ? ಅಂತ ನಾನು ಕೇಳಿದೆ. ಮನೆ ಊಟ, ಮನೆ ಊಟ ಅಲ್ಲವೇ? ಅದನ್ನು ಮರೆಯುವುದಕ್ಕೆ ಅಗುತ್ತದೆಯೇ? ಎಂದರು. ನಾನು ಬರೆದ ಅನಂತಶಯನದ ಸಂಶೋಧನ ಪುಸ್ತಕಕ್ಕೆ ಬಹು ಸಂತೋಷದಿಂದ ಮುನ್ನುಡಿ ಬರೆದು ಕೊಟ್ಟರು. ನನ್ನ ಮಗ ಶ್ರೀಹರ್ಷನ ಮದುವೆಗೆ ನಾನು ಕಳಿಸಿದ್ದ ಆಹ್ವಾನ ಪತ್ರಿಕೆಗೆ ಅವರು ಸ್ಪಂದಿಸಿದ್ದು ಹೀಗೆ: ಬೆಂಗಳೂರಿನಲ್ಲಿ ಸಂಜೆ ರಿಸೆಪ್ಷನ್ ಶುರುವಾದ ಕೆಲವು ನಿಮಿಷಗಳ ನಂತರ ರಾಜಭವನ್‌ನಿಂದ ಒಬ್ಬ ಅಧಿಕಾರಿ ಕಾರಿನಲ್ಲಿ ಬಂದು ಇಳಿದು ನನ್ನ ಮಗ, ಸೊಸೆಗೆ ಹೂ ಗುಚ್ಛ ನೀಡಿ, ಕಲಾಂ ಅವರು ನಿಮಗೆ ತಮ್ಮ ಶುಭಾಶಯಗಳನ್ನು ತಿಳಿಸಲು ಹೇಳಿದ್ದಾರೆ ಎಂದು ಸಂದೇಶ ನೀಡಿದರು! ಅದರೊಳಗೆ ಅವರು ಇಟ್ಟಿದ್ದ ಪತ್ರದಲ್ಲಿ ವಧು ವರರಿಗೆ ದೆಹಲಿಗೆ ಬನ್ನಿ ಎಂದು ಆಮಂತ್ರಣ ನೀಡಿದ್ದರು!

ನಾನು ಬೆಂಗಳೂರಿನಲ್ಲಿ ಮಾಡಿದ ಕೆಲವು ಕಾರ್ಯಕ್ರಮದಲ್ಲಿ ದೆಹಲಿಯಿಂದಲೇ ಪರೋಕ್ಷವಾಗಿ ಭಾಗವಹಿಸುತ್ತಿದ್ದರು. ಒಮ್ಮೆ ಬೆಂಗಳೂರಿನ ಆರ್.ಟಿ.ನಗರದ ಬಡಾವಣೆಯಲ್ಲಿ ಸುಮಾರು 200 ಅಬಲ ಅನಾಥ ಮಕ್ಕಳನ್ನು ಒಟ್ಟಿಗೆ ಸೇರಿಸಿ, ಮಕ್ಕಳು ಕಲಾಂ ಅವರೊಡನೆ ಸಂವಾದ ನಡೆಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆವು. ಇದಕ್ಕೆ ಕಲಾಂ ಅವರು ರೇಡಿಯೋ ಮೂಲಕ ದೆಹಲಿಯಿಂದ ಅವರೊಡನೆ ಸಂಭಾಷಣೆ ನಡೆಸುವುದಕ್ಕೆ ಬೇಕಾದ ಸಿದ್ಧತೆಯನ್ನು ನಾವು ಮಾಡಿದ್ದೆವು. ನಿರ್ದಿಷ್ಟ ಸಮಯಕ್ಕೆ ಕಲಾಂ ಅವರು ಸಂವಾದವನ್ನು ಶುರು ಮಾಡಿದರು. ಮಕ್ಕಳಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಕಲಾಂ ಅವರಿಗೆ ಕನ್ನಡ ಗೊತ್ತಿಲ್ಲದಿದ್ದರಿಂದ ಅವರು ಮಕ್ಕಳು ಕನ್ನಡದಲ್ಲಿ ಕೇಳುತ್ತಿದ್ದ ಪ್ರಶ್ನೆಗಳಿಗೆ ಇಂಗ್ಲಿಷ್‌ನಲ್ಲಿ ಉತ್ತರಕೊಡುತ್ತಿದ್ದರು. ನಾನು ಮಧ್ಯವರ್ತಿಯಾಗಿ ಮಕ್ಕಳ ಪ್ರಶ್ನೆಗಳನ್ನು ಕನ್ನಡದಿಂದ ಇಂಗ್ಲಿಷ್ ಮತ್ತು ಕಲಾಂ ಅವರ ಉತ್ತರಗಳನ್ನು ಇಂಗ್ಲಿಷ್ ನಿಂದ ಕನ್ನಡಕ್ಕೆ ತರ್ಜುಮೆ ಮಾಡುತ್ತಿದ್ದೆ. ನೀವು ಅಬಲರು ಎಂದು ಭಾವಿಸುತ್ತಾ ನಿರಾಶಾವಾದಿಗಳಾಗದೆ ಇರಿ; ನಮ್ಮೆಲ್ಲರಲ್ಲೂ ಅಗಾಧವಾದ ಒಳ ಶಕ್ತಿಇದೆ. ಅದನ್ನು ಗುರುತಿಸಿ, ಹೊರತೆಗೆದು ಅದನ್ನು ಉಪಯೋಗಿಸಿಕೊಳ್ಳಿ –ಹೀಗೆ ನಾನಾ ಬಗೆಯ ಸಲಹೆಗಳನ್ನು ಮಕ್ಕಳಿಗೆ ಕೊಟ್ಟರು. ಒಬ್ಬ ಹುಡುಗ, ಸರ್, ನಾನು ನಿಮ್ಮ ತರಹ ಇನ್ನೊಬ್ಬ ಕಲಾಂ ಆಗಬೇಕು, ಹೇಗೆ? ಅಂತ ಕೇಳಿದ. ಅದಕ್ಕೆ ಕಲಾಂ ಅವರು ಅದು ತಪ್ಪು, ನೀನು ನೀನಾಗಬೇಕೆ ಹೊರತು ಇನ್ಯಾರ ತರಹವೂ ಆಗುವುದಕ್ಕೆ ಪ್ರಯತ್ನಿಸಬೇಡ ಎಂದರು. ಹೀಗೆ ಸಂವಾದ ಮುಗಿಸಿದ ಬಳಿಕ ಕಲಾಂ ಅವರು ಮಕ್ಕಳಿಗೆ ವಿದಾಯ ಹೇಳಿದರು. ಅದಕ್ಕೆ ಮುಂಚೆ ಕೊನೆಯಲ್ಲಿ ನನ್ನನ್ನು ಉದ್ದೇಶಿಸಿ, ಸತ್ಯ, ನಾನು ಹೇಳಿದ್ದನ್ನೆಲ್ಲಾ ಸರಿಯಾಗಿ ತರ್ಜುಮೆ ಮಾಡಿದಿರಾ ಅಥವಾ ನಿಮ್ಮದೇ ಆದ ಮಸಾಲೆಯನ್ನು ಸೇರಿಸಿದಿರೋ? ಅಂತ ನಗುತ್ತಾ ಕೇಳಿದರು. ನಾನು, ನನ್ನ ಹೆಸರಿಗೆ ಅನುಗುಣವಾಗಿ ಸತ್ಯವನ್ನೇ ನುಡಿದೆ ಎಂದು ಉತ್ತರಿಸಿದೆ. ಒಂದು ದಿನ ಮಲ್ಲೇಶ್ವರದ ಸೇವಾಸದನದಲ್ಲಿ ಆದ ಕಛೇರಿಯೊಂದರಲ್ಲಿ ನಾನು ರಿತ್ವಿಕ್ ಮತ್ತು ರೋಶನ್ ಎಂಬ ಅಂಧ ಹುಡುಗರ ಸಂಗೀತ ಪ್ರತಿಭೆಯನ್ನು ಕಂಡು ಆಶ್ಚರ್ಯ ಪಟ್ಟಿದ್ದೆ. ಮೂರು ನಾಲ್ಕು ಭಾಷೆಗಳಲ್ಲಿ ಅವರಿಬ್ಬರೂ ಕರ್ನಾಟಕ ಮತ್ತು ಹಿಂದೂಸ್ತಾನಿ ಶೈಲಿಗಳಲ್ಲಿ ಅತ್ಯಂತ ಮನೋಹರವಾಗಿ ಭಾವಗೀತೆ, ಭಕ್ತಿಗೀತೆ ಮತ್ತು ಶಾಸ್ತ್ರೀಯ ಸಂಗೀತ ರಚನೆಗಳನ್ನು ಹಾಡಿದ್ದರು. ಅಂದು ರಾತ್ರಿಯೇ ನಾನು ಕಲಾಂ ಅವರಿಗೆ ಫೋನ್ ಮಾಡಿ ನೀವು ಮುಂದಿನ ಬಾರಿ ಬೆಂಗಳೂರಿಗೆ ಬಂದಾಗ ಇಲ್ಲಿಯ ಈ ಇಬ್ಬರು ಪ್ರತಿಭಾವಂತ ಅಂಧ ಯುವ ಬಾಲಕರ ಮನೆಗೆ ಬಂದು ಅವರ ಸಂಗೀತವನ್ನು ಕೇಳಿ ಅವರಿಗೆ ಆಶೀರ್ವದಿಸಿ ಎಂದು ಕೋರಿದೆ. ಅವರು ತಕ್ಷಣವೇ ಸಂತೋಷದಿಂದ ಒಪ್ಪಿಕೊಂಡರು. ಸ್ವಲ್ಪ ದಿನಗಳು ಕಳೆದ ನಂತರ ಅವರು ಬೆಂಗಳೂರಿಗೆ ಬರುವ ದಿನ ಮತ್ತು ಸಮಯವನ್ನು ತಿಳಿಸಿ ಅವರ ಮನೆಯವರಿಗೆ ಹೇಳಲು ಸೂಚಿಸಿದರು. ಹುಡುಗರ ತಂದೆ ಮತ್ತು ತಾಯಿ (ಶ್ರೀ ಮತ್ತು ಶ್ರೀಮತಿ ರಾಜನ್) ಕಲಾಂ ಅವರು ಬರುವುದಕ್ಕೆ ಕಾದು ನಿಂತಿದ್ದರು. ಹೇಳಿದ ದಿವಸ ಬೆಂಗಳೂರು ವಿಮಾನ ನಿಲ್ದಾಣದಿಂದ ರಾತ್ರಿ ರಾಜಭವನಕ್ಕೆ ಹೋಗುವ ಮುನ್ನ ಇವರ ಮನೆಗೆ ಬಂದರು. ನನಗೆ ಕೇವಲ ಅರ್ಧ ಗಂಟೆ ಸಮಯ ಮಾತ್ರ ಇದೆ ಎಂದು ಹೇಳುತ್ತಿದ್ದ ಕಲಾಂ ಸುಮಾರು ಎರಡು ಗಂಟೆಯ ಕಾಲ ಹುಡುಗರ ಸಂಗೀತಕ್ಕೆ ಮಾರು ಹೋದರು. ಅಲ್ಲಿದ್ದ ನಮಗೆಲ್ಲಾ,

ಅದರಲ್ಲೂ ಹುಡುಗರ ತಂದೆ ತಾಯಿಯವರಿಗೆ ಆದ  ಆನಂದ ಅಷ್ಟಿಷ್ಟಲ್ಲ. ಬ್ರೈಲ್ ಲಿಪಿಯಲ್ಲಿದ್ದ ತಮ್ಮ ಎರಡು ಪುಸ್ತಕಗಳನ್ನು ಹುಡುಗರಿಗೆ ಕೊಟ್ಟು ಆಶೀರ್ವದಿಸಿದರು. ಅವರ ಮಾನವೀಯತೆ ಅಲ್ಲಿಗೇ ನಿಲ್ಲಲಿಲ್ಲ ಆ ದಿನ ನನ್ನೊಡನೆ ನನ್ನ ಹೆಂಡತಿ, ಅಳಿಯ ಮತ್ತು ನನ್ನ ತಂಗಿಯೂ ಇದ್ದರು. ನನ್ನ ತಂಗಿ ಒಬ್ಬ ಕಣ್ಣು ವೈದ್ಯರೆಂದು ಅವರಿಗೆ ತಿಳಿದೊಡನೆಯೇ, ಕಲಾಂ, "ನೀವು ಈ ಇಬ್ಬರ ವೈದ್ಯಕೀಯ ಮಾಹಿತಿಯನ್ನು ಪರೀಕ್ಷಿಸಿ ನಿಮ್ಮ ಸಲಹೆಯೊಂದಿಗೆ ನನಗೆ ದೆಹಲಿಗೆ ಕಳಿಸಿ ಕೊಡಿ. ಅಲ್ಲಿ ಐ.ಐ.ಟಿ ನಲ್ಲಿ ನನಗೆ ಪರಿಚಯವಿರುವ ಒಬ್ಬ ಪ್ರೊಫೆಸರ್ ಹಾಗೂ ಕಣ್ಣಿನ ಬಗ್ಗೆ ಬಯಾನಿಕ್ಸ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವರೊಬ್ಬರು ನನಗೆ ಪರಿಚಯವಾಗಿದ್ದಾರೆ. ಅವರಿಗೆ ನಾನು ಈ  ಹುಡುಗರ ಮಾಹಿತಿಯನ್ನು ಕೊಟ್ಟು ಏನಾದರೂ  ಅವರ ಅಂಧತ್ವಕ್ಕೆ ಪರಿಹಾರ ಸಿಗಬಹುದೇ ಎಂದು ವಿಚಾರಿಸುತ್ತೇನೆ" ಎಂದು ಸೂಚನೆ ನೀಡಿದರು!

ಸರಳ ಜೀವಿ, ದೇಶ ಪ್ರೇಮಿ, ಸರ್ವಧರ್ಮ ಪ್ರಿಯರು, ತಾಂತ್ರಿಕ ತಜ್ಞರು, ಶಿಕ್ಷಕರು, ಸಂಗೀತ ಪ್ರಿಯರು, ದೇಶದ ಮಕ್ಕಳಿಗೆ ಅಚ್ಚುಮೆಚ್ಚಿನ  'ಕಲಾಂ ತಾತಾ' ಆದ – ಎ.ಪಿ.ಜೆ.ಅಬ್ದುಲ್ ಕಲಾಂ ಅವರು ಈಗ ಕಣ್ಮರೆಯಾಗಿದ್ದರೂ, ನಮ್ಮ ಸ್ಮರಣೆಯಲ್ಲಿ ಎಂದೂ ಇದ್ದಾರೆ!

■

---

# ವ್ಯರ್ಥ

(ಸುಭಾಷಿತ ಚಮತ್ಕಾರ)

'ತಂಗದಿರನ ಮೊಗವನೆ ಕಾಣದ
ತಾವರೆ ಜನ್ಮ ಬಹು ವ್ಯರ್ಥ '
'ತಾವರೆಗಂಗಳ ನಿದ್ದೆಯ ಕೆಡಿಸದ
ಚಂದ್ರನ ಜನ್ಮಕೆ ಏನರ್ಥ?'

ನಿರರ್ಥಕಂ ಜನ್ಮ ಗತಂ ನಲಿನ್ಯಾ
ಯಯಾ ನ ದೃಷ್ಟಂ ತುಹಿನಾಂಶುಬಿಂಬಮ್ ।
ಉತ್ಪತ್ತಿರಿಂದೋರಪಿ ನಿಷ್ಫಲೈವ
ಕೃತಾ ವಿನಿದ್ರಾ ನಲಿನೀ ನ ಯೇನ ॥

**ಪಾ.ವೆಂ.ಆಚಾರ್ಯ**

# ಆ ಐದು ದಿನಗಳು

**• 'ಗೌತಮ'**

'ಹೆತ್ತವರಿಗೆ ಹೆಗ್ಗಣ ಮುದ್ದು ಕೂಡಿದೋರಿಗೆ ಕೋಡಗ ಮುದ್ದು' ಅನ್ನೋದು ನಮ್ಮಲ್ಲಿಯ ಪ್ರಾಚೀನ ಗಾದೆ. ಅನೇಕ ಶ್ವಾನಪ್ರಿಯರು 'ಸಾಕಿದವರಿಗೆ ನಾಯಿಮುದ್ದು' ಅನ್ನೋ ಬಾಲಂಗೋಸಿಯನ್ನೂ ಸೇರಿಸಿದ್ದಾರೆ. ಗಾದೆಗಳ ಕೋಶದ ಮುಂದಿನ ಆವೃತ್ತಿಯಲ್ಲಿ ಅಧಿಕೃತವಾಗಿ ಈ ಪದಪುಂಜವನ್ನು ಸೇರ್ಪಡೆಗೊಳಿಸಲುನಂದೂ ಒಂದು ಓಟು ಇದೆ. ನಾಯಿ ಸಾಕಿದ ಮೇಲೆ ಅದನ್ನು ನೋಡಿಕೋಬೇಕಾದ್ದು, ಮುಖ್ಯವಾಗಿ ಅದನ್ನ ಮ.ವಿ ಮತ್ತು ಮೂ.ವಿಗೆ ಕರೆದುಕೊಂಡು ಹೋಗೋದೂ ಒಂದು ಅನಿವಾರ್ಯ ಕರ್ಮ. ಇಲ್ಲಿ ಕರ್ಮ ಅಂದರೆ ಕರ್ಮ ಅಂತಷ್ಟೆ ಅರ್ಥ. ಕರ್ಮ ಅಂತಂದುಕೋ ಬೇಡಿ. ಇಲ್ಲದಿದ್ದರೆ ಆ ದುರ್ಗಂಧಗಳನ್ನು ಸಹಿಸಿಕೊಳ್ಳೋದು ಮನೆಯವರೆಲ್ಲರ ಕರ್ಮವಾಗತ್ತೆ.

ಎಂಟು ಸಾವಿರ ಕೊಟ್ಟು ತಂದ ಮುದ್ದಿನ ಲ್ಯಾಬ್ರಡಾರ್ ಮರಿಗೆ 'ಜಾನಿ' ಅಂತ ನಾಮಕರಣ ಮಾಡಿದೆ. ಈಗದಕ್ಕೆ ಎಂಟು ತಿಂಗಳು. ದಿನಕ್ಕೆ ನಾಲ್ಕು ಸಲ ಅದನ್ನು ಮ.ವಿ/ಮೂ.ವಿಗಾಗಿ ನಮ್ಮ ಮನೆಯ ರಸ್ತೆಯಲ್ಲೇ ಈ ಕಡೆಯಿಂದ ಆ ಕಡೆಗೆ ಆಕಡೆಯಿಂದ ಈಕಡೆಗೆ ಅಡ್ಡಾಡಿಸ್ತೀನಿ. ಜೊತೆಗೆ, ಬೆಳಿಗ್ಗೆ ನಮ್ಮ ಮನೆಯ ಹಿಂದೆ ಇರುವ 'ವಾಕಿಂಗ್ ಪಾರ್ಕ್'ಗೆ ಒಂದು ಸಲ ಕರಕೊಂಡು ಹೋಗ್ತೀನಿ. ಮೊದಲ ದಿನ ಜಾನಿ ಸಹಿತ ವಾಕಿಂಗ್ಗೆ ಹೋದಾಗ ಪಾರ್ಕ್‌ನ ದ್ವಾರಪಾಲಕ ನನ್ನನ್ನ ಒಳಗೆ ಬಿಡಲಿಲ್ಲ. ಸರಿ. 'ರೈಟ್ ಟರ್ನ್' ಅಂತ ನನಗೆ ನಾನೇ ಆರ್ಡರ್ ಕೊಟ್ಟು ಕೊಂಡು ವಾಕಿಂಗ್ ಪಾರ್ಕಿನ ಹೊರಚೌಕದ ರಸ್ತೆಯಲ್ಲಿ ನನ್ನ ಕಾಯಕವನ್ನ ಪ್ರಾರಂಭಿಸಿದೆ. ಒಂದು ಸಲ ಬ್ಯಾಕ್ ಟು ಸ್ಕ್ವೇರ್ ಆಗಬೇಕಾದರೆ ಹದಿನೈದು ನಿಮಿಷಬೇಕು. ಅಷ್ಟು ದೊಡ್ಡ ಪಾರ್ಕು. ಡೈಲಿ ನಾಲ್ಕು ಸುತ್ತು ಬರ್ತೀನಿ.

ಬೇಜಾರು ಮಾಡಿಕೋಬೇಡಿ. ಸ್ವಲ್ಪ ಡೀವಿಯೇಟ್ ಮಾಡ್ತೀನಿ. ನಮ್ಮ ಟೀಂಗೆ ಹೊಸ ಟೀಮ್ ಲೀಡರ್ ಬಂದ. ಮಹಾತರಲೆ. ಪ್ರತಿ ನಿತ್ಯ ಅವನು ಕಿರಿಕ್ ಮಾಡ್ತಿದ್ದರೂ, ನಾನು ಸಹಿಸಿಕೊಳ್ತಾ ಇದ್ದರೂ ಇತ್ತೀಚೆಗೆ ಜಾಸ್ತಿ ಆಗ್ತಾ ಇದೆ. ಹಾಗಂತ ಅವನನ್ನ ಎದುರು ಹಾಕ್ಕೊಳ್ಳೋಕಾಗತ್ತಾ? 'ಫಾಸ್ಟ್ ಗಣಪತಿ' ದೇವಸ್ಥಾನದ ಅರ್ಚಕರು 'ನಿತ್ಯಕರ್ಮಸಾಮುದ್ರಿಕೆ'ಯ ಮೂಲಕ ಭವಿಷ್ಯ ಹೇಳೋದರಲ್ಲಿ ಫೇಮಸ್ಸು. ಅವರನ್ನು ಸಂಪರ್ಕಿಸಿ ನನ್ನ ಸಮಸ್ಯೇನ ಹೇಳಿಕೊಂಡೆ. 'ಬೆಳಿಗ್ಗೆಯಿಂದ ರಾತ್ರಿವರೆಗೂ ಏನೇನು ಮಾಡ್ತೀರ ವಿವರವಾಗಿ ಹೇಳಿ' ಅಂದರು. ಭವಿಷ್ಯಾರ್ಥಿಗಳಿಗೆ ಅವರು ಕೇಳುವ ಮೊದಲ ಪ್ರಶ್ನೆ ಇದೇ. ಅದೇ 'ನಿತ್ಯಕರ್ಮ ಸಾಮುದ್ರಿಕೆ'. ಹೇಳಿದೆ. ಮಧ್ಯೆ ಪ್ರಶ್ನೆಗಳನ್ನು ಹಾಕಿ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುತ್ತಿದ್ದರು. ವಾಕಿಂಗ್ವರೆಗೂ ಬಂದಿದ್ದೆ. ನನ್ನ ಮಾತಿಗೆ ಬ್ರೇಕ್ ಹಾಕಿ 'ಪಾರ್ಕಿಗೆ ಪ್ರದಕ್ಷಿಣೆ ಹಾಕ್ತೀರೋ ಅಪ್ರದಕ್ಷಿಣೆ ಹಾಕ್ತೀರೋ?' ಅಂತ ಕೇಳಿದರು. ನನಗರ್ಥವಾಗಲಿಲ್ಲ.

'ಅಂದರೇ, ಕ್ಲಾಕ್ವೈಸಾ ಆಂಟಿಕ್ಲಾಕ್ವೈಸಾ? 'ಕ್ಲಾರಿಫೈ ಮಾಡ್ತಾ ಹೇಳಿದರು. ಆದರೆ ನನಗೆ ಆಗಲಿಲ್ಲವಲ್ಲಾ. 'ಪಾರ್ಕಿನ ಮುಂದೆ ನಿಂತು ಬಲಕ್ಕೆ ತಿರುಗಿ ಸುತ್ತುಹಾಕ್ತೀನಿ' ಅಂದೆ. ಅಂದರೇ 'ಆಂಟಿಕ್ಲಾಕ್ವೈಸು' ಅಂತ ಗೊಣಗಿಕೊಂಡು ಥಕ್ ಅಂತ ನನ್ನ ಕಡೆ ನೋಡಿ ಥಟ್ ಅಂತ ಹೇಳಿದರು 'ನಾಳೆಯಿಂದ ಕ್ಲಾಕ್ವೈಸಲ್ಲಿ ವಾಕಿಂಗ್ ಮಾಡಿ

ಎಲ್ಲಾ ಸರಿ ಹೋಗತ್ತೆ' ಅಂತ. 'ಮುನ್ನೂರು ರುಪಾಯಿ ಗೂಗಲ್ ಪೇ ಮಾಡಿಬಿಡಿ' ಅಂತನ್ನೋದನ್ನ ಮರೀಲಿಲ್ಲ.

ಸರಿ. ನೆಕ್ಸ್ಟ್ ಡೇ ಮರೀದೆ ಕ್ಲಾಕ್ವೈಸಲ್ಲಿ ವಾಕಿಂಗ್ ಪ್ರಾರಂಭಿಸಿದೆ. ಅರ್ಧ ದೂರ ನಡೆದಿರಬಹುದು. ನನಗೆದುರಾಗಿ ಇನ್ನೊಂದು ಲ್ಯಾಬ್ರಡಾರೂ! ಅದರ ಒಡತಿ ಇನ್ನೂ ಯುವತಿ. ನನ್ನ ಕಣ್ಮನಗಳನ್ನು ಸೆಳೆದಳು. ಫಸ್ಟ್ ಸೈಟಲ್ಲೇ ನನಗೆ ಲೌ ಆಯ್ತು. ಆದರೆ ಆಕ ನನ್ನನ್ನು ನೋಡಿದರೂ ನೋಡದಂತೆ ನನ್ನನ್ನು ದಾಟಿ ಬಿಟ್ಟರೂ, ಜಾನಿ ಮಾತ್ರ ಹಿಂದೆ ತಿರುಗಿ ಹಿಂದೆ ತಿರುಗಿ ನೋಡ್ತಾನೇ ಇದ್ದ ಆ ಇನ್ನೊಂದು ಲ್ಯಾಬ್ರಡಾರನ್ನ.

ನಾಳೆಗಾಗಿ ಇನ್ನೂ ಇ.ಪ್ಪ.ತ್ತ.ನಾ.ಲ.ಕ್ಕು ಗಂಟೆ ಕಾಯಬೇಕಲ್ಲಪ್ಪಾ ಅನ್ನೋದು ಸವಾಲಾಯಿತು. ಮುಂದೆ? ಎರಡನೇ ದಿನ. ಇನ್ನೂ ಹತ್ತಡಿ ದೂರವಿರುವಾಗಲೇ ಒಂದು ಸ್ಮೈಲ್ ಕೊಡೋಣ ಅನ್ನಿಸಿತು. ಯಾಕೋ ಧೈರ್ಯ ಬರಲಿಲ್ಲ. ಹತ್ತಿರ ಬರ್ತಿದ್ದ ಹಾಗೇನೇ ಜಾನಿ ಬಾಲ ಆಡಿಸಿದ. ಆ ಇನ್ನೊಂದೂ ಬಾಲ ಆಡಿಸುತ್ತ ರೆಸ್ಪಾಂಡ್ ಮಾಡಿತು. ಮಾರನೆದಿನ, ಅಂದರೆ ಮೂರನೆದಿನ ಧೈರ್ಯವಹಿಸಿ 'ಹೆಸರೇನು?' ಅಂದೆ. ಕಣ್ಣಲ್ಲಿ ಕೆಂಡಕಂಡೆ. 'ನಾಯಿ ಹೆಸರು ನಾನು ಕೇಳಿದ್ದು'. ಕೆಂಡದ ಮೇಲೆ ನೀರುಬಿತ್ತೇನೋ. 'ಜೂಲಿ' – ತಣ್ಣಗೆ ಬಂತು ಉತ್ತರ. ತಂಪಾಯಿತು ಎನ್ನ ಮನ.

ನಾಲ್ಕನೇ ದಿನ ನನ್ನಲ್ಲಿದ್ದ ಕರೇಜನ್ನೆಲ್ಲಾ ಮಸ್ಟರ್ ಮಾಡಿ ಸ್ಮೈಲ್ ಕೊಟ್ಟೇಬಿಟ್ಟೆ. ಅಬ್ಬ! ಸುಂದರವದನದ ಮೇಲೆ ಮಂದಹಾಸ ಮಿನುಗಿತು. ಕದಪುಗಳು ಕೆಂಪಾದವು. ನನ್ನ ಮನ ಬಣ್ಣದ ಬಲೂನಿನಂತೆ ಉಬ್ಬಿಹೋಯಿತು. ಒಬ್ಬರನ್ನೊಬ್ಬರು ದಾಟಿದ ಮೇಲೆ ಚೈನನ್ನೂ ಬಿಟ್ಟು ಎರಡು ಮುಷ್ಟಿಗಳನ್ನು ಮೇಲೆತ್ತಿ ಒಟ್ಟಿಗೆ ಎರಡನ್ನೂ ಜರ್ಕ್ ಮಾಡಿ ಕೆಳಗಿಳಿಸುತ್ತಾ 'ಯ್ಯ' ಅಂದೆ.

ಸಿಕ್ಕಿದ್ದೇ ಛಾನ್ಸು ಅಂತ ಜಾನಿ ಹಿಂತಿರುಗಿ ಓಡ್ತಾ ಇದ್ದ. ನಾನೂ ಓಡಿ ಹರಸಾಹಸಪಟ್ಟು ಚೈನನ್ನು ಹಿಡಿದಾಯಿತು. ಜೂಲಿಯೊಡತಿ ಮುಸಿಮುಸಿ ನಕ್ಕು ನನ್ನೆದೆಯಲ್ಲಿ ಮತಾಪನ್ನು ಹಚ್ಚಿದಳು. ಪ್ರೀತಿಪ್ರೇಮಗಳು ಹುಟ್ಟಿದರೆ ಒಳಗೊಬ್ಬ ಕವಿಯೂ ಹುಟ್ಟುತ್ತಾನಂತೆ!

ಐದನೇದಿನ. ಒಬ್ಬರನ್ನೊಬ್ಬರು ದಾಟಲಿಲ್ಲ. ಇಬ್ಬರೂ ಅಲ್ಲೇ ನಿಂತೆವು. ಜಾನಿ ಜೂಲಿಯರು 'ನೋಸ್ ಟು ನೋಸ್' ಸಂಭಾಷಣೆಯಲ್ಲಿ ಮುಳುಗಿಹೋಗಿದ್ದವು. ನಮ್ಮಿಬ್ಬರ ಕಣ್ಣುಗಳೂ ಅವುಗಳ ಪ್ರೇಮದಾಟವನ್ನೇ ನೋಡುತ್ತಿದ್ದವು. ಮೆಲ್ಲಮೆಲ್ಲನೆ ಇಬ್ಬರ ದೃಷ್ಟಿಗಳೂ ಅಲ್ಲಿಂದ ಜರುಗಿ ಪರಸ್ಪರ ಒಂದಾದವು. ಜೂಲಿಯೊಡತಿ ನಾಚಿನೀರಾದಳು. ನಾನು 'ನೋಡಿ, ಮೂಕ ಪ್ರಾಣಿಗಳು ಒಂದನ್ನೊಂದು ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿವೆ. ಆದರೆ ನಾವೂ . . 'ಅಂತ ಮುಂದಕ್ಕೆ ಏನು ಹೇಳಬೇಕೂಂತ ಗೊತ್ತಾಗದೆ ಮೌನ ವಹಿಸಿದೆ. ನೇರವಾಗಿ, ದಿಟ್ಟವಾಗಿ, ಸ್ಪಷ್ಟವಾಗಿ ನಮ್ಮ ತಂದೆ ನಿಮ್ಮ ಜತೆ ಮಾತಾಡಬೇಕಂತೆ. ಸಾಯಂಕಾಲ ನಮ್ಮ ಮನೆಗೆ ಬನ್ನಿ' ಅಂತನ್ನುತ್ತಾ ಬೆರಳನ್ನು ಮಹಡಿ ಮನೆಯೊಂದರತ್ತ ತೋರಿಸಿದಳು.

'ಫಾಸ್ಟ್ ಗಣಪತಿ' ದೇವಸ್ಥಾನದ ಅರ್ಚಕರಿಗೆ ಮನಸಾರೆ ವಂದಿಸುತ್ತಾ ತಲೆ ಎತ್ತಿ ನೋಡಿದೆ. ಬೆಳಬೆಳಗ್ಗೆ ಆಕಾಶದ ತುಂಬ ನಕ್ಷತ್ರಗಳು ಕಾಣಿಸಿದವು!

■

# "ಬ್ಯೂಜಿನಾ.....?"

• ಗುಂಡುರಾವ್ ದೇಸಾಯಿ

ಪದ್ದುಗ....ಒಂದು ದಿನ ಕಾಲೊಂದು ಬಂತು....''ನು ಬ್ಯೂಜಿನಾ...."ಎನ್ನುವ ಧ್ವನಿ ಕೇಳಿ ಪುಳುಕಿತನಾದ....'ಓ...ಎಸ್ ..ಎಸ್...ಅದೆ ಧ್ವನಿ ಇಪ್ಪತ್ತು ವರ್ಷಗಳಾದವೇನೊ....? ಆ ಧ್ವನಿಗಾಗಿ ಎಷ್ಟೆಲ್ಲ ತಪಸ್ಸು ಮಾಡತಿದ್ವಿ...ಅದೆ....ನಾನು ಆ ಧ್ವನಿ ಬದುಕಿನಲ್ಲಿ ಕೇಳುತ್ತೇನೊ ಇಲ್ವಾ ಅನಕೊಂಡಿದ್ದೆ...ಅದು ನನ್ನದಾದರೆ ಸ್ವರ್ಗವೆ ಧರೆಗಿಳಿದಂತೆ ಭಾವಿಸಿದ್ದೆ...ಬಟ್...ನಿಜಾನಾ...' ಎಂದು ಚಿವಟಿಕೊಂಡು ವಾಸ್ತವವೆಂದು ಖಾತ್ರಿಪಡಿಸಿಕೊಂಡ

"ಹಲೋ....ಯಾರಂತ ಗೊತ್ತಾಯ್ತಾ.....ಬ್ಯೂಜಿನಾ...ಹಾಗಿದ್ರೆ ಆಮೇಲೆ ಮಾಡ್ತಿನಿ" ಅಂದಿತು....ಎರಡು ದಶಕದ ನಂತರೂ ಅದೆ ಮಧುರ ಧ್ವನಿ....ನನ್ನ ಭಾಗ್ಯ ಇವತ್ತು..ಆನ್ ಲೈನ್ ಮಿಟಿಂಗ ನಡಿತಿದ್ರು ಹೊರಬಂದು... "ನೀವು ...ಮೀನಾ ತಾನೆ.....?"

"ಹೊ...ಪದ್ದು ...ಗುರುತು ಹಿಡಿದ್ರಿ....ಸೊ..ನೈಸ್..."

"ಹೇಗೆ ಮರೆಯೋಕೆ ಆಗುತ್ತೆ ಮೇಡಂ....ನಿಮ್ಮೊಂದಿಗಿನ ಆತ್ಮೀಯ ಸ್ನೇಹವನ್ನು..ಹೌದು ನನ್ನ ನಂಬರ್ ಹೇಗೆ ಸಿಕ್ಕಿತು?"...ಎಂದ

"ಹೋ.... ನಾಟಿ... ಮೇಡಂ ಅಂತಿರಾ ಪದ್ದು..ಬಿಟ್ಟಾಕಿ ಕಾಲ ಮಿ ಯಾಜ ಎ ಮೀನಾ ಓನ್ಲಿ.. ಹೇಗೋ ಸಿಕ್ಕಿತಪಾ...ಹೇಳಿ ಎಲ್ಲಿ ಇರೋದು.?.ಏನು..ಕೆಲಸ? ಮನೆ ಮಕ್ಕಳು..." ಆ ಬಗ್ಗೆ ಎಲ್ಲಾ ಚರ್ಚೆ ನಡಿತು.... "ಹೋ..ಸೋ ಲಕ್ಕಿ ಮೇಡಂ..ನೀವು...ಬಾಂಬೆದಲ್ಲಿ ಸ್ವಂತ ಮನೆ...ಸಾಫ್ಟವೇರ್ ಪತಿ...ಬೈದಿ ಬೈ ನಾನು ಬೆಂಗಳೂರಲ್ಲಿ ಇರೋದು..ಬಂದಾಗ ಬನ್ನಿ"ಎಂದ

"ಯಾರ್ರಿ ಅದು ಯಾರ ಜೊತೆ ಮಾತಾಡತಾ ಇರೋದು..." ಪಮ್ಮಿಯ ಧ್ವನಿ ಬಂತು ಒಳಗಿನಿಂದ

"ಅದೆ ನನ್ನ ಕ್ಲಾಸ ಮೇಟ್ ಮೀನಾ ಅಂತ ಹೇಳತಿದ್ದೆನಲ್ಲ.... ಅವರು ಮಾಡಿದ್ದು..."

"ಓ ಮನೆಯವರು ಇದ್ದಾರ ಕೊಡಿ ಮಾತಾಡುವೆ" ಎಂದಳು ಮೀನಾ.

ಭಯದಿಂದ ಕೊಟ್ಟ ಪದ್ದು... "ಹೇಳಿ ಮೇಡಂ ಹೇಗಿದ್ದಿರಿ...ನಾನು ನಿಮ್ಮ ಮನೆಯವರ ಕಾಲೇಜ್ ಮೇಟ್..ಯು ಆರ್ ಲಕ್ಕಿ....ಒಳ್ಳೆ ಪರಸನ್...ನಿಮಗೆ ಸಿಕ್ಕಿದ್ದು" ಎಂದು ಏನೆಲ್ಲಾ ಹೇಳತಿದ್ರೆ ಈಕೆಯ ಮುಖದಲ್ಲಿ ಬೇರೆ ಆಗತಿತ್ತು..ಈಕಿನೂ ಕೂಲಾಗಿ ಮಾತನಾಡಿ... "ಬೆಂಗಳೂರಿಗೆ ಬಂದಾಗ ಬನ್ನಿ" ಎಂದಳು. "ನಿಮ್ಮ ಮಾತು ಕೇಳತಾ ಇದ್ರೆ ನೀವು ಬಹಳ ಒಳ್ಳೆಯವರಾಗಿ ಕಾಣ್ತಿರಿ..ಖಂಡಿತ ಬರತೀನಿ" ಎಂದು ಫೋನ ಕಟ್ ಮಾಡಿದಳು

"ಬರತಾಳಂತೆ ಬರತಾಳೆ.....ಬಿನ್ನಾಣಗಿತ್ತಿ..ಇಪ್ಪತ್ತೈದು ವರ್ಷ ಆದ ಮೇಲೆ ಯಾಕ ನೆನಪಾಯ್ತೋ ಈ ಮೂದೇವಿಗೆ...ನನ್ನ ಗಂಡನ ಬೇಕಾಗಿತ್ತಾ?"ಅಂತ ಕೈ ಕೈ ಹಿಚುಕೊಳ್ಳಾಕತಿದ್ಲು....ಸಮಯ ಸಿಕ್ಕಾಗ ಪದ್ದು ಅವಳ ಬಗ್ಗೆ ಬಹಳ ವರ್ಣನೆ ಮಾಡ್ತಿದ್ದ..ಅವಳು ಕಣ್ಣು ಹಾಗೆ..ಜಡೆ..ಹೀಗೆ...ತುಟಿ ಹಾಗೆ...ನಡೆ ಹೀಗೆ...ಅಂತ...ಹೇಗೆ

ಆಗಲಿಕ್ಕಿಲ್ಲ! ಅವಳದೆ ಫೋನ್ ಬಂದಾಗ..ಸವತಿ ಮತ್ಸರ ಸಹಜವಾಗಿ ಕೆರಳಿತು.....ಮುಖ ಕೆಂಪಾಯಿತು...

"ಯಾಕೆ..?ಹಾಂಗ ದೀಢೀರ್ ನ ಚೇಂಜ್ ಆದಿ!"

"ಆಗದೆ ಏನೋ..ಸಿಕ್ಕಳಲ್ಲ ಆ ಮೂದೇವಿ..ಮುಗಿತು ನನ್ನ ಕಥೆ"

"ಅಂಯ್ಯೋ...ನನ್ನ ಕಥೇನ ಎಲ್ಲಾ ಮುಗುದಾಗಿದೆ.....ಮತ್ತೆಲ್ಲೆ ಶುರುವಾಗೋದು...ನಾನು ಆಕೆ ಬಗ್ಗೆ ಹೇಳತಿದ್ದ ಎಲ್ಲಾ ಮಾತುಗಳು ಸುಳ್ಳು...ಸುಮ್ಮನೆ ನಿನ್ನ ರೇಗಸೋಕೆ ಹಾಗೆ ಮಾಡತಿದ್ದೆ...ಆಕೆ ಕಾಲೇಜಿನ್ಯಾಗ ನಮ್ಮ ಕಡೆ ತಿರುಗಿ ಸಹಿತ ನೋಡತಿರಲಿಲ್ಲ..."

"ಇಷ್ಟ್ಯಾಕ ಹೌಹಾರಿರಿ... ಹೌದು ತಿರುಗಿ ನೋಡಲಾರದ ಮೂದೇವಿ ಈಗ್ಯಾಕ ಫೋನ್ ಮಾಡಿದಳು"

"ನನಗೂ ಗೊತ್ತಿಲ್ಲ...ವಿಚಾರಸ್ತಿನಿ...ಮೋಸ್ಟಲಿ ಕಾಲೇಜ್ ಗ್ರುಪ ನಲ್ಲಿ ನಂಬರ್ ಸಿಕ್ಕಿರಬೇಕು, ಮಾಡಿರಬೇಕು.."

"ಆಕಿ ಫೋನ್ ನಂಬರ್ ಕೊಡಿ ನಾನೇ ವಿಚಾರಸ್ತಿನಿ"

"ಬೇಡಾನೆ ಏನಾದರೂ ಅಂದಿದಿ..ಈಗ ತಾನೆ ಕಾಲ್ ಮಾಡಿದ್ದಾಳೆ ಸಂಬಂಧ ಮುರಿಬೇಡೆ"

"ಹಾಂ..!.ಎಷ್ಟು ನುಲಿಯಾಕತಿರಿ..ಇಪ್ಪತ್ತೈದು ವರ್ಷದಿಂದ ಅವಳ ಇದ್ದಳಾ?"

"ಆಯ್ತು ತಾಯಿ...ನಿನ್ನ ಸಂಗಡ ವಾದ ಮಾಡೋಕಾಗುತ್ತಾ..ಮಾತಾಡತಿಯಲ್ಲ ಮೆಲ್ಲಕ ಮಾತಾಡು."

"ಆಯ್ತು ಮೊದಲು ಜಾಗ ಖಾಲಿ ಮಾಡಿ" ಎಂದ್ಲು.

"ನನ್ಮುಂದನ ಮಾಡೆ..."

" ಹ್ಲುಂ ......"ಅಂತ ಗುರಾಯಿಸಿದಳು.

"ಆಯ್ತು ಮಹರಾಯ್ತಿ ಏನರ ಮಾಡಿಕೊ" ಎಂದು ಕಾಲ್ಕಿತ್ತಿದ.

ಹಿಂಗ್ ಕಾಲ್ ಬಂದದ್ದು ವ್ಯಾಟ್ಸಪ್ ಮೂಲಕ ಚಾಟ್ ಮಾಡವುದರಲ್ಲಿ ಮುಂದುವರೆತು..

ಸ್ನೇಹ ಬೆಳಿತು..ಪದ್ದುನ ಕಲ್ಪನೆಯ ಮೀನಾ ಕಾಲೇಜಿನದ್ದೆ..ಮುದ್ದು ಮುಖ..ಉದ್ದ ಜಡೆ...ಆಕರ್ಷಿಸುವ ಕಂಗಳು...ಅವಳ ಒಂದು ಕರೆಯಿಂದ ಥ್ರಿಲ್ ಆದ ಪದ್ದು ಕಾಲೇಜನಲ್ಲಿ ಕೊನೆಯಾಗಿದ್ದ ಕಾವ್ಯತ್ವವನ್ನು ಹೊರತೆಗೆದ..ನಿತ್ಯ ಒಂದು ಹೊಸ ಕವಿತೆ ಮೀನಾಳಿಗಾಗಿ ಬರೆಯತೊಡಗಿದೆ... "ವಾಟ್ ಎ ಬ್ಯೂಟಿಫುಲ್ ರೈಟಿಂಗ್...ಐ ಲೈಕೈ ಇಟ್.. ಲವ್ ಇಟ್.." ಅಂತ ಮೆಸ್ಸೇಜ್ ಬಂದಿದ್ದೆ ತಡ...ಬರವಣಿಗೆ ಓತಪ್ರೇತವಾಯಿತು..

ಆತ್ಮೀಯತೆ ಹೆಚ್ಚುತ್ತಾ ಹೋಯಿತು ಚಾಟಿಂಗ್ ಎಲ್ಲೆ ಮೀರದಂತೆ ನಡೆದಿತ್ತು..ಕೆಲಸದ ಮೇಲೆ ಪದ್ದು ದೆಹಲಿಗೆ ಹೋಗಿದ್ದಾಗ ಬೆಂಗಳೂರಿಗೆ ಬಂದಿದ್ದಳು...ಮನೆಗೂ ಬಂದು ಹೋಗಿದ್ದಳು...ಪದ್ದು ತಡವರಿಸಿದ್ದು ಅಷ್ಟಿಷ್ಟಲ್ಲ. "ಏನ್ರಿ ನಾನು ಇಲ್ಲದಾಗ ಬಂದುಬಿಟ್ರಿ....." ಎಂದು ಜಗಳಾನೂ ತೆಗೆದು ಮಾತು

ಬಿಟ್ಟಿದ್ದ.. “ಇನ್ನೊಮ್ಮೆ ನಾನು ಇರುವಾಗ ಬರಬೇಕು” ಎನ್ನುವ ಒತ್ತಾಯಕ್ಕೆ ಮತ್ತೆ ಗೆಳೆತನ ಮುಂದುವರೆದಿತ್ತು

ಫೋನ್ ಬೆಸೆದ ಹಳೆಯ ಬಾಂಧವ್ಯ ಒಂದು ಹೊಸ ಕನಸ್ಸನ್ನೆ ಸೃಷ್ಟಿಸಿತ್ತು. ಪರಸ್ಪರ ಭೇಟಿಯಾಗುವ ದಿನ ಬಂದೆಬಿಟ್ಟಿತು..ಬೆಂಗಳೂರಿಗೆ ಮದುವೆಗಾಗಿ ಬರುತ್ತಿದ್ದೇನೆ ಎನ್ನುವ ಮೆಸ್ಸೆಜ್ ಬಂದಿದ್ದೆ ತಡ..ಖುಷಿಯಿಂದ “ಪಮ್ಮಿ ನಾಳೆ ಮೀನಾ ಬರತಾಳಂತೆ “ ಎಂದು ಓಡೋಡಿ ಬಂದು ಹೇಳಿದ

“ಹೌದು ನನಗೆ ಗೊತ್ತು”

“ಹಾಂ! ಹೇಗೆ...?”

“ಕಾಲ್ ಮಾಡಿ ಹೇಳಿದ್ದಾಳೆ”

“ನಿನಗೆ ಏನು ಅನಿಸಲಿಲ್ವಾ?”

“ಏನು ಅನಿಸಬೇಕು...ಒಳ್ಳೆಯವರಿದ್ದಾರೆ,,,ಯು ನೋ ವಿ ಆರ್ ಗುಡ್ ಫ್ರೇಂಡ್ಸ..ಲಾಸ್ಟ್ ಟೈಮ್ ಬೆಂಗಳೂರಿಗೆ ಬಂದಾಗ ಸಕತ್ ಕಂಪನಿಕೊಟ್ರು”

“ಯು....ಲಕ್ಕಿ...ನಾನು ಇರಲಿಲ್ಲ ಅಲ್ಲ..ನಾಳೆ ಬರತಾರಂತೆ..!”

“ಬರಲಿ..ಏನೇನು ಮಾಡಬೇಕು ಹೇಳಿ ಮಾಡುವೆ....”

“ಮಾಡುವಿಯಂತೆ...ಒಂದು ಕೇಳಲಾ...ನಾನು ಹೇರ್‌ಡ್ರೈ ಮಾಡಿಕೊತೀನಿ...ಫೇಸ್ ವಾಶ ಮಾಡಿಸಿಕೊಂಡು ಬರತೀನಿ....”

“ಅಯ್ಯೋ ಅಷ್ಟ್ಯಾಕೆ ಕೇಳತಿರಿ..ನಾನೇ ಹೇರ್ ಡ್ರೈ ಮಾಡ್ತೀನಿ” ಅಂತ ಮಾಡಿದಳು......”.ಬೇಕಾದ್ರೆ ಪಾರ್ಲರ್ ಗೆ ಹೋಗಿ ಬನ್ನಿ” ಎಂದು ಕಳಿಸಿಕೊಟ್ಟಳು

ಪದ್ದು ಕಕ್ಕಾಬಿಕ್ಕಿ...ಒಂದು ಕೂದಲು ಸಿಕ್ರೆ ವಾರಗಟ್ಟಲೆ ವಿಚಾರಣೆಗೆ ಒಳಪಡಿಸುತ್ತಿದ್ದವಳು...ಇವಳಾ? “ಮೀನಾ ನೀನು ಗ್ರೇಟ್ ಒಂದೆ ಭೇಟಿಯಲ್ಲಿ ಏನೆಲ್ಲಾ ಬದಲಾವಣೆ ಮಾಡಿಯೇ?” ಎಂದು ಕರೆ ಮಾಡಿ ಹೇಳಿದ್ದ. “ಇಲ್ಲಾ ಪದ್ದು..ನಿಮ್ಮ ಮಿಸೆಸ್ ಸಿಂಪಲಿ ಗ್ರೇಟ್” ಅಂದಿದ್ದಳು

“ಹೋ..ಹೋ..ಇಬ್ಬರ ನಡುವೆ ಹೊಂದಾಣಿಕೆ ನಮಗೆ ಅನಕೂಲ” ಎಂದು ಮುಸಿ ಮುಸಿ ನಕ್ಕಿದ್ದ

ಸೆಲೂನ್ ಹೋಗಿ ಬಂದ ಪದ್ದುರಾಯರನ್ನು ಪಮ್ಮಿ ಗುರುತಿಸಲಾರಲಾದಳು.. “ಮದುವೆಗೂ ಅಷ್ಟು ತಯ್ಯಾರಾಗಿರಲಿಲ್ಲ...ಇಂದು ಹಳೆಯ ಸ್ನೇಹಿತೆ ಬರತಾಳೆ ಅಂದ್ರೆ ಎಷ್ಟು ಚಂದ ಸಿದ್ಧರಾಗಿರಿ” ಎಂದು ಮೂಗು ಮುರಿದಳು... “ಸೆಲ್ಯೂನ್ ಹುಡುಗ ಮಾಡಿದ್ದು, ನಾನು ಶೇವಿಂಗ್ ಅಷ್ಟೆ ಮಾಡಂತ ಹೇಳಿದ್ದೆ” ಎಂದು ಡೈವರ್ಟ ಮಾಡಿಮೆಲ್ಲನೆ ಕನ್ನಡಿ ನೋಡಿಕೊಂಡು....ತನ್ನನ್ನೆ ತಾನು ನಂಬದಾದ...ಇಪ್ಪತ್ತು ವರ್ಷ ಹಿಂದೆ ಹೋದ ಮೇಕಪ್ಪ ಆಗಿತ್ತು..ಒಳೊಳಗೆ ಖುಷಿ ಪಟ್ಟ..

ಮಧ್ಯಾಹ್ನ ಊಟಕ್ಕೆ ಬರತಿನಂದಿದ್ರು. ಅಂದು ಯಾಕೊ ಸಮಯ ಓಡಲಿಲ್ಲ...ಒಂದು ತಾಸು ವರ್ಷವಾದಂತೆ ಭಾಸವಾಗತೊಡಗಿತು.. ಟೈಮು ಓಡ್ತಾ ಇಲ್ಲ ಇಲ್ಲ ಎಂದು ತಡವರಿಸಿದ.ಬೋನಿನಲ್ಲಿ ಹಾಕಿದ ಹುಲಿಯಂತೆ ಅತ್ತ ಇತ್ತ ಓಡಾಡತೊಡಗಿದೆ.

"ಯಾಕ ಅಷ್ಟು ಅವಸರ ಮಾಡ್ತೀರಿ ತಡಿ..ಬರತಾರೆ...ನನಗಾಗಿ ಇಷ್ಟು ತಡವರಿಸಿದ್ದೀರಾ?" ಎಂದು ಕೊಂಕು ನುಡಿದಳು

ಪದ್ದುಗ ನಿಜ ಅನಿಸ್ತು...ಹೌದಲ್ಲ ಎಂದು ಫ್ಲಾಶ ಬ್ಯಾಕಿಗೆ ಹೋದಾಗಲೇ ಕಾರ್ ಸಪ್ಪಳ ಆಯ್ತು... "ಬಂದ್ರು ನೋಡ್ರೀ" ಎಂದು ಪಮ್ಮಿ ಕರೆದಳು... "ನಾನು ಒಳಗಿರತೀನಿ ನೀನು ಕರಕೊಂಡು ಬಾ" ಎಂದು ಒಳಹೋದ...

ಒಳಗೆ ಬಂದದ್ದಾಯಿತು...ಆ ಧ್ವನಿ ಕೇಳತಾ ಪುಳಕಿತನಾಗುತ್ತಿದ್ದ.. "ಎಲ್ಲಿ ನಿಮ್ಮನೆಯವರು ಕಾಣ್ತಾನೆ ಇಲ್ಲ ಎಂದು ಧ್ವನಿ ಬಂದಿದ್ದೆ ತಡ....ಪದ್ದು ಹಾಲನಲ್ಲಿ ಕಾಲಿಟ್ಟ......ರೋಮಾಂಚನದಿಂದ..."ಹೋ ಪದ್ದು ಹೌ ಆರ್ ಯು?"ಎಂದು ಧ್ವನಿ ಬಂದ ಮೀನಾಳತ್ತ ಧೃಷ್ಟಿ ಬೀರಿದ

"ಫೈನ್.....!" ಅಂತ ಹಾಗೆ ನಿಂತ

"ಏನ್ರಿ ಹೇಗಿದ್ದವರು ಹಾಗೆ ಇದ್ದೀರಿ....ಅದೆ ಡೈನಾಮಿಕ್ ಪರ್ಸನಾಲಟಿ" ಎಂದು ಕೈಕುಲುಕಿ ವಿಶ್ ಮಾಡಿದಳು

".......''ಪದ್ದುಗ ಮಾತು ಹೊರಡಲಿಲ್ಲ.

ಪದ್ದು "ಯಾಕ್ರಿ ಹಾಗೆ ನಿಂತ್ರಿ?" ಎಂದ್ಲು ಮೀನಾ

"ಬಹಳ ದಿನದ ಮೇಲೆ ನೋಡಿದ್ದಾರಲ್ಲ...ಮಾತು ಬರುತ್ತಿಲ್ಲ ರಾಯರಿಗೆ..ಹೌದಲ್ರಿ?" ಎಂದು ಪಮ್ಮಿ ತೀವಿದಳು

"ಎಸ್ ಪದ್ದು...ನಾವು ನೋಡಿ ಹೇಗಾಗಿ ಬಿಟ್ಟಿವಿ...ನಿಮ್ಮನ್ನ ನೋಡಿದ್ರೆ ಸಂಕಟ ಆಗುತ್ತಪ"

ಪದ್ದುಗ ಸಂಕಟ ಪಡೋ ಸಮಯ ಅದಾಗಿತ್ತು..ತನ್ನ ಕಲ್ಪನೆಯ ಮೀನಾ ಆಗಿರಲಿಲ್ಲ...ಉದ್ದ ಕೂದಲು ಹೋಗಿ ಚೊಟಾಗಿತ್ತು...ಕಂಗಳು ಬತ್ತಿದ ಬಾವಿಯಂತಾಗಿದ್ದವು..ತುಂಬಿದ ಗಲ್ಲ ಒಳ ಸೇರಿದ್ದವು..ಹಲ್ಲು ಬಿದ್ದ ಅರ್ಧ ಬೊಚ್ಚಾಗಿತ್ತು.. ತುಂಬಿಕೊಂಡ ಶರೀರ ಬಡಕಲಾಗಿತ್ತು....ಪದ್ದನು ಕಾಣಲು ಮಾಡಿಕೊಂಡ ಬಂದ ಮೇಕಪ್ ಹೆಣಕ್ಕೆ ಶೃಂಗಾರ ಮಾಡಿದಾಂಗೆ ಆಗಿತ್ತು.

"ಮಾತಾಡಿ ಪದ್ದು ಪೋನ್ ನಲ್ಲಿ ಏನೆಲ್ಲ ಮಾತಾಡತಿದ್ರಿ...? ಎಂದು ಮೀನಾ ಒತ್ತಾಯಿಸಿದಳು

ಪಮ್ಮಿ ಮುಸಿ ಮುಸಿ ನಗುತಿದ್ದಳು

ಇವರೆಲ್ಲಿ ಮಾತಾಡತಾರಿ ಮೊದಲಿಂದಲೂ ಹಾಗೆ ಮೌನಿ ಬಾಬಾ ಎಂಟು ನಾನು ಊಟಕ್ಕ ಅರೆಂಜ್ ಮಾಡ್ತೀನಿ ಅಂತ ಒಳಹೋದಳು..

ಮೀನಾ ಖುಷಿ ಖುಷಿಯಿಂದ ಮಾತಾಡತಿದ್ರು....ಪದ್ದುನು ಮಾತಾಡಿದ...ಆದರೆ, ಕನಸಿನ ಕಟ್ಟೆ ಒಡೆದು ಹೋಗಿತ್ತು...ಆದರೂ ಮಾತಾಡಿದ ಹಳೆಯ ನೆನಪುಗಳನ್ನು ಹಂಚಿಕೊಂಡ...ಕಾಲೇಜಿನಲ್ಲಿ ಸೊಕ್ಕಿನಿಂದ ಮೆರೆದ ಮೀನಾ ಈಕಿನಾ ಅಂತ ಕನಿಕರನೂಗೊಂಡ..

ಹೋಗುವ ಸಮಯ ಬಂತು...ಮೀನಾ ಖುಷಿಯಿಂದ ಟಾಟಾ ಮಾಡಿದಳು...ಪಮ್ಮಿಯ ಪದ್ದುನ ಕೈ ಹಿಡಿದು ಟಾಟಾ ಮಾಡಿಸಿದಳು..

ಪಮ್ಮಿಯ ಗೆಲುವಿನ ಗುಟ್ಟಾ ರಟ್ಟಾಗಿತ್ತು.....ಅಂದಿನಿಂದ ಪಮ್ಮಿಗೆ ಮೀನಾ ಪದ್ದುನ ರೇಗಿಸುವ ವಸ್ತುವಾದಳು.. ■

# ಆಸ್ಪತ್ರೆಯಲ್ಲಿ ರಸನಿಮಿಷಗಳು

• **ಪ್ರಕಾಶ್**

ಆಸ್ಪತ್ರೆ ಅಂದ ತಕ್ಷಣ ಮೊದಲ ಪ್ರತಿಕ್ರಿಯೆಯೆಂದರೆ ಭಯ, ಆತಂಕ. ಇದು ಸಹಜವೇ ಅನ್ನಿ. ಹೆಸರು ಕೇಳಿದ ತಕ್ಷಣ ರೋಗ ರುಜಿನಗಳು, ಆಪರೇಷನ್ ಇತ್ಯಾದಿ ನೆನಪುಗಳು ಬಂದು ಕಾಡುತ್ತವೆ. ಆದರೆ ಅದನ್ನೇ ಕಾರ್ಯಕ್ಷೇತ್ರವನ್ನಾಗಿ ಇರಿಸಿಕೊಂಡಿರುವ ನನ್ನಂತಹ ವೈದ್ಯರುಗಳಿಗೆ ನವಿರು ಹಾಸ್ಯದ ಪ್ರಸಂಗಗಳು ಆಗಾಗ ಆಗುತ್ತಲೇ ಇರುತ್ತವೆ. ಒಂದು ದಿನ ಆಸ್ಪತ್ರೆಗೆ ಬೆಳಗ್ಗೆ ಹೋಗಿ ಕಾರನ್ನು ಪಾರ್ಕ್ ಮಾಡಿ ನಡೆದು ಬರುತ್ತಿದ್ದೆ. ಮುಂದಿನಿಂದ ಒಬ್ಬ ಸೂಟು ಟೈ ಧರಿಸಿದ್ದ ತರುಣ ನನ್ನೆಡೆಗೆ ಬಂದು, 'ಗೈನೆಕಾಲಜಿ ವಾರ್ಡ್ ಎಲ್ಲಿದೆ ಸಾರ್?' ಅಂತ ಕೇಳಿದ. ನನಗೋ ಆಶ್ಚರ್ಯ, ಇವನಿಗೇಕೆ ಗೈನೆಕಾಲಜಿ, ಪುರುಷ ಪ್ರಕೃತಿಯನ್ನು ಅರಸಿ ಹೋಗುತ್ತಿದ್ದಾನಲ್ಲಾ ಅಂತ. ಅವನ ಸಂಬಂಧಿ ಮಹಿಳೆ ಯಾರನ್ನಾದರೂ ನೋಡಲು ಹೋಗುತ್ತಿರಬಹುದೆಂದು ಊಹಿಸಿ, ಅವನಿಗೆ ದಾರಿ ತೋರಿಸುತ್ತಾ, 'ಯಾವ ಡಾಕ್ಟರನ್ನು ನೋಡಬೇಕಾಗಿತ್ತು?' ಅಂತ ವಿಚಾರಿಸಿದೆ. ಅವನು 'ಎಲ್ಲರನ್ನೂ' ಅಂದಾಗ ನನಗೇಕೋ ತುಂಬಾನೇ ಗಾಬರಿ ಆಯಿತು. ಮರುಕ್ಷಣದಲ್ಲೇ ಅವನು ಕೈಯ್ಯಲ್ಲಿ ಹಿಡಿದಿದ್ದ ಬ್ರೀಫ್ ಕೇಸ್ ಕಣ್ಣಿಗೆ ಬಿತ್ತು. ಅದರ ಮೇಲೆ, 'ಡ್ರಗ್ ಕಂಪನಿ ರೆಪ್' ಅಂತ ಇದ್ದದ್ದು ನೋಡಿ ಮನಸ್ಸು ನಿರಾಳವಾಯಿತು.

***

ಬೆಳಗ್ಗೆ ಆರುಘಂಟೆ. ಫೋನ್ ರಿಂಗಾಯಿತು. 'ಹಲೋ' ಅಂದೆ. ಆಚೆ ಬದಿಯಿಂದ 'ಡಾಕ್ಟ್ರೆ, ನಮ್ಮ ಅಜ್ಜಿ ಸೀರಿಯಸ್ಸು, ಆಸ್ಪತ್ರೆಗೆ ಹೋಗ್ತಿದೀನಿ. ನೀವೂ ಬರುಕ್ಕಾಗುತ್ತಾ' ಅಂತ ದನಿ. 'ಯಾರು ನೀವು' ಅಂದೆ. 'ನಾನು ರಾಜು ಸಾರ್' ಅಂತಂದ ರಾಜು. ಆಸ್ಪತ್ರೆಗೆ ಹೋದೆ. ಅಲ್ಲಿ ನನ್ನ ಹಿಂದೆಯೇ ಇಬ್ಬರು ಬಂದರು. 'ತುಂಬ ಥ್ಯಾಂಕ್ಸ್ ಡಾಕ್ಟ್ರೆ, ಅಜ್ಜಿ ಚೆನ್ನಾಗಿ ಆಗಿದ್ದಾರೆ. ನಾನೇ ನಿಮಗೆ ಬೆಳಗ್ಗೆ ಫೋನ್ ಮಾಡಿದ್ದು' ಅಂತಲೂ ಸೇರಿಸಿದ. ನನಗೆ ಕುತೂಹಲ. ಎಮರ್ಜೆನ್ಸಿ ವಾರ್ಡಿಗೆ ಹೋದೆ. ರಾಜು ನನ್ನ ಜೊತೆಯಲ್ಲೇ ಬಂದು 'ಪರ್ಸನಲ್ ಆಗಿ ಅಜ್ಜಿನ ನೋಡಿಕೊಂಡು ಚಿಕಿತ್ಸೆ ಮಾಡಿದರು.' ಅಂತ ಹೇಳಿದ. ಹೋಗಿ ಡ್ಯೂಟಿ ಡಾಕ್ಟರನ್ನು ವಿಚಾರಿಸಿದೆ. ಅವನಿಂದ ಸಂಗತಿ ತಿಳೀತು.

ಅಜ್ಜಿಗೆ ಶುಗರ್ ತೀರ ಕಡಿಮೆಯಾಗಿತ್ತಂತೆ. ಉಸಿರಾಟ ಸ್ವಲ್ಪ ಮಂದವಾಗಿದ್ದರಿಂದ ಡ್ಯೂಟಿ ಡಾಕ್ಟರು ಅಂಬು ಬ್ಯಾಗ್ ತನ್ನಿ ಅಂತ ಕೂಗಿದರಂತೆ. (ಆರ್ಟಿಫಿಷಿಯಲ್ ಮ್ಯಾನ್ಯುಯಲ್ ಬ್ರೀದಿಂಗ್ ಯೂನಿಟ್ ಎಂಬ ಈ ಸಾಧನ ಒಂದು ಬೆಲೂನಿನ ತರಹದ ಒಂದು ಮಾಸ್ಕು. ಇದನ್ನ ಮುಖದ ಮೇಲಿಟ್ಟು ಆಕ್ಸಿಜನ್ ಕೊಡುವ ವ್ಯವಸ್ಥೆ ಇರುತ್ತೆ.) ಆದರೂ ನನಗೆ 'ಪರ್ಸನಲ್' ಆಗಿ ಅಜ್ಜಿನ ನೋಡಿಕೊಂಡಿದ್ದರ ಮರ್ಮ ತಿಳಿಯಲಿಲ್ಲ. ಆಮೇಲೆ ಅಕಸ್ಮಾತ್ ರೋಗಿಯ ರಿಜಿಸ್ಟರ್ ಕಣ್ಣಿಗೆ ಬಿತ್ತು. ಅದರಲ್ಲಿ 'ಅಂಬುಬಾಯಿ– 80 ವರ್ಷ' ಅಂತ ಇತ್ತು

***

ಒಮ್ಮೆ ಜಯರಾಮ್ ಫೋನ್ ಮಾಡಿದ. 'ಆಸ್ಪತ್ರೆಲೇ ಇದೀಯಾ' ಅಂತ ಕೇಳಿದ. 'ಹೌದು' ಅಂದೆ. 'ನಮ್ಮ ಅಂಕಲ್ ಮೇಲೆ ಯಾರೋ ಮೋಟರ್‌ಸೈಕಲ್ ಡಿಕ್ಕಿ ಹೊಡೆದು ಅವರು ಆಸ್ಪತ್ರೆ ಸೇರಿದ್ದಾರೆ. ವಯಸ್ಸಾದೋರು ಏನೋ ಎಂತೋ. ಸ್ವಲ್ಪ ಅವರನ್ನ ನೋಡ್ತೀಯಾ' ಅಂತ ಅಂಗಲಾಚಿದ. ಕ್ಯಾಷುಯಾಲಿಟಿಗೆ ಧಾವಿಸಿದೆ. ರೋಗಿ ಮಲಗಿದ್ದರು. 'ನೀನು ಯಾತಕ್ಕೆ ಬಂದೇಪ್ಪಾ ಇಲ್ಲಿಗೆ' ಅಂತ ಗಾಬರಿಯಿಂದ ತೊದಲಿದರು. ಸ್ವಲ್ಪ ಕನ್ಕಷನ್ ಆಗಿತ್ತು ಅಷ್ಟೇ. ಅದಕ್ಕೆ ಯಾಕೆ ಇಷ್ಟು ಹೆದರಿದ್ದಾರೆ ಅಂತ ಆಶ್ಚರ್ಯವೂ ಆಯಿತು. ಪಾಪ ಆ ಮೋಟರ್ ಸೈಕಲ್ ಸವಾರ ಆತಂಕದಿಂದ ಅಲ್ಲಿ ಆಚೆ ನಿಂತಿದ್ದ. ಶಬರಿಮಲೆಗೆ ಹೊರಟಿದ್ದ ಅಂತ ಕಾಣುತ್ತೆ. ಕಪ್ಪು ಜುಬ್ಬ, ಕಪ್ಪು ಲುಂಗಿಧಾರಿಯಾಗಿದ್ದ. ಅವನ ವದನ ಹೊರವಾದ ಕಪ್ಪು ಗಡ್ಡ ಮೀಸೆಗಳಿಂದ ಶೋಭಿಸುತ್ತಿತ್ತು. ಅವನ ಪಕ್ಕದಲ್ಲೇ ಅವನ ವಾಹನವೂ ಇತ್ತು. ಅದರ ಪೆಟ್ರೋಲ್ ಟ್ಯಾಂಕ್ ಮೇಲೆ ಯಮಾಹಾ ಎಂಬ ಹೆಸರಿನ ಹಾ ಅಕ್ಷರ ಮಾಸಿ ಅಳಿಸಿಹೋಗಿತ್ತು. ಅಪಘಾತದಲ್ಲಿ ಬಿದ್ದ ಮುದುಕರ ಕಣ್ಣಿಗೆ ಕಾಣಿಸಿದ ದೃಶ್ಯವನ್ನು ಊಹಿಸಿ, ಮುದುಕರ ಗಾಬರಿ ಅರ್ಥವಾಗಿ ನಾನು ಸ್ವಾಮಿಯೇ ಶರಣಂ ಎನ್ನುತ್ತಾ ಆ ಸವಾರನನ್ನು ಕಳಿಸಿಕೊಟ್ಟೆ.

■

---

# ಭಾಗವತೋತ್ತಮ

(ಸುಭಾಷಿತ ಚಮತ್ಕಾರ)

ಶಾಸ್ತ್ರ ಹತ್ತಲಿಲ್ಲವೆ? ಕವಿಯಾಗು !
ಕವಿತೆ ನಿಲುಕದೇ ? ಪುರಾಣ ಹೇಳು !
ಪುರಾಣ ನೀಗದೆ ? ಆಗೆಲೋ ರೈತ !
ರೈತಿಕೆಯಲಿ ಸೋತರೆ ಭಾಗವತ !

ಶಾಸ್ತ್ರೇಷು ಹೀನಾಃ ಕವಯೋ ಭವಂತಿ
ಕವಿತ್ವಹೀನಾಶ್ಚ ಪುರಾಣಭಟ್ಟಾಃ ।
ಪುರಾಣಹೀನಾಃ ಕೃಷಕಾ ಭವಂತಿ
ಭಗ್ನಾಃ ಕೃಷೇರ್ಭಾಗವತಾ ಭವಂತಿ ॥

**ಪಾ.ವೆಂ.ಆಚಾರ್ಯ**

# ಹೀಗೊಂದು ಕಾಫಿ ಪುರಾಣ

**• ವಿದ್ಯಾ ಮೂರ್ತಿ**

ಎಲ್ಲರೂ ಕಾಫಿ ಕುಡಿಯುವ ಮಜಾದ ಬಗ್ಗೆ ಕೊಂಡಾಡುತ್ತಿರುವಾಗ ನನಗೆ ಮನದ ಮೂಲೆಯಲ್ಲೆಲ್ಲೋ ನನ್ನಂಥ ಕಾಫಿ ಕುಡಿಯದವರ ಕುರಿತು ಎಲ್ಲರಿಗೂ ಏನೋ ಒಂದು ಆಕ್ಲಾಸ (ತಾತ್ಸಾರ) ಇದೆಯೆಂದೂ, ಕಾಫಿ ಸವಿಯದಿದ್ದ ಮೇಲೆ ಇದ್ದರೇನು ಫಲ ಎಂದೂ ಅವರೆಲ್ಲರ ಒಕ್ಕಾಫಿಕೊರಲಿನ ಅಭಿಪ್ರಾಯ ಎಂದು ನನ್ನ ಅನಿಸಿಕೆ. ನಾನೂ ಒಂದು ಕಾಲದಲ್ಲಿ ಕಾಫಿ ಪ್ರಿಯಳೇ. ಆದರೆ ನಮ್ಮ ಮನೆಯಲ್ಲಿ ಚಿಕ್ಕ ಮಕ್ಕಳು ಎಂದರೆ ಹೈಸ್ಕೂಲ್ ಮುಗಿಯುವ ತನಕ ಕಾಫಿ ಕುಡಿಯಲು ಸಮ್ಮತಿ ಇರಲಿಲ್ಲ. ಅದರಲ್ಲೂ ನಮ್ಮ ಕುಟುಂಬದ ಏಕಮೇವಾದ್ವಿತೀಯ ಹೆಣ್ಣು ಮಗುವಾದ ನನಗೆ ಕಾಫಿ ಸಂಪೂರ್ಣ ವರ್ಜ್ಯ. ಅದಕ್ಕೆ ನಮ್ಮ ಅಮ್ಮನ, ವಿಶೇಷವಾಗಿ ನನ್ನ ಅಮ್ಮನ ಕೈರುಚಿಯ ಕಾಫಿಯ ಘಮಕ್ಕೆ ಅರಳುತ್ತಿದ್ದ ನನ್ನ ಮೂಗಿನ ಹೊಳ್ಳೆಯ ಹರವನ್ನು ನೋಡಲಾಗದೆ ನನ್ನಮ್ಮ ನಮ್ಮಪ್ಪನಿಗೆ ತಿಳಿಯದಂತೆ ಲೋಟ ಭರ್ತಿ ಹಾಲಿಗೆ ಎರಡೇ ಚಮಚ ಡಿಕಾಕ್ಷನ್ ಬೆರೆಸಿ ಕೊಟ್ಟರೆ, ಇಷ್ಟು ಕಂಡ್ಯಾ ಕೃಷ್ಣ ಭಟ್ಟ ಎಂದು, ಅದನ್ನೇ ಚಪ್ಪರಿಸಿ ಕುಡಿಯುತ್ತಿದ್ದೆ. ಆದರೆ ಏನೇ ಆದರೂ ಬೇರೆಯವರ ಮನೆಯಲ್ಲಿ ಎಷ್ಟೇ ಬಲವಂತ ಮಾಡಿದರೂ ಕಾಫಿ ಕುಡಿಯಬಾರದೆಂಬ ಕಟ್ಟಪ್ಪಣೆ ಪಾಲಿಸಬೇಕಿತ್ತು. ಬೇರೆ ಮನೆಗಳಲ್ಲಿ ನನ್ನಮ್ಮನ ಕಾಫಿಯ ಹಾಗೆ ಇರಲೂ ಸಾಧ್ಯವಿರಲಿಲ್ಲ. ಹಾಗಾಗಿ ನನಗೆ ಅದೇನೂ ಅಂಥ ಕಷ್ಟವಾಗಲಿಲ್ಲ.

ನಮ್ಮ ಮನೆಯ ಕಾಫಿಗೆ ಏನು ಅಷ್ಟೊಂದು ಐತಿಹ್ಯ ಎಂಬೊಂದು ಕೊಂಕಿನ ಪ್ರಶ್ನೆ ನಿಮ್ಮಲ್ಲಿ ಉದ್ಭವವಾಗಿದೆ ಎಂದು ನನಗೆ ಖಚಿತವಾಗಿ ಗೊತ್ತು. ಹಾಗೆಂದು, ಹೆತ್ತವರಿಗೆ ಹೆಗ್ಗಣ ಮುದ್ದು ಕಾಫಿ ಅಂತೆಲ್ಲ ತೀರ್ಮಾನಿಸಬೇಡಿ, ನಿಜಕ್ಕೂ ಕಮಲಮ್ಮ, ಕಮಲ ಚಿತ್ತಿ, ಕಮಲತ್ತೆ, ಮುನ್ನಿ, (ಇದೆಲ್ಲಾ ಸಂಬೋಧನೆಗಳೂ, ನಮ್ಮಮ್ಮನಿಗೇ), ಕೇಶವಣ್ಣ, ಮಾಮ, ಕೇಶವಾಚಾರ್, ಮೇಷ್ಟು (ಇದೆಲ್ಲಾ ನನ್ನಪ್ಪ) ಮನೆ ಕಾಫಿ ಕುಡಿಯಕ್ಕೇಂತಾನೇ ನಮ್ಮ ಮನೆಗೆ ಬಂಧುಮಿತ್ರರು ನೆವ ಹುಡುಕಿಕೊಂಡು ಬರುತ್ತಿದ್ದರು. ಹಾಗೇ ಬಂದರೆ ಕೊಡ್ತಾ ಇರಲಿಲ್ಲ ಅಂತ ಅಲ್ಲ, ಅದೇನೋ ನಾವು ಮಕ್ಕಳಿಗೆ ಹಾಗನ್ನಿಸುತ್ತಿತ್ತು. ನಮ್ಮ ಮನೆಯಲ್ಲಿ ರೆಡಿಮೇಡ್ ಪುಡಿಗಾಗಲೀ, ಕಾಫೀಬೀಜಕ್ಕಾಗಲೀ ತಾವಿರಲಿಲ್ಲ. ಅಪ್ಪ ಇಂಡಿಯನ್ ಕಾಫಿಬೋರ್ಡಿನಿಂದ ಪ್ಲಾಂಟೇಶನ್ ಎ ಮತ್ತು ಪಿ ಬೆರ್ರಿ ಕಾಫಿ ತಳಿಗಳ ಹಸಿಬೀಜ ತಂದು ಮನೆಯಲ್ಲೇ ಹುರಿಯುತ್ತಿದ್ದರು, ಅಲ್ಲ ಹುರಿಸುತ್ತಿದ್ದರು. (ಈ ಕಾಫಿಯಿಂದಾಗಿಯೇ, ಖ್ಯಾತ ಗಾಯಕ ಸಿ. ಅಶ್ವತ್ಥ್ ಅವರ ಪತ್ನಿ ಚಂದ್ರಾ ಅವರ ತಂದೆ, ಕಾಫಿ ಬೋರ್ಡ್ ರಾಜು ಅವರ ನಂಟು ಮಡಿಕೇರಿಯಿಂದಲೇ ಶುರುವಾಗಿದ್ದು) ಹಾಂ, . . . ವಿಷಯಕ್ಕೆ ಬಂದೆ, ಕಾಫಿ ಬೀಜ ಹುರಿಸುತ್ತಿದ್ದರು ಎಂದೆನಲ್ಲಾ, ಬೇರೆ ಯಾರೂ ಅಲ್ಲ, ಹತ್ತು ವರ್ಷದ, ನಾನು, ಹನ್ನೆರಡು ವರ್ಷಗಳ ನನ್ನಣ್ಣ ವೇಣು, ಇಬ್ಬರೂ ಸರದಿಯಂತೆ. . . ಹುರಿಯಲು ಒಂದು ಸಾಧನವಿತ್ತು. ಅದೊಂದು ಅಗ್ಗಿಷ್ಟಿಕೆಯ ತರದ ಒಲೆ, ಆಯತಾಕಾರದ್ದು, ಅದರೊಳಗೆ ನಿಗಿ ನಿಂಗಿ ಕೆಂಡ, ಆ ಒಲೆಯ ಎರಡೂ ತುದಿಯಲ್ಲಿ ಕಮಾನಿನಾಕಾರದ ಪುಟ್ಟ ಹಳ್ಳ, ಕಿರುಬೆರಳು ತೂರಿಸಬಲ್ಲಷ್ಟು, ಆ ಹಳ್ಳದಲ್ಲಿ, ಹುರಿಯಲು ಬಳಸುವ ಪುಟ್ಟ ಸಿಲಿಂಡರಾಕಾರದ ಕಬ್ಬಿಣದ ಪೆಟ್ಟಿಗೆ, ಅದರ ಎರಡೂ ಬದಿಯ

ಸಮತಲಕ್ಕೆ ಏಳು ರಂಧ್ರಗಳು, ಅದಕ್ಕೆ ಪುಟ್ಟದೊಂದು ಸ್ಲೈಡಿಂಗ್ ಡೋರ್, ಒಂದು ಬದಿಯ ಮಧ್ಯದಲ್ಲಿ ಅದನ್ನು ಹಿಡಿದು ತಿರುಗಿಸುವ ಹಿಡಿಕೆ. ಅದನ್ನಿಟ್ಟು, ಈಗ ಆ ಕಬ್ಬಿಣದ ಡಬ್ಬದೊಳಗೆ ಒಂದು ಒಬ್ಬೆ ಪ್ಲಾಂಟೇಶನ್ ಎ, ಮತ್ತೊಂದು ಒಬ್ಬೆ ಪೀ ಬೆರ್ರಿ, ಬೇರೆ ಬೇರೆಯಾಗಿ ಹಾಕಿ, ಅದರ ಕದ ಮುಚ್ಚಿ, ಅದನ್ನು ಕೆಂಡ ತುಂಬಿದ ಅಗ್ಗಿಷ್ಟಿಕೆಯ ಮೇಲೆ ಪ್ರತಿಷ್ಠಾಪಿಸಿ ಅದನ್ನು ತಿರುಗಿಸುತ್ತಾ ಕೂರಬೇಕು, ಸಾಮಾನ್ಯ ಭಾನುವಾರದಂದೇ ಈ ತಿರುಗಿಸಾಟ, ದೊಡ್ಡವರಿಗೆಲ್ಲ ದೊಡ್ಡ ದೊಡ್ಡ ಕೆಲಸ, ಹಾಗಾಗಿ, ದೊಡ್ಡವರಿಗೆ ಸಣ್ಣಕೆಲಸವೂ, ಸಣ್ಣವರಿಗೆ ದೊಡ್ಡ ಕೆಲಸವೂ ಆಗಿದ್ದ ಈ ಕೈಂಕರ್ಯ, ಸಣ್ಣವರಾದ ನನ್ನ ಮತ್ತು ನನ್ನ ಅಣ್ಣನ ಪಾಲಿಗೆ. ಈ ಹುರಿಯುವ ಪ್ರೋಗ್ರಾಂ ಇದ್ದ ಭಾನುವಾರ, ಬೇಗ ಏಳಲೇಬೇಕು, ಎದ್ದು ಹಲ್ಲುಜ್ಜಿ, ಒಂದು ದೊಡ್ಡ ಲೋಟ ಹಾಲಿನ ಜೊತೆ ಎರಡೋ ಮೂರೋ ಅಮ್ಮ ಮಾಡಿದ ಗೋಧಿ ಬಿಸ್ಕತ್ತು ತಿಂದು, ಅದರ ಮುಂದೆ ಮಣೆ ಹಾಕಿ ಕೂರಿಸುತ್ತಿದ್ದರು, 'ಪೃಷ್ಠ ಶೀತ' ಆಗಬಾರದೆಂದು. ಕೂತು ತಿರುಗಿಸುತ್ತಿದ್ದರೆ, ಅದರ ಕ್ಕೆಕ್ಕೆಕ್ಕೆಕ್ಕೆ. . . . . ಕ್ಕಾ. . ಎಂಬ ಏಕತಾನತೆ ಯು ಸದ್ದಿಗೆ, ನಮ್ಮ ಲೆಕ್ಕದಲ್ಲಿ ನಾವು ಬೆಳಗಿನ ಜಾವವೇ ಎದ್ದಿರುವ ಕಾರಣ, ಕಣ್ಣರೆಪ್ಪೆಗಳು ಅಯಸ್ಕಾಂತ_ ಕಬ್ಬಿಣದ ತುಣುಕುಗಳಂತೆ ಅಂಟಿಕೊಂಡು ಹೋಗುತ್ತಿದ್ದವು. ಅಮ್ಮ ಆಗಾಗ ಬಂದು ನಾವು ಕೆಲಸ ಸರಿಯಾಗಿ ಮಾಡುತ್ತಿರುವೆವೇ ಎಂದು ಖಾತ್ರಿ ಮಾಡಿಕೊಂಡು ಕೆಂಡ ಮತ್ತೆ ಕೆದಕಿ ಉರಿ ಸರಿಮಾಡಿ, ನೀವು ಬೇಗ ಸರಿಯಾಗಿ ಹುರಿದರೆ, ನಿಮಗೇ ಮೊದಲು ತಿಂಡಿ ಎಂದು ಆಸೆ ಹುಟ್ಟಿಸಿ ಹೋಗುತ್ತಿದ್ದರು. ಆಗ ತಕ್ಷಣ ನಿದ್ದೆ ಹಾರಿ ಹೋಗಿ ಕೆಲಸ ಚುರುಕುಗೊಳ್ಳುತ್ತಿತ್ತು. ಅಪ್ಪಿತಪ್ಪಿ, ನಾವು ಜೂಗರಿಸುವಾಗ ಅಪ್ಪ ಬಂದರೋ, ನಮ್ಮ ಕತೆ ಗೋವಿಂದ. ಅದಕ್ಕೆ ಆದಷ್ಟೂ ಎಚ್ಚರಿಕೆಯಿಂದ ಈ ಕೆಲಸ ನಡೆಯುತ್ತಿತ್ತು, ಆದರೂ ಚಳಿಗಾಲದಲ್ಲಿ, ಬೆಳಗಿನ ಜಾವದಲ್ಲಿ ಆ ಕೆಂಡದ ಮುಂದೆ ಕುಳಿತು ತೂಕಡಿಸುವುದರ ಸುಖದ ಮುಂದೆ ಬೇರಾವ ಸುಖವೂ ಸಾಟಿಯೇ ಇಲ್ಲ. ಆ ಸುಖ ಒಮ್ಮೊಮ್ಮೆ ಕೆಂಡದ ಶಾಖವನ್ನು ಕೈಗೆ ಸೋಕಿಸಿ ಬೆಚ್ಚಿ ಬೀಳಿಸುತ್ತಿತ್ತು.

ಎಲ್ಲಾ ಸರಿ, ಸ್ವಲ್ಪ ಹೊತ್ತಿನ ನಂತರ ಆ ಕಾಫಿ ಬೀಜ ಹಸಿಯಿಂದ ಗರಿಗರಿಯಾಗುವ ಪಯಣದಲ್ಲಿ ಅದೊಂದು ಹೊಟ್ಟೆ ತೊಳಸುವಂಥ ವಾಸನೆ ಪಸರಿಸತೊಡಗುತ್ತೆ, ಆ ಸಮಯಕ್ಕೆ ಆ ಜಾಗ ಬಿಟ್ಟು ಓಡಿಹೋಗುವಂತಾಗುತ್ತದೆ, ಥೂ ದರಿದ್ರ, ಯಾರಿಗಪ್ಪ ಬೇಕು ಈ ಕಾಫಿ ಎಂದು ಬೈದು ಕೊಳ್ಳುತ್ತಲೇ, ಊಂ ನಾನು ಇನ್ನು ತಿರುಗಿಸಲ್ಲ ಎಂದು ಮುಸಿಮುಸಿ ಅಳುತ್ತಾ ಗೊಣಗುತ್ತಿದ್ದಂತೆ (ಅಪ್ಪನ ಕಿವಿಗೆ ಬೀಳದಂತೆ), ಅಮ್ಮ ಬಂದು ರಮಿಸಿ, "ಇನ್ನೊಂದು ಒಬ್ಬೆ ವೇಣು ಮಾಡ್ತಾನೆ, ಇದನ್ನು ಬೇಜಾರು ಮಾಡಿಕೊಳ್ಳದೆ ಬೇಗ ಮುಗಿಸಿ, ಕೈ ತೊಳೆದು ಬಂದರೆ, ನಿನ್ನ ಅಂಗೈ ಮೇಲೆ ತುಪ್ಪ ಸಕ್ಕರೆ ಹಾಕ್ತೀನಿ, ಇಷ್ಟ ಬಂದ ಹಾಗೆ ನೆಕ್ಕಿಕೊಂಡು, ಕೈ ತೊಳೀಬೇಕು ಸರೀನಾ," ಎಂದು ಹೇಳಿ ಎದ್ದು ತಿಂಡಿ ಮಾಡಲು ಹೋಗುತ್ತಿದ್ದರು. ನಾನು ತುಪ್ಪ ಸಕ್ಕರೆ ಅಂಗೈಯಲ್ಲಿ ನೆಕ್ಕುವ ಕನಸು ಕಾಣುತ್ತಾ ಮುಂದುವರಿಯುತ್ತಿದ್ದೆ. ಸ್ವಲ್ಪ ಹೊತ್ತಿನಲ್ಲೇ ಚಟ್ಪಟ್ ಎಂದು ಕಾಫಿ ಬೀಜದ ಹೊಟ್ಟು ಆ ಡಬ್ಬದ ತೂತುಗಳಿಂದ ಆಚೆಗೆ ಹಾರುತ್ತಿತ್ತು. ಆಗ ಅಮ್ಮನನ್ನು ಕರೆದರೆ, ಅಮ್ಮ ಆ ಡಬ್ಬದ ಮುಚ್ಚಳ ತೆಗೆಯುವ, ಮೊಳ ಉದ್ದದ, ಮುಂದೆ ಕೊಕ್ಕೆ ಇರುವ ಕಬ್ಬಿಣದ ಸರಳು ತಂದು, ಆ ಕೊಕ್ಕೆ ಯಿಂದ ಮುಚ್ಚಳ ತೆಗೆದು ನೋಡಿ "ಇನ್ನೊಂದೈದು ನಿಮಿಷ ಪುಟ್ಟ, ಆಗಿಹೋಗತ್ತೆ,

ನೀನು ಎರಡರಿಂದ ಹನ್ನೆರಡರವರೆಗೂ ಮಗ್ಗಿ ಹೇಳಿ ಮುಗಿಸಿ ಕರಿ, ಬರ್ತೀನಿ"ಎಂದು ಮೆತ್ತಗೆ, ಮಹಾ ಗಣಿತಾರಿಯಾದ ನನ್ನ ತಲೆಗೆ ಬಲೇ ಜಾಣತನದಿಂದ ಲೆಕ್ಕವನ್ನು ತುಂಬುವ ಪ್ರಯತ್ನ ಮಾಡಿ ಹೋಗುತ್ತಿದ್ದಳು ಆ ಚಾಣಾಕ್ಷ ಹಳ್ಳಿ ಮಗಳು. ಅಂತೂ ಇಂತೂ ತಪ್ಪು ತಪ್ಪಾಗಿ ಮಗ್ಗಿ ಹೇಳುತ್ತಾ, ನಡುನಡುವೆ ಎಗರಿಸುತ್ತ, ಮತ್ತೆ ಸರಿ ಮಾಡಿ ಹೇಳುತ್ತಾ ಮಗ್ಗಿ ಮುಗಿಸುವ ವೇಳೆಗೆ ಹದವಾಗಿ ಕಾಫಿ ಬೀಜ ಹುರಿದ ಘಮ ನಿಧಾನವಾಗಿ ಪಸರಿಸಿ, ನನ್ನ ಮೂಗಿನ ಹೊಳ್ಳೆ ಅರಳುವ ವೇಳೆಗೆ ಅಮ್ಮ ಬಂದು ಮುಚ್ಚಳ ತೆಗೆದು ನೋಡಿ "ಜಾಣ ಮರಿ, ಎಷ್ಟು ಕರೆಕ್ಟ್ ಆಗಿ ಮಾಡಿದ್ದೀಯಾ"ಎಂದು ಮುದ್ದಿಸಿ ಹುರಿದ ಬೀಜವನ್ನು ಚೌಕಾಕೃತಿಯ ಅಲ್ಯೂಮಿನಿಯಂ ತಟ್ಟೆಯಲ್ಲಿ ಹಾಕಿ ಮೊಗಚುವ ಕೈಯಿಂದ ಹರಡುತ್ತಿದ್ದರು. ಅಲ್ಲಿಗೆ ಅವತ್ತಿನ ನನ್ನ ಹುರಿಯುವ ಕೆಲಸ ಮುಗಿದು ನಾನು ಮೇಲೆದ್ದು ಸಣ್ಣಗೆ ಸದ್ದು ಮಾಡುತ್ತಾ, ಎರಡೂ ಕೈಗಳನ್ನು ಮೇಲೆತ್ತಿ ಸೊಂಟ ತುಸು ಹಿಂದಕ್ಕೆ ಬಾಗಿಸಿ, ಲಟ ಲಟ ಮೈಮುರಿದರೆ ಏನೋ ಸುಖ. ಕೈತೊಳೆದು ಅಂಗೈ ಮೇಲೆ ತುಪ್ಪ ಸಕ್ಕರೆ ಹಾಕಿಸಿಕೊಂಡು, ಅಮ್ಮ ಹಣೆಯ ಮೇಲಿತ್ತ ಮುತ್ತಿಗೆ ಮುದಗೊಂಡು, ಸಕ್ಕರೆ ತುಪ್ಪ ನೆಕ್ಕುತ್ತಾ ಹೊರಗೋಡುತ್ತಿದ್ದೆ.

ನಮ್ಮ ಮನೆಯಲ್ಲಿ ಸಾಮಾನ್ಯವಾಗಿ ಡಿಕಾಕ್ಷನ್ ಬಹಳ ಮೊದಲೇ ಹಾಕಿಡುತ್ತಿರಲಿಲ್ಲ, ಬೆಳಗಿನ ಡೋಸ್ ಕಾಫಿ ಕುಡಿಯುವ ಅರ್ಧ ಮುಕ್ಕಾಲು ಗಂಟೆ ಮೊದಲು, ಕಾಫಿ ಬೀಜ, ಪುಡಿ ಮಾಡುವ ಮಿಶಿನ್ ನಲ್ಲಿ ಕಾಫಿ ಬೀಜ ಹಾಕಿ ಕೈಯಲ್ಲಿ ತಿರುಗಿಸುವಾಗ, ಬೀಜ ಫಿಲ್ಟರ್‌ಗೆ ಹಾಕುವ ಪುಡಿಯಾಗಿ, ಆ ಮೆಷಿನ್‌ನ ಅಡಿಯಲ್ಲಿಟ್ಟ ಹೆಚ್ಚು ಆಳವಿರದ ಬಟ್ಟಲಲ್ಲಿ ಶೇಖರವಾಗುತ್ತಿತ್ತು. ಅದನ್ನು ತೆಗೆದುಕೊಂಡು ಹೋಗಿ, ಆ ಕಾಲಕ್ಕೆ ಇಂಡಿಯನ್ ಕಾಫಿ ಬೋರ್ಡ್‌ನಲ್ಲಿ ಮಾತ್ರ ಸಿಗುತ್ತಿದ್ದ, ಜಗ್ ಮಾದರಿಯ ಕಾಫಿ ಫಿಲ್ಟರ್ಗೆ ಪುಡಿ ಹಾಕಿ, ಅದರ ಮೇಲೆ ಕೊತಕೊತ ಕುದಿವ ನೀರನ್ನು ಒಂದು ಶೈಲಿಯಲ್ಲಿ ಸುರಿಯುವಾಗ ಮೇಲೇರುತ್ತಿದ್ದ ಆ ಕಾಫಿಯ ಆರೋಮ ತುಂಬಿದ ಹಬೆ ಮುಖಕ್ಕೆ ಬಡಿದರೆ ಆಹಾಹಾ ಏನಾನಂದ, ಆ ಇಡೀ ಜಗ್ಗನ್ನೇ ಗಂಟಲಿಗೆ ಬಗ್ಗಿಸಿಬಿಡಬೇಕೆನ್ನುವಷ್ಟು ಆತುರ. ಇಪ್ಪತ್ತು ನಿಮಿಷಕ್ಕೆ ಡಿಕಾಕ್ಷನ್ ಫಿಲ್ಟರ್ನ ಕೆಳ ಖಾನೆಯಲ್ಲಿ ಶೇಖರವಾಗುತ್ತಿತ್ತು, ಗಟ್ಟಿಯಾಗಿ. ಆಗ ಮತ್ತೆ ಪುಡಿಯ ಮೇಲೆ ಅರ್ಧ ಲೋಟ ನೀರನ್ನು ಕುದಿಸಿ ಸುರಿಯುತ್ತಿದ್ದು, ಆಗ ಪುಡಿಯ ಸಂಪೂರ್ಣ ಸಾರ ಕೆಳಖಾನೆಗೆ ರವಾನೆ. ಸರಿಯಾಗಿ ಅರ್ಧ ಗಂಟೆಯ ನಂತರ ಕಾಫಿ ಬೆರೆಸುವ ಕ್ರಿಯೆ ಆರಂಭ.

ಅದಕ್ಕೂ ಮೊದಲು ನಮ್ಮ ಕಾಫಿ ಅಷ್ಟು ಸೊಗಸಾಗುವ ಮತ್ತೊಂದು ಮಜಲನ್ನು ನಿಮಗೆ ತಿಳಿಸಲೇ ಬೇಕು. ನಮ್ಮ ಮನೆಯಲ್ಲಿ ಸುಮ್ಮನೆ ಹಾಗೆಯೇ ಕುಡಿಯಲು, ಮೊಸರು, ಬೆಣ್ಣೆಗೆ ಹಸುವಿನ ಹಾಲು, ಕಾಫಿಗೆ ಮಾತ್ರ ಎಮ್ಮೆ ಹಾಲು, . ಹಾಲಿನಲ್ಲಿ ನೀರಿನಂಶ ಎಷ್ಟಿದೆ ಎಂದು ಪತ್ತೆ ಮಾಡಲು ಅಪ್ಪ ಲ್ಯಾಕ್ಟೋ ಮೀಟರ್ ಇಟ್ಟಿದ್ದರು, ಹಾಲಿನವ ತರುವ ಹಾಲನ್ನು ಒಂದು ನೀಳವಾದ ಗಾಜಿನ ಬಾಟಲಿಗೆ ಸುರಿದು ಅದನ್ನು ಹಾಲಿನವನ ಮುಂದೆಯೇ ಹಾಲಿನ ಮೀಟರ್ ಹಾಕಿ ತೋರಿಸುತ್ತಿದ್ದರು, ನನಗೆ ಸರಿಯಾಗಿ ಗೊತ್ತಿಲ್ಲ, ಆ ಮೀಟರ್ ಹಾಲಿನಿಂದ ಮೇಲೆ ಬಂದರೆ ಹಾಲಿಗೆ ನೀರು ಬೆರೆಸಿಲ್ಲ ಎಂದರ್ಥ, ಅಪ್ಪಿತಪ್ಪಿ ಮೀಟರ್ ಮೇಲೇಳಲಿಲ್ಲವೋ ಹಾಲಿನವನ ಪಾಡು ಕೇಳಬೇಡಿ, ಎಷ್ಟು ನೀರಿನ ಬೆರೆಕೆಯೋ, ಅಷ್ಟು ದುಡ್ಡು ಕಟ್. ಈ ಕ್ರಮ

ಹಾಲಿನವ ನೀರು ಬೆರೆಸಿಲ್ಲ ಎಂದು ಸುಳ್ಳು ಹೇಳಿ ದಬಾಯಿಸಿದಾಗ ಮಾತ್ರ, ಅವನಾಗೇ ನೀರು ಬೆರೆಸಿದ್ದೇನೆಂದು ಹೇಳಿಬಿಟ್ಟರೆ ಈ ತರದ ಕಠಿಣ ಕ್ರಮ ಇರುತ್ತಿರಲಿಲ್ಲ, ಅವನು ನಿಜ ಹೇಳಿದ್ದಕ್ಕೆ.

ಅಪ್ಪ ವರಾಂಡದಲ್ಲಿ ಹಾಲಿನ ಪರೀಕ್ಷೆ ಮಾಡುವಾಗ ನಾನು, ನನ್ನ ಕಡೆಯ ಅಣ್ಣಂದಿರಿಬ್ಬರೂ ಮಂಡಿಯ ಮೇಲೆ ಕೈಯೂರಿ ಬಾಗಿ ನಿಂತು ನೋಡುತ್ತಿದ್ದೆವು, ಹಾಲಿನವ ಸಿಕ್ಕಿಹಾಕಿಕೊಂಡು ಅಪ್ಪನ ಬಳಿ ಬೈಸಿಕೊಳ್ಳುವಾಗ ನಮಗೆ ಏನೋ ಅನಿರ್ವಚನೀಯ ಆನಂದ, ನಮ್ಮಪ್ಪನ ಬೈಗುಳವೇ ಕೇಳಲು ಚೆಂದ, ಗುರುಘಾತಕ, ಕತ್ತೆ ಭಡವ, ಕಳ್ಳಖದೀಮ, ಮೋಸದ ಸಂತತಿ, ಹೀಗೆ. . . . ಪಾಪ ಆ ಹಾಲಿನವ ನಿಗೆ ಕಳ್ಳಖದೀಮ ಎಂಬುದೊಂದೇ ಅರ್ಥವಾಗುತ್ತಿದ್ದ ಬೈಗುಳ, ಮಿಕ್ಕೆಲ್ಲ ಬೈಗುಳನ್ನೂ, ಅವನು ಅದೇನೋ ಬಿರುದು ಬಾವಲಿ ಎಂಬಂತೆ ಸ್ವೀಕರಿಸುತ್ತಿದ್ದ. ಅದನ್ನು ನೋಡಿ ನಮಗೆ ನಗುವೋ ನಗು, ಇನ್ನು ಜೋರಾಗಿ ನಕ್ಕರೆ ಅದಕ್ಕೂ ಬೈಗುಳ ತಿನ್ನಬೇಕಾಗುವುದೆಂದು ಜಾಗ ಖಾಲಿ ಮಾಡುತ್ತಿದ್ದೆವು. ಇಂಥ ಅಮೋಘ ಕ್ಷೀರಾಮೃತವನ್ನು ಹದವಾಗಿ ಕಾಯಿಸಿ ಅದಕ್ಕೆ ಚಿಕೋರಿ ರಹಿತ ಕಾಫಿ ಡಿಕಾಕ್ಷನ್ ಬೆರೆಸಿ, ಹೊಗೆಯಾಡುತ್ತಿರುವ ಕಾಫಿ ಕುಡಿದರೇ. . . . . . ಸ್ವರ್ಗಕ್ಕೂ ಮಿಗಿಲಾದದ್ದು ಏನಾದರೂ ಇದ್ದಿದ್ದಿದ್ದಾದರೆ ಅಲ್ಲೇ ಎಲ್ಲರೂ ತೇಲಾಡುತ್ತಿದ್ದರು. . . .

ಕಾಫಿಯ ಬಗ್ಗೆ ಇಷ್ಟೆಲ್ಲಾ ತಿಳಿದವಳು, ಮೋಹವಿದ್ದವಳು, ನಾನು, ಕಾಫಿಯಿಂದ ದೂರಾದದ್ದಾದರೂ ಹೇಗೆ? ನಾನು ಬೇರೆಯವರ ಮನೆಯಲ್ಲಿ ಕಾಫಿ ಕುಡಿಯಬಾರದೆಂಬ ಕಾನೂನಿತ್ತಲ್ಲ, ಇಂಥದ್ದೊಂದು ಸಂದರ್ಭದಲ್ಲಿ ನಾನು, ಅಮ್ಮ ನನ್ನಿಬ್ಬರು ಅಣ್ಣಂದಿರೊಂದಿಗೆ ನಮ್ಮ ಪರಿಚಯಸ್ಥರ ಮನೆಗೆ ಹೋಗಿದ್ದೆ. ಅವರಿಗೂ ತಮ್ಮ ಮನೆಯ ಕಾಫಿಯ ಬಗ್ಗೆ ಬಹಳ ಹೆಮ್ಮೆ ಇತ್ತು ನಮ್ಮ ಥರವೇ, ಅವರು "ನಮ್ಮನೇಲೂ ನಿಮ್ಮ ಮನೆ ಥರಾನೇ, ಆಗ ಪುಡಿ ಮಾಡಿ ಆಗ ಕಾಫಿಗೆ ಹಾಕೋದು, ಒಂದು ನಿಮಿಷ ಮಾತಾಡ್ತಿರಿ, ಪುಡಿ ಮಾಡಿ ಕಾಫಿಗೆ ಹಾಕಿ ಬಂದ್ಬಿಡ್ತೀನಿ"ಎಂದು ಎದ್ದರು, ಅಮ್ಮ ತಕ್ಷಣ ನನ್ನ ಕಡೆ ನೋಡಿದರು, ಅವರಿಗೊಂದು ಗುಮಾನಿ, ಮನೆಯಲ್ಲೂ ಕಾಫಿ ಪುಡಿಯ ಘಮ ಆಸ್ವಾದಿಸುವ ಆಸೆಗೆ ನಾನೇ ಕಾಫಿ ಪುಡಿ ಮಾಡುತ್ತಿದ್ದರಿಂದ, ಇಲ್ಲೂ ಅಂಥದ್ದೇ ಮೆಷಿನ್ ಇದ್ದಿದ್ದರಿಂದ ನಾನೇ ಮಾಡಲು ಹೊರಟು ಬಿಡುವೆನೆಂದು, ಅವರಂದುಕೊಂಡಿದ್ದನ್ನು ನಾನು ಸುಳ್ಳು ಮಾಡಲೇ ಇಲ್ಲ. "ಮಾಮಿ ನಾನೇ ಪುಡಿ ಮಾಡ್ತೀನಿ, ನೀವು ಮಾತಾಡ್ತಿರಿ" ಎಂದು ಎದ್ದೆ, "ಪರವಾಗಿಲ್ಲಪ್ಪಾ, ನಿಮ್ಮ ಮಗಳು ತುಂಬಾ ಜಾಣೆ"ಎಂದು ಅವರು ಅಮ್ಮನ ಬಳಿ ಹೊಗಳಿದ್ದನ್ನು ಕೇಳಿ ಉಬ್ಬುತ್ತಾ. . . ಗರಗರ ಸದ್ದಿನಲ್ಲಿ ಪುಡಿಮಾಡಿ ಅವರಿಗೆ ಒಪ್ಪಿಸಿ, ದೊಡ್ಡವರ ಕಾಫಿ ನನಗೂ ಸಿಗುವ ಕಲ್ಪನಾ ವಿಲಾಸದಲ್ಲಿ ತೇಲುತ್ತಾ ಕುಳಿತೆ. ಅವರು ಕಾಫಿಗೆ ಹಾಕಿ ಬಂದು ನಮ್ಮೊಡನೆ ಮಾತನಾಡುತ್ತಾ ಕುಳಿತರು. ಇವಳೂ ಕಾಫಿ ಕುಡೀತಾಳ, ಎಂದು ನನ್ನ ಕುರಿತು ಅಮ್ಮ ನನ್ನು ಕೇಳಿದಾಗ ಅಮ್ಮ ಇಲ್ಲ ಎಂದೂ, ನಾನು ಹೂಂ ಎಂದು ಒಟ್ಟಿಗೇ ಹೇಳಿದಾಗ, ಅಮ್ಮ ತಬ್ಬಿಬ್ಬು, ಅವರಿಗೆ ನಗು. ಆಮೇಲೆ ಅವರೇ ಅಮ್ಮನಿಗೆ "ಯೋಚನೆ ಮಾಡಬೇಡಿ, ನಮ್ಮನೇಲೂ ಚಿಕೋರಿ ಹಾಕಲ್ಲ, ಅರ್ಧ ಲೋಟ ಕೊಡ್ತೀನಿ ಅಷ್ಟೇ" ಎಂದು ಸಮಾಧಾನಿಸಿದರು. ನನ್ನ ಸಂತಸಕ್ಕೆ ಪಾರವೇ ಇರಲಿಲ್ಲ, ಒಳಗಿನಿಂದ ಹಬೆಯಾಡುವ ಬಿಸಿಬಿಸಿ ಕಾಫಿ, ಜೊತೆಗೆ ಖಾರಾಶೇವೆ, ನಮ್ಮ ಸೇವೆಗೆ ಬಂತು, ನಮ್ಮ ಮುಂದೆ ಎರಡೂ ತಟ್ಟೆ

ಇಟ್ಟ ಕೂಡಲೇ ನಾನು ತಡಮಾಡದೇ, ಎಡಗೈಯಲ್ಲಿ ಕಾಫಿ, ಬಲಗೈಯಲ್ಲಿ ಅರ್ಧ ಮುಷ್ಟಿ ಸೇವೆ ತೆಗೆದುಕೊಂಡು, ಎರಡು ಕಾಳು ಬಾಯಿಗೆ ಹಾಕಿ, ಅದರ ಜೊತೆಗೇ ದೊಡ್ಡವರ, ಹೆಚ್ಚು ಹಾಲು ಬೆರೆಸದ ಕಾಫಿಯನ್ನು ಗುಟಕರಿಸಿದೆ. . . . . . ಅಬ್ಬಾ ಏನದು, ಏನದರ, ವಾಸನೆ, ದೇವರೇ. , . . ಕುಡಿಯಲೂ ಆಗುತ್ತಿಲ್ಲ ಉಗಿಯಲೂ ಆಗುತ್ತಿಲ್ಲ, ಎದ್ದು ಅವರ ಮನೆ ಹಿತ್ತಲಿಗೆ ಓಡಿ ಹೋದೆ, ಯಾರಾದರೂ ನನ್ನ ಹಿಂದೆ ಬರುವಷ್ಟರಲ್ಲಿ ಬಾಯಲ್ಲಿರುವುದೆಲ್ಲಾ ಹೊರಹಾಕಿ ಬಾಯಿ ತೊಳೆದುಕೊಳ್ಳುವಷ್ಟರಲ್ಲಿ, ನನ್ನಮ್ಮ, ಅವರು ಇಬ್ಬರೂ ಏನಾಯ್ತು ಏನಾಯ್ತು ಎನ್ನುತ್ತಾ ಓಡಿಬಂದರು. ನಾನೂ ಏನಿಲ್ಲ ಎಂದು ಮತ್ತೆ ಗಂಟಲು ಸರಿ ಮಾಡಿಕೊಳ್ಳುತ್ತಾ ಒಳಗೆ ಬಂದೆ, ನನ್ನ ಹಿಂದೆ ಅವರೂ. ಏನಾಯ್ತು ಎಂದು ಇಬ್ಬರೂ ಪದೇ ಪದೇ ಕೇಳಿದಾಗ ಸುಮ್ಮನಿರಲಾಗಲಿಲ್ಲ, ಎಲ್ಲರ ಲೋಟವನ್ನೂ ನೋಡಿದೆ, ಇನ್ನೂ ಯಾರೂ ಕುಡಿದಿರಲಿಲ್ಲ, ಸಧ್ಯ ಎಂದುಕೊಂಡು, ಹೇಳಿಯೇ ಬಿಟ್ಟೆ, "ಕಾಫಿಯಲ್ಲಿ ಜ. . ಜ. . . . ಜಿರಳೆ ವಾಸನೆ. . . . " 'ಆಂ' ಹೆಚ್ಚು ಕಡಿಮೆ ಅವರು ಚೀರಿಯೇ ಬಿಟ್ಟರು. "ಅಯ್ಯೋ, ಒಂದ್ನಿಮಿಷ ಇರಿ, ಯಾರೂ ಕುಡೀಬೇಡಿ" ಎಂದು ಅವರೇ ಒಂದು ತೊಟ್ಟು ಬಾಯಿಗೆ ಹಾಕಿಕೊಂಡಕೂಡಲೇ, ಅವರೂ ಹಿತ್ತಲಿಗೆ ಓಡಿಹೋದರು. ಅಮ್ಮ, ಅದೇನೋ ವಿಚಿತ್ರವಾದ ಭಾವದಲ್ಲಿ, ನಿಜ ಹೇಳಿ ಅವರನ್ನು ಕಾಫಿಯಿಂದ ಬಚಾವ್ ಮಾಡಿದ್ದಕ್ಕೆ ನಿರಾಳತೆಯೋ, ಅಥವಾ ನಿಜಹೇಳಿ ಮನೆಯವರನ್ನು ಇಕ್ಕಟ್ಟಿಗೆ ಸಿಲುಕಿಸಿದ ಸಿಟ್ಟೋ, ನನ್ನ ಕಡೆ ನೋಡಿದರು. ಅದಕ್ಕೆ ನಾನೇನೋ ಹೇಳಬೇಕೆನ್ನುವಷ್ಟರಲ್ಲಿ ಅವರು ಬಂದು, "ಅಯ್ಯೋ ಸಾರೀಪ್ಪ, ಯಾರೂ ಕಾಫಿ ಕುಡೀಬೇಡಿ, ಅದು ಮಿಶಿನ್ ಎಲ್ಲೋ ಸರಿಯಾಗಿ ಮುಚ್ಚಿರಲಿಲ್ಲ ಅಂತ ಕಾಣುತ್ತೆ, ಅಕ್ಕಳೆ ಪಿಷ್ಠೆ (ಜಿರಳೆ ಮೊಟ್ಟೆ) ಸೇರಿಕೊಂಡು ಬಿಟ್ಟಿದೆ, ಥೂ, ದರಿದ್ರ ಅದನ್ನು ಇನ್ನೂ ಎಷ್ಟು ಕ್ಲೀನ್ ಮಾಡಬೇಕೋ, ಒಂದ್ನಿಮಿಷ ಇರಿ ಎಲ್ಲರಿಗೂ ಬಾದಾಮಿ ಹಾಲು ಮಾಡಿಕೊಡ್ತೀನಿ" ಎಂದು ನಮ್ಮ ಉತ್ತರಕ್ಕೂ ಕಾಯದೆ ಒಳಗೆ ಹೋದರು.

ಅವತ್ತೇ ಕೊನೆ, ನನ್ನ ಜೀವನದಲ್ಲಿ ಇಲ್ಲಿಯವರೆಗೂ ನಾನು ಕಾಫಿ ಕುಡಿಯುವುದಿರಲಿ, ಕಾಫಿ ಪುಡಿ ಅಂಗಡಿಯ ಮುಂದೆಯೂ ಸುಳಿಯುತ್ತಿಲ್ಲ, ಸುಳಿಯುವುದೂ ಇಲ್ಲ.

ವಿ. ಸೂ. ಇಷ್ಟಾದರೂ ನಾನು ಕಾಫಿ ಕುಡಿಯದಿದ್ದರೂ ಕಾಫಿ ಚೆನ್ನಾಗಿ ಮಾಡುತ್ತೇನೆ ಎಂದು ನನ್ನ ಕಾಫಿ ಕುಡಿದವರೆಲ್ಲಾ ಹೇಳುತ್ತಾರೆ.

■

---

**ರಾಮು : ಏನಪ್ಪಾ ಸೋಮು, ಹೊಸ ವರ್ಷ 2021 ಕ್ಕೆ ನಿನ್ನ ಸಂಕಲ್ಪಗಳೇನು**

**ಸೋಮು : ನಾನು 2022 ರ ಜನವರಿಯಿಂದ ಕುಡಿಯುವುದು, ಸಿಗರೇಟು ಸೇದುವುದು, ಕುದುರೆ ರೇಸಿಗೆ ಹೋಗುವುದು ಇವುಗಳನ್ನು ಬಿಟ್ಟುಬಿಡೋಣ ಅಂತ ತೀರ್ಮಾನಿಸಿದ್ದೇನೆ**

**ರಾಮು : 2022ಕ್ಕೆ ಯಾಕೆ 2021ರಿಂದಲೇ ಬಿಡಬಹುದಲ್ವ**

**ಸೋಮು: ಅದು ಹೇಗೆ ಸಾಧ್ಯ, ನಾನು ಅವುಗಳನ್ನು ಷುರು ಮಾಡಬೇಕು ಅಂದುಕೊಂಡಿರೋದು 2021 ರಿಂದ.**

● ದಂಠಳ

**ಎಲೈ ಸೃಷ್ಟಿಕರ್ತನೆ,**

✓ ನೀನು ತಲೆ ಕೊಟ್ಟಿ ನಿಜ, ಆದರೆ ಅದರ ಜತೆಗೆ ತಲೆ ಕೆಡಿಸುವ, ತಲೆ ಕೆಡಿಸಿಕೊಳ್ಳಲು ಸಹ ಅವಕಾಶ ಮಾಡಿದ್ದೀಯ.

✓ ಕೂದಲು ಕೊಟ್ಟಿದ್ದೀಯ, ಅದು ಉದರುವ ಹಾಗೂ ಮಾಡಿದ್ದೀಯ.

✓ ಬರೀ ಹಣೆ ಕೊಟ್ಟಿದ್ದರೆ ಸಾಕಾಗಿತ್ತು ನಾವೇ ಹಣೆ ಬರಹ ಬರೆದುಕೊಳ್ಳುತ್ತಿದ್ದೆವು.

✓ ಮೂಗಿನ ಜತೆ ನೆಗಡಿ ಯಾಕೆ? ಹಾಗೆಯೇ, ಮೂಗು ತೂರಿಸುವ ಬುದ್ಧಿ ಬೇಕಿತ್ತೆ?

✓ ಕಣ್ಣು ಸಾಕಿತ್ತು. ಪೊರೆ? ಜಾಣ ಕುರುಡು ಫ್ರೀ!

✓ ಜಾಣ ಕುರುಡಿನ ಜತೆಗೆ ಜಾಣ ಕಿವುಡು ಬೇರೆ. ಅದಕ್ಕೇ ಕಿವಿ ಕೊಟ್ಟೆಯಾ?

✓ ಬಾಯಿ ಇದೆ ಸರಿ. ಆದರೆ ಬಾಯಿ ಬಿಟ್ಟರೆ ಬಣ್ಣಗೇಡಾಗೋ ಹಾಗೆ ಯಾಕೆ ಮಾಡ್ಬೇಕಿತ್ತು?

✓ ಕೆನ್ನೆ ಫೈನ್. ಸವರಬಹುದು. ಆದರೆ ಗಡ್ಡದ ಬಳುವಳಿ ಯಾಕೆ ಸ್ವಾಮಿ?

✓ ಕುತ್ತಿಗೆ ಇರೋದ್ರಿಂದಲೇ ದಬ್ಬಿಸಿಕೊಳ್ಳೋಕೆ ಆಗ್ತಿರೋದು ಅಲ್ಲವೆ?

✓ ಹೃದಯ ಇದೆ ಸರಿ ಆದರೆ ಒಮ್ಮೊಮ್ಮೆ ಅದನ್ನು ಯಾರೋ ಅಪಹರಿಸ್ತಾರಲ್ಲ..?

✓ ಕಿಡ್ನಿ, ಲಂಗ್ ಮೇಲೆ ನಿನಗೇನು ಅಕ್ಕರೆ, ಡಬಲ್ ಡಬಲ್ ಕೊಟ್ಟಿದ್ದೀಯ?

✓ ಹೊಟ್ಟೆ ಜತೆ ಹೊಟ್ಟೆ ಉರಿ ಖಂಡಿತಾ ಕೊಡಬಾರದಿತ್ತು. ಹೊಟ್ಟೆ ಉರಿಸುವ ಬುದ್ಧಿ ಸಹ.

✓ ಕೈ ಇದೆ ನಿಜ. ಆದರೆ ಕೈ ಕೊಡೊ/ಕೈ ಬಿಡುವ ಹಾಗೂ ಮಾಡಿದ್ದೀಯಲ್ಲ ಪ್ರಭುವೆ?

✓ ಕಾಲಿನ ಜತೆ ಕಾಲೆಯೆಳುವ ಬುದ್ಧಿ ಯಾಕೆ ಬೇಕಿತ್ತೂ ಅಂತ.

✓ ಎತ್ತರ ನೀಡಿದರೆ ಸಾಕೆ? ಎತ್ತರದ ವ್ಯಕ್ತಿ ಆಗೋ ಹೊಣೆ ನಮ್ಮ ಮೇಲೇ ಯಾಕೆ ಕೂರಿಸಿದ್ದು?

**ಆಯ್ತಪ್ಪ, ಹೋಗಲಿ ನಮ್ಮನ್ನು ಸೃಷ್ಟಿ ಮಾಡಿದ ಪರಪಸ್ ಆದರೂ ಹೇಳು ಮಾರಾಯ..**

■

# ದೇಹ ಹೀಗಿರಬೇಕಿತ್ತು



## ಸವಾಲು!

**ಎಂಟು ಗೇಣಿನ ದೇಹ ರೋಮಗ**
**ಳೆಂಟು ಕೋಟಿಯು ಕೀಳ್ಗಳರವ**
**ತ್ತೆಂಟು ಮಾಂಸಗಳಿಂದ ಮಾಡಿದ ಮನೆಯ ಮನವೊಲಿದು**
**ನೆಂಟ ನೀನಿರ್ದಗಲಿದೊಡೆ ಒಣ**
**ಹೆಂಟೆಯಲಿ ಮುಚ್ಚುವರು ದೇಹದ**
**ಲುಂಟೆ ಪರ ಪುರುಷಾರ್ಥ ರಕ್ಷಿಸು ನಮ್ಮನನವರತ**

ಎಂದು ಈ ದೇಹದ ನಗಣ್ಯತೆಯನ್ನು ತಮ್ಮ ಹರಿಭಕ್ತಿಸಾರದಲ್ಲಿ ಕನಕದಾಸರು ಹಾಡಿದರು. ಅಂತಹ ನಶ್ವರ ದೇಹಕ್ಕೆ ರಿಪೇರಿ ಬೇರೆ ದಂಡ ಎಂದು ನಮ್ಮ ಬಹುಪಾಲು ಓದುಗರು ತಾತ್ಸಾರದಿಂದ ಸುಮ್ಮನಾಗಿರಬಹುದು. ಆದರೆ ಹಲವು ಉತ್ಸಾಹೀ ಬರಹಗಾರರು ನಮ್ಮ ಸವಾಲನ್ನು ಸ್ವೀಕರಿಸಿ ದೇಹವನ್ನು ಮಾರ್ಪಡಿಸುವುದರ ಬಗ್ಗೆ ಔಟ್ ಆಫ್ ದ ಬಾಕ್ಸ್ ಚಿಂತನಾಲಹರಿಯನ್ನು ಹರಿಯಬಿಟ್ಟು ಓದುಗರನ್ನು ರಂಜಿಸಹೊರಟಿದ್ದಾರೆ. ದೇಹದ ರಚನೆಯನ್ನು ಗಂಭೀರವಾಗಿ ಪರಿಗಣಿಸದಿರುವುದೇ ಅತ್ಯುನ್ನತ ವೇದಾಂತವೆನ್ನುವುದಾದರೆ, ಈ ಎಲ್ಲ  ಬರಹಗಳೂ ಆ ದೃಷ್ಟಿಕೋನವನ್ನು ಬಹು ಸೂಕ್ತವಾಗಿ ಪ್ರತಿಬಿಂಬಿಸುತ್ತವೆ. 'ಬ್ಯೂಟಿ ಈಸ್ ಓನ್ಲಿ ಸ್ಕಿನ್ ಡೀಪ್' ಅಂತ ಯಾರೋ ಗ್ರೌಛೋ ಮಾರ್ಕ್ಸ್‌ಗೆ ಹೇಳಿದಾಗ, ಆತ, 'ನನಗಷ್ಟಿದ್ದರೆ ಬೇಕಾದಷ್ಟಾಯಿತು. ಬ್ಯೂಟಿಫುಲ್ ಲಿವರ್ ಯಾರಿಗೆ ಬೇಕು?' ಅಂತ ನಗಾಡಿದನಂತೆ.

ಮುಂದಿನ ಪುಟಗಳನ್ನು ಆ ಮನೋಭಾವದಿಂದ ಓದಿರೆಂದು ಬಿನ್ನಹ.

**– ಶಿವಕುಮಾರ್**

---

## ಜವಾಬು !!

### ಅದ್ಭುತಯಂತ್ರ

**– ಸುಧೀಂದ್ರ ಹಾಲ್ದೊಡ್ಡೇರಿ**

ದೇವರು ಸೃಷ್ಟಿಸಿದ ಒಂದು ಅದ್ಭುತಯಂತ್ರ ಮಾನವ. ದೇಹದ ಪ್ರತಿಯೊಂದು ಅಂಗಗಳ ನಿರ್ಮಾಣ, ಜೋಡಣೆ, ಸಮನ್ವಯ ಕಾರ್ಯಾಚರಣೆಗಳನ್ನು ಗಮನಿಸಿದರೆ ದೇವರೊಬ್ಬ  ಎಂಜಿನಿಯರ್ ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಉತ್ತಮ ಎಂಜಿನಿಯರ್‌ನ ಗುಣಲಕ್ಷಣವೆಂದರೆ ಯಂತ್ರಗಳ ಸುಗಮ ಕಾರ್ಯಕ್ಕೆ ಅಗತ್ಯವಾದ ರಿಪೇರಿ, ಓವರ್‌ಹಾಲ್ ಮತ್ತು ಮೇಂಟೇನೆನ್ಸ್ ಕ್ರಮವಿಧಿಗಳನ್ನು ಬರೆದಿಡುವುದು. ಆ ಕಾರ್ಯಗಳಿಗೆ ಅಗತ್ಯವಾದ ವರ್ಕ್‌ಶಾಪ್‌ಗಳನ್ನು ನಿರ್ಮಿಸುವುದು. ಜತೆಗೆ ಅಲ್ಲಿನ ಕೆಲಸಗಾರರಿಗೆ ಕಂಪನಿಯಲ್ಲೇ ಸೂಕ್ತ ತರಬೇತಿ ನೀಡುವುದು. ಇವೆಲ್ಲವನ್ನೂ ಸೃಷ್ಟಿಕರ್ತ ಮಾಡದಿರುವುದರಿಂದ ತೊಂದರೆ ಬಂದಾಗಲೆಲ್ಲಾ ಅರೆಬರೆ ತಿಳಿವಳಿಕೆಯ ಮೆಕ್ಯಾನಿಕ್‌ಗಳ ನೆರವಿನಿಂದ ದುರಸ್ತಿ ನಿರ್ವಹಣೆಗಳನ್ನು ಮಾಡಿಕೊಳ್ಳುವ ಸಂಕಷ್ಟ ಮನುಷ್ಯರಿಗೆ ಎದುರಾಗಿದೆ.

# ದೇಹ ಹೀಗಿರಬೇಕಿತ್ತು



## ಗೆಲ್ಲೋ ಡಿಸೈನ್

–ಅನಿತಾ ನರೇಶ್ ಮಂಚಿ

ಬ್ರಹ್ಮ ಏನಾದ್ರೂ ಮನುಷ್ಯರ ಶರೀರ ರಚನೆಯ ಕ್ರಾಂಟಾಕ್ಟ್ ನಂಗೆ ಕೊಟ್ರೆ ನನ್ನ ಡಿಸೈನೇ ಗೆಲ್ಲೋದು. ಮೊಬೈಲುಗಳಿಗೆ ಇರುವ ಎರಡು ಕ್ಯಾಮೆರಾಗಳಂತೆ ಕಣ್ಣುಗಳು ಹಿಂಬಾಗದ ದೃಶ್ಯವನ್ನು ನೋಡುವಂತಿರಬೇಕು.  ತಲೆಯನ್ನು ಹೊತ್ತ ಕುತ್ತಿಗೆ ಮುನ್ನೂರರುವತ್ತು ಡಿಗ್ರೀಯೂ ತಿರುಗಬೇಕು. ಕೈಗಳು ರೇಡಿಯೋದ ಏರಿಯಲ್ ತರ ಉದ್ದ ಗಿಡ್ಡವಾಗುವ ತರದಲ್ಲಿ ಇರಬೇಕು. ಎಷ್ಟೇ ತಿಂದರೂ ದಪ್ಪವಾಗದ ಹೊಟ್ಟೆಯೊಂದಿರಬೇಕು. ಕಾಲಿನ ಪಾದಗಳು ತಾವಾಗಿಯೇ ಹಿಂಬಾಗಕ್ಕೆ ತಿರುಗಿಸುವಂತಹ ರಚನೆ ಹೊಂದಿರಬೇಕು. ರಬ್ಬರಿನಂತೆ ಪುಟಿದೇಳುವ ಶರೀರ ಬೇಕು. ಸದ್ಯಕ್ಕಿಷ್ಟು..

***

## ಬ್ರಹ್ಮನಲ್ಲಿ ಬೇಡಿಕೆ

ಆರತಿ ಘಟಿಕಾರ್

ಹೆಣ್ಣು ಮಕ್ಕಳಿಗೆ ದೇವಿಯರ ಹಾಗೆ ಎರಡು ಕೈಗಳನ್ನು ಎಕ್ಸ್ಟ್ರಾ ಕೊಟ್ಟಿದ್ದರೆ ನಾಲ್ಕು ಬರ್ನರಗಳಿರುವ ಗ್ಯಾಸ್ ಒಲೆಯಂತೆ ನಾವು ಹೆಚ್ಚು ದುಡಿಯುತ್ತೇವೆ ಎಂದು ನಾನು ಆಶ್ವಾಸನೆ ನೀಡಲಾಗದಿದ್ದರೂ, ಎರಡೆರಡು ಡಿಸೈನ್ ಬಳೆ, ಉಂಗುರ, ಕಡಗ ಇತ್ಯಾದಿ ಚಿನ್ನಾಭರಣಗಳನ್ನು ಒಟ್ಟಿಗೆ ತೊಟ್ಟು ಕೊಳ್ಳುವ ಸುವರ್ಣಾವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದೆವು. ಇದು ಚಿನ್ನದ ವ್ಯಾಪಾರಿಗಳ ಹಿತ ದೃಷ್ಟಿಯಿಂದ ಮಾಡುತ್ತಿರುವ ಸಮಾಜಮುಖಿ ಚಿಂತನೆಯಾದ್ದರಿಂದ ಬ್ರಹ್ಮ ಈ ಬೇಡಿಕೆಗಳನ್ನು ಖಂಡಿತ ಮನ್ನಿಸುತ್ತಿದ್ದ. ಆಗ ನಾವು ಹೆಣ್ಣು ಮಕ್ಕಳು ಸಹ ಬ್ರಹ್ಮಾಷ್ಟೋತ್ತರವನ್ನು ನಿತ್ಯವೂ ಪಠಿಸಿ ಸೃಷ್ಟಿಕರ್ತನಿಗೆ ವಂದನೆಗಳನ್ನು ಅರ್ಪಿಸುತ್ತಿದ್ದೆವು. ಎರಡು ಭುಜಗಳಿಗೆ ಎರಡೆರಡು ಜಂಭದ ಚೀಲಗಳನ್ನು ಏರಿಸಿ ನಾಲ್ಕು ಹಸ್ತಗಳಿಗೂ  ಮೆಹಂದಿ ಹಾಕಿಸಿಕೊಂಡು ಎರಡು ಬಾಟಲ್ ನೈಲ್ ಪಾಲೀಷು ಖಾಲಿ  ಮಾಡುತ್ತ ಹಿಂತೋಳು, ಮುಂತೋಳುಗಳಿಗೆ ಬೇರೆ ಬೇರೆ ವಿನ್ಯಾಸದ ಡಿಸೈನರ್ ರವಿಕೆ ಧರಿಸಿ ಸಂಭ್ರಮಿಸುತ್ತಿದ್ದೆವು. ಅಷ್ಟೇ ಅಲ್ಲ ಹೆಣ್ಣು ಮಕ್ಕಳನ್ನು ಕಿಚಾಯಿಸುವ ಪುಂಡ ಪೋಕರಿಗಳನ್ನು ನಾಲ್ಕು ಕೈಯಿಂದಲೂ ಹಿಡಿದು ತದುಕಿ ಹೆಣ್ಣು ಮಕ್ಕಳೆ ಸ್ಟ್ರಾಂಗ್ ಗುರು ಎಂದು ನಿಜಾರ್ಥದಲ್ಲಿ ಮೆರೆಯಬಹುದಿತ್ತು. ಇನ್ನು ನನ್ನ ಎರಡನೆಯ ಬೇಡಿಕೆ ಬ್ರಹ್ಮನಲ್ಲಿ ಏನಪ್ಪಾ ಅಂದರೆ, ನಮ್ಮಂತ ಹುಲು ಮಾನವರಿಗೆ ಮೂರನೆಯ ಕಣ್ಣು ಒಂದು ಕತ್ತಿನ ಹಿಂಬಾಗದಲ್ಲಿ ಇದ್ದಿದ್ದರೆ ಟ್ರಾಫಿಕ್ ಸಿಗ್ನಲ್ ಇದ್ದಾಗಲೂ ಹಿಂದಿನಿಂದ ಬಂದು ಗುದ್ದಿ ಕೊಂಡು ಹೋಗುವ ನಿರ್ದಯಿ ಚಾಲಕರು, ಬೆನ್ನ ಹಿಂದೆ ಆಡಿಕೊಂಡು ನಗುವವರು, ಬೆನ್ನಿಗೆ ಚೂರಿ ಹಾಕುವವರಿಂದೆಲ್ಲ ನಾವು ಎಚ್ಚೆತ್ತುಕೊಂಡು ಹುಷಾರಾಗಿ ಇರಬಹುದಿತ್ತು. ನಮ್ಮ ದೇಹರಚನೆಯ ಹೊಸ ಬೇಡಿಕೆಗಳನ್ನು ಬ್ರಹ್ಮಾಜಿಗೆ ತಲುಪಿಸುವ ಜವಾಬ್ದಾರಿ ಹೊತ್ತ ಅಪರಂಜಿ ಪತ್ರಿಕೆಗೆ ನನ್ನ ಅನಂತ ಧನ್ಯವಾದಗಳು.

# ದೇಹ ಹೀಗಿರಬೇಕಿತ್ತು



## ಚಾಚು ಕೈ, ಮೀಟುಪಾದ – ಬಿ.ಜಿ. ಕುಸುಮಾ

ದೇಹ ಹೀಗಿರಬೇಕಿತ್ತು : ಚಾಚು ಕೈ, ಮೀಟುಪಾದ, ಎವರ್ ಎಲಾಸ್ಟಿಕ್ ಹೊಟ್ಟೆ.

ನಮ್ಮ ದೇಹ, ಈಗಿರುವುದಕ್ಕಿಂತಲೂ ಹೆಚ್ಚು ಅನುಕೂಲವಾಗಿರಲು, ಈ ಕೆಲವು ಮಾರ್ಪಾಡುಗಳು ಇರಬೇಕು. ಮೊದಲನೆಯದು ಕೊಲಾಪ್ಸಿಬಲ್ ಲಿಂಬ್ಸ್. ಅಂದರೆ ನಮ್ಮ ಕೈ ಬೇಕಾದಾಗ ಉದ್ದವಾಗಿ, ನಂತರ ಮೊದಲ ಸ್ಥಿತಿಗೇ ಬರುವಂತಹದ್ದು. ಇದರ ಉಪಯೋಗ ಅಷ್ಟಿಷ್ಟಲ್ಲ. ಕೂತಲ್ಲಿಂದಲೇ, ದೂರದ ಮೇಜಿನ ಮೇಲಿರುವ ಪತ್ರಿಕೆ ತೊಗೋಬಹುದು. ವರಾಂಡದಲ್ಲಿ ಬಿದ್ದಿರೋ ಪೋಸ್ಟ್ ನ ಕೂತಲ್ಲಿಂದಲೇ ಕೈಚಾಚಿ ತೊಗೋಬಹುದು. ಪ್ರೈಮರಿ ಶಾಲೆ ಮೇಷ್ಟ್ರು, ಬೋರ್ಡ್ ಹತ್ತಿರವೇ ನಿಂತ್ಕೊಂಡು, ಕೊನೇ ಬೆಂಚಿನ ಹುಡುಗರ ಕಿವಿ ಹಿಂಡಬಹುದು. ಬೆತ್ತದಿಂದ ಏಟೂ ಕೊಡಬಹುದು. ಬೆಳಗಿನ ವಾಕಿಂಗ್‌ಗೇಂತ ಹೋಗುವವರು, ಹಾದಿ ಬದಿಯ ಮನೆಗಳ ಕೌಂಪೌಂಡ್ನೊಳಗೆ ಅರಳಿರುವ ಹೂಗಳನ್ನು, ರಸ್ತೇಲಿ ನಿಂತೇ, ಕೈಚಾಚಿ ಕಿತ್ತುಕೊಳ್ಳಬಹುದು! ಕೊನೆಗೆ ತೊಟ್ಟಿಲಲ್ಲಿ ಮಲಗಿರೋ ಚಿಕ್ಕ ಮಗು ಕೂಡಾ, ಅತ್ತಿತ್ತ ಓಡಾಡುತ್ತಿರುವ ತಾಯ ಸೆರಗು ಹಿಡಿದು ಎಳೆಯಬಹುದು. ಅದರ ತಾಯಿ, ಓಡಾಡುತ್ತಲೇ ಕೈ ಚಾಚಿ ಮಗುವನ್ನು ಎತ್ತಿಕೊಳ್ಳಬಹುದು, ಅಥವಾ ತಟ್ಟಿ ಮಲಗಿಸಬಹುದು!! ಚಾಚುಕೈನ ಅನುಕೂಲಗಳು, ಹೀಗೇ, ಒಂದೇ ಎರಡೇ?

ಇನ್ನು ಮೀಟುವ ಪಾದಗಳೆಂದರೆ, ರಸ್ತೇಲಿ ಪಾದಚಾರಿಗಳಾಗಿ ಓಡಾಡುವಾಗ, ಚಾಚಿ ಒಮ್ಮೆ ಪಾದ ಮೀಟಿದರೆ, ಎತ್ತರಕ್ಕೆ, ರಸ್ತೇಲಿ ಓಡಾಗೋ ವಾಹನಗಳಿಂದ ಮೇಲ್ಮಟ್ಟದಲ್ಲಿ, ಗಾಳಿಯಲ್ಲೇ ಓಡಾಡಬಹುದು. (ಹಾ, ಮರೆತೆ, ಭೂಮಿಯ ಗುರುತ್ವಾಕರ್ಷಣೆಗೆ ಒಳಗಾಗದೇ, ನಮ್ಮಿಚ್ಛೆಯಂತೆ ಏರಿ, ತೇಲಾಡಬಲ್ಲ ಹಗುರ ಶರೀರವೂ ಪಾದ ಮೀಟಿದಾಗಲೇ ಆಗಬೇಕು) ಹೀಗಾದರೆ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಇರೋದೇ ಇಲ್ಲ, ಅಲ್ವೇ? ಆಹಾ!! ಇನ್ನು ಮೂರನೇದು, ನಮಗೆ ಬೇಕಾದಾಗ, ಯಾವ ತೊಂದರೆ ಮಾಡದೇ ವಿಸ್ತಾರವಾಗಬಲ್ಲ ಉದರ! ನಮ್ಮ ದಿನ ನಿತ್ಯದ ಊಟಕ್ಕೇನೋ, ಈಗಿರೋ ಹೊಟ್ಟೆ ಸಾಕು. ಆದರೆ, ಹಬ್ಬ, ಸಮಾರಂಭಗಳಲ್ಲಿ, ಈಗಿರುವ ಸೈಜ್ ಸಾಲದು, ತಿಂದದ್ದು ನಮಗೆ ತೃಪ್ತಿಯಾಗೋ ಮೊದಲೇ, ಈ ಹೊಟ್ಟೆ ತುಂಬಿ ಹೋಗಿ "ನನಗೆ ಇನ್ನು ಸಾಕು" ಎನ್ನುತ್ತೆ. ಆದ್ರೆ ನಾಲಿಗೆ 'ಇನ್ನೂ ಬೇಕು' ಅನ್ನುತ್ತಿರುತ್ತೆ. ಈಗಿನ ಕಾಲದಲ್ಲೋ, ಸಮಾರಂಭಗಳಲ್ಲಿ 'ಬಫೆ' ಅಂತ, ಅಲ್ಲಿಂದ ಇಲ್ಲಿವರಗೆ, 60–70 ಬಗೆಯ ಭಕ್ಷ್ಯ, ಭೋಜ್ಯ, ಕುರುಕುಲು, ಮುರುಕುಲು ಇಟ್ಟಿರುತ್ತಾರೆ. ಒಂದೇ ಒಂದು ಚಮಚದ ಹಾಗೆ ಪ್ರತಿ ಐಟಂ ತಿಂದರೂ, ಈ ಹೊಟ್ಟೆ ಸಾಲದೇ ಸಾಲದು. ಅದಕ್ಕೇ ಅದು ಬೇಕಾದಾಗ (ಒಡೆಯದೇ) ಎಕ್ಸ್‌ಪಾಂಡ್ ಆಗಿ, ನಮ್ಮ ಜಿಹ್ವಾಚಾಪಲ್ಯ ತಣಿಸಿಕೊಳ್ಳುವ ಅನುವು ಮಾಡಿಕೊಡಬೇಕು.

***



## ಒಂದು ಸೃಷ್ಟಿ ಪಲ್ಲಟ ಪ್ರಸಂಗವು!

– ಗಣೇಶ ಹೆಗಡೆ

ಕಳೆದ ವರ್ಷದ ಆದಿಯಿಂದ ಅಂತ್ಯದವರೆಗೂ 'ಕೊರೋನ' ವೈರಸ್ಸಿನ ಹಾವಳಿಯಿಂದ ನಾವೆಲ್ಲಾ ಸಾಕಷ್ಟು ಪಾಡುಪಟ್ಟು, ಇನ್ನೇನು ಹೊಸ ವರ್ಷದ ಆರಂಭಿಕದಲ್ಲಿ ನೆಮ್ಮದಿ ಕಾಣುವ ಇರಾದೆಯಲ್ಲಿದ್ದ ನಮಗೆ ಧಿಡೀರನೆ ಹೊಸ ಚಿಂತೆಯೊಂದು ಕಾಡಲಾರಂಭಿಸಿತು.

ಇಷ್ಟು ದಿವಸ, ನಾರ್ಮಲ್ಲಾಗಿಯೇ ಇದ್ದ ಪ್ರಸಿದ್ಧ ಹಾಸ್ಯ ಪತ್ರಿಕೆಯ ಸಂಪಾದಕರು ಸುಮ್ಮನಿರಲಾರದೆ ಇದು ಬ್ರಹ್ಮಕೊಟ್ಟ ಸಲಹೆಯಿಂದು ನಮ್ಮನ್ನು ಯಾಮಾರಿಸಿ ಮಾನವ ದೇಹದ ರಚನೆಯ ವಿನ್ಯಾಸವನ್ನು ರಿಡೈಸನ್ ಮಾಡಲು ನಮಗೆಲ್ಲಾ ಕರೆಕೊಟ್ಟರು.

ಇಂಥಹದೆ ವಿಚಾರದಲ್ಲಿ ಬಲು ವರ್ಷಗಳ ಹಿಂದೆ ಪ್ರಕಟಗೊಂಡಿದ್ದ ಒಂದು ಹಾಸ್ಯ ಲೇಖನ ನನ್ನ ನೆನಪಿಗೆ ಬರುತ್ತದೆ. ಒಂದು ಪ್ರಸಿದ್ಧ ದಿನ ಪತ್ರಿಕೆಯಲ್ಲಿ ವಿಚಿತ್ರ ಸುದ್ದಿಗಳು ಪ್ರಕಟಗೊಳ್ಳುತ್ತಿದ್ದ ಕಾಲವೊಂದಿತ್ತು. ಎರಡು ತಲೆಗಳುಳ್ಳ ಅವಳಿ ಕುರಿ ಮರಿ ಜನನ, ನಾಲ್ಕು ಕಣ್ಣುಗಳುಳ್ಳ ಕತ್ತೆ ಮರಿ ಜನನ, ಆರು ಕಾಲುಗಳುಳ್ಳ ವಿಚಿತ್ರ ಕರು ಜನನ... ಇತ್ಯಾದಿ, ಇತ್ಯಾದಿ. ಇಂತಹ ಸುದ್ದಿಗಳೆಲ್ಲಾ ನಿಜವೆಂದು ನಂಬಿದ್ದ ವಾಚಕರಲ್ಲಿ ನಾನೂ ಒಬ್ಬ. ಭಾರತ ದೇಶದಲ್ಲಿ ಪದೇ ಪದೇ ಪ್ರಕಟಗೊಳ್ಳುತ್ತಿದ್ದ ಇಂತಹ ಸುದ್ದಿಗಳ ಮೂಲಗಳ ಬಗ್ಗೆ ಸಂಶಯಪಟ್ಟ ಒಬ್ಬ ವಿದೇಶಿ ಪತ್ರಕರ್ತನು ಭಾರತಕ್ಕೆ ಬಂದು, ಆ ಪತ್ರಿಕೆಯ ವಿಳಾಸ ಪತ್ತೆ ಹಚ್ಚಿ ದಿಢೀರನೆ ಆ ಎಡಿಟರ್ ರೂಮಿಗೇ ನುಗ್ಗಿದಾಗ, ಇದ್ಯಾವುದರ ಪರಿವೆಯೆ ಇಲ್ಲದ ಆ ಸಂಪಾದಕ, ಕಣ್ಣು ಮುಚ್ಚಿ, ತುಟಿಯಲ್ಲಿ ಸಿಗರೇಟು ಕಚ್ಚಿಕೊಂಡು, "ಸರಿ, ಬರೆದುಕೊ" ಎಂದು ಮುಂದೆ ಕುಳಿತ ಮುಗ್ಧ ಉಪ ಸಂಪಾದಕನಿಗೆ ಡಿಕ್ಟೇಶನ್ ಕೊಡುತ್ತಿದ್ದ ಆ ದೃಶ್ಯ ಕಂಡ ವಿದೇಶಿ ಪತ್ರಕರ್ತನು ಇನ್ನು ತಡಮಾಡದೆ, ಆನಂದ ತುದಿಲನಾಗಿ, ಆ ಎಡಿಟರ್ ನ ಎರಡೂ ಪಾದಗಳ ಮೇಲೆ ತನ್ನ ಶಿರವಿಟ್ಟು, "ಸರ್ ಯು ಆರ್ ನಾಟ್ ಓನ್ಲಿ ಎನ್ ಎಡಿಟರ್ ಬಟ್ ಆಲ್ಸೋ 'ಎ ನ್ಯೂಸ್ ಮಾನ್ಯುಫಾಕ್ಚರರ್'" ಎಂಬ ಉದ್ಗಾರ ತೆಗೆದ... ಕಥಾ ಪ್ರಸಂಗವಿದು.

ಅಂದಿನ ಆ ಎಡಿಟರ್ರಿಗೂ ಇಂದಿನ ನಮ್ಮ ಹಾಸ್ಯ ಪತ್ರಿಕೆಯ ಎಡಿಟರ್ರಿಗೂ ಏನೂದರೂ ಬಾದರಾಯಣ ಸಂಬಂಧವಿದೆಯೇ? ಎಂಬ ಕೆಟ್ಟ ಗುಮಾನಿ ನನಗೆ.

ಬ್ರಹ್ಮನ ಬ್ರಹ್ಮೇತಿ ಸಿಟ್ಟನ್ನು ಕಂಡವರ್‍ಯಾರು? ಆದ್ದರಿಂದ ಬ್ರಹ್ಮನನ್ನು ಕೆಣಕುವ ಸಾಹಸಕ್ಕೆ ನಾವು ಕೈ ಹಾಕದೆ ಇಂತಹ ಹುಚ್ಚು ವಿಚಾರಗಳನ್ನು ಇಲ್ಲಿಗೇ ಕೈ ಬಿಟ್ಟು, ಪ್ರಕೃತಿ ತೋರಿದ ಹಾದಿಯಲ್ಲಿ ಹೆಜ್ಜೆ ಹಾಕಿ, ಬದುಕಿನ ಅಂತ್ಯವನ್ನು ನೆಮ್ಮದಿಯಿಂದ ಸ್ವಾಗತಿಸುವುದು ಜಾಣತನದ ಕುರುಹಲ್ಲವೇ?

ಏನಂತೀರೀ?

***

# ದೇಹ ಹೀಗಿರಬೇಕಿತ್ತು



## ಹೀಗಿರಬೇಕಿತ್ತು

– ಜಿ. ವಿ. ಸರಸ್ವತಮ್ಮ

ನನಗೇನಾದರೂ ಅವಕಾಶ ಸಿಕ್ಕರೆ ತಲೆಯ ಹಿಂಭಾಗದಲ್ಲೂ ಎರಡು ಕಣ್ಣು ಇಡುತ್ತೇನೆ. ಹಾಗಾದರೂ ಮನುಷ್ಯ ಒಂದಿಷ್ಟು ಎಚ್ಚರಿಕೆಯಿಂದ ನಡೆದಾಡಲಿ.

ಇನ್ನು ಹೊಟ್ಟೆ ಬರಿಯ ಗಾಳಿ ಕುಡಿದು ಬದುಕುವಂತೆ ಮಾಡುತ್ತೇನೆ. ಹೊಟ್ಟೆ ತುಂಬಿಸಲು ಹೊಡೆದಾಡುವುದು ತಪ್ಪಲಿ.

ಬೆನ್ನ ಮೇಲೆ ರೆಕ್ಕೆಗಳನ್ನೂ ಇಡುತ್ತೇನೆ. ಯಾರ ಹಂಗಿಲ್ಲದೆ ಎಲ್ಲೆಂದರಲ್ಲಿ ಹಕ್ಕಿಗಳಂತೆ ಹಾರಾಡಿಕೊಂಡಿರಬಹುದು.

ಹೃದಯ ಈಗಿನಂತೆ ಒಂದೇ ಸಾಕು. ಈಗಲೇ ಅದು ಇದ್ದರೂ ಇಲ್ಲದಂತೆ ಇರುತ್ತಾನೆ ಮಾನವ.

ಕೈಗಳು ಎಷ್ಟು ಬೇಕಾದರೂ ಉದ್ದವಾಗುವಂತೆ ಇಡುತ್ತೇನೆ. ನಮಗೆ ಬೇಕಾದ್ದನ್ನೆಲ್ಲ ಯಾರೂ ಕಾಣದಂತೆ ದೂರ ನಿಂತೇ ಬಾಚಿಕೊಳ್ಳಬಹುದು.

ಮೂಗಿನ ಪಕ್ಕಕ್ಕೆ ಮಾಸ್ಕ್‌ನಂಥ ರಚನೆ ಇಡುತ್ತೇನೆ. ಹೊರಗೆ ಹೋದಾಗ ಪೋಲೀಸರಿಗೆ ದಂಡ ಕೊಡುವುದು ಬೇಡ.

***

## ಮೈಯೆಲ್ಲಾ ಕಣ್ಣು

– ಶ್ರೀಲಕ್ಷ್ಮಿ

ಬ್ರಹ್ಮನ ಸೃಷ್ಟಿ ಬ್ರಹ್ಮಾಂಡವೆ ಸರಿ. ಅಂತಹ ಬ್ರಹ್ಮನಿಂದ ರಚನೆಗೊಂಡಿರುವ ಈ ದೇಹವನ್ನು ತಿದ್ದಲು ಅಸಾಧ್ಯ. ಆದರೆ ಕೆಲವು ಸಂದರ್ಭಗಳಲ್ಲಿ ಹಾಗೆ ಅನ್ನಿಸುವುದು ನಿಜ. ನಮ್ಮ ತಾಯಿ ಹೇಳ್ತಿದಿದ್ದು ಒಂದು ನೆನಪಾಯ್ತು 'ಈ ಬೆಂಗ್ಳೂರಿನ ರಸ್ತೆಗಳನ್ನು ದಾಟುವಾಗ ಮೈಯೆಲ್ಲಾ ಕಣ್ಣಾಗಿರಬೇಕು' ಅಂಥ. ಹಾಗೆಂದರೆ, ಬಹಳ ಹುಷಾರಾಗಿ ಇರಬೇಕು ಎಂದರ್ಥ. ಆದರೆ ಮೈಯಲೆಲ್ಲಾ ಕಣ್ಣುಗಳು ನಿಜವಾಗಿಯೂ ಇರಲು ಸಾಧ್ಯವೇ? ಇನ್ನು, ಮಹಿಳಾ ದಿನಾಚರಣೆಯ ದಿನ, ಮಹಿಳೆಯರು ಎಲ್ಲಾ ಕೆಲಸ ಕಾರ್ಯಗಳಲ್ಲಿ ಮುಂದಿರುವರು ಎಂದು ತೋರಿಸಲು, ಏಳೆಂಟು ಕೈಗಳನ್ನು ಅವಳಿಗೆ ಜೋಡಿಸಿ, ಅವಳ ಕೆಲಸ ಕಾರ್ಯಗಳ ಬಗ್ಗೆ ಚಿತ್ರಿಸುವುದುಂಟು. ಆದರೆ ಅದು ವಾಸ್ತವಕ್ಕೆ ಸರಿಹೊಂದುವುದಿಲ್ಲ. ಒಂದೋ ಎರಡೂ ಕೈ ಬೆರಳು ಅಧಿಕವಿದ್ದರೆ, ಊನ ಎಂದು ಕರೆಯುವವರು ನಾವು. ಇನ್ನು ಬೇರೆಯ ಅಂಗಾಗಗಳನ್ನು ಹೆಚ್ಚು ಅಥವಾ ಕಮ್ಮಿ ಇದ್ದರೆ ಇಷ್ಟ ಪಡುತ್ತೇವೆಯೇ? ಬಡವನು ತನಗೆ ಇರುವ ಹೊಟ್ಟೆ ತುಂಬದಿರುವಾಗ ಹಾಳ್ ಹೊಟ್ಟೆ ಅನ್ನುತ್ತಾನೆ. ಅದೇ ಹೊಟ್ಟೆ ತುಂಬಿದ ಸಾಹುಕಾರ ಇನ್ನಷ್ಟು ತಿನ್ನಲು ಹೊಟ್ಟೆ ಇಲ್ಲ ಅನ್ನುವನು. ಹೀಗಿರುವಾಗ, ಸಾಕಲ್ಲವೇ ಒಂದು ಹೊಟ್ಟೆ ಎಂಬ ಚೀಲ? ಹುಟ್ಟುತ್ತಲೇ ತಲೆಯ ಬುರುಡೆಯಲ್ಲಿ ಎಲ್ಲರಿಗೂ ಒಳ್ಳೆಯ ಬುದ್ಧಿ ತುಂಬಿ, ಅದು ಕೊನೆಯವರೆಗೂ ಹಾಗೆ ಉಳಿದು ಬಿಟ್ಟರೆ, ಬ್ರಹ್ಮನ ಸೃಷ್ಟಿಯ ಈ ದೇಹ ಸೂಪರೋ ಸೂಪರ್.



## ದೇಹ ಪುನಾರಚನೆ

– ಎಂ.ಎಸ್. ನರಸಿಂಹಮೂರ್ತಿ

ಆರ್ಡರ್ ತಗೊಂಡು ಐಟಂ ರೆಡಿ ಮಾಡ್ಬೇಕು. ಬ್ರಹ್ಮನ ಸೃಷ್ಟಿ ಹೀಗಿರಬೇಕಿತ್ತು.

1. ಕಣ್ಣಿಗೆ ಒಂದು ರೆಪ್ಪೆ ಇದ್ದಂತೆ ಕಿವಿಗೂ ಒಂದು ಮುಚ್ಚಳ.
2. ತಲೆ ಹಿಂಭಾಗದಲ್ಲಿ ಒಂದು ಕಣ್ಣು ಇರಬೇಕು, ಕಾರುಗಳಿಗೆ ರಿಯರ್ ವ್ಯೂ ಮಿರರ್ ಇದ್ದಂತೆ.
3. ಕಾಲುಗಳು ಮುಂದಕ್ಕೆ, ಹಿಂದಕ್ಕೆ, ಪಕ್ಕಕ್ಕೆ ಹ್ಯಾಗೆ ಬೇಕಾದರೂ ಚಲಿಸಬೇಕು.
4. ಮೂಲ ಮಾನವನಿಗೆ ಇದ್ದ ಬಾಲ ನಮಗೆ ದೇವರು ಕತ್ತರಿಸಿರುವುದು ಸರಿಯಲ್ಲ.
5. ಮೆದುಳಿನ ಅರ್ಧ ಭಾಗ ಹೊಟ್ಟೆಯಲ್ಲಿ ಇದ್ದಿದ್ದರೆ ತಲೆಗೆ ಪೆಟ್ಟಾದರೂ ಬುದ್ಧಿ ಓಡುತ್ತಿತ್ತು.

***

## ಮೂಗು ಲಾಂಡ್ರಿಗೆ

– ನಳಿನಿ ಸೂರ್ಯಪ್ರಕಾಶ್

ಹಿಂದೊಮ್ಮೆ ನನಗೆ ಘನಘೋರ ನೆಗಡಿ ವಕ್ಕರಿಸಿತ್ತು. (ಈ ಕರೋನ ಕಾಲದಲ್ಲಂತೂ ಅಲ್ಲಪ್ಪ ! ಎಲ್ಲಾದ್ರೂ ಉಂಟೇ! ಶಾಂತಂ ಪಾಪಂ!) ಎಂಥಾ ಘನಘೋರ ನೆಗಡಿ ಅಂತೀರಿ!..ಬರೀ ದ್ರವ....ದ್ರವ...ದ್ರವರೂಪೀ ಉಪದ್ರವ! ಆಗಲೇ ನನಗನ್ನಿಸಿದ್ದು. "" ಥೂ.. ಲಾಲೇಲು ಪಾಪ ಮಾಡಿದ್ದೇ ಅಂತ ಲಲಗೆ ಈ ಲೆಗಡಿ ವಕ್ಕರಿಸ್ತಪ್ಪಾ..ಹಾಳಾದ್ದು ಈ ಮೂಗು ಕಿತ್ತು ಡ್ರೈಕ್ಲೀಲಿಂಗ್ ಕೊಡೊ ಹಾಗಿದ್ದಿದ್ರೆ !"" ಅಂತ. ಮೂಗೊರೆಸೀ, ಒರೆಸೀ ಮೂಗಿನ ತುದಿ ಕೆಂಪಾಗಿ, ಜೊತೆಗೆ ಉರಿಯೋ ಉರಿ!

ಇದೊಂದು ರೀತಿಯದ್ದಾದ್ರೆ, ಕಟ್ಟಿದ ಮೂಗಿನ ಫಜೀತಿ ಮತ್ತೊಂದು ರೀತಿ. ಉಸಿರಾಟ ಬಾಯಲ್ಲಿ. ಇನ್ನೇನು ಬಂತು, ಬಂತು.. ಬಂದೇ ಬಿಡ್ತು ಅನ್ನೋವಷ್ಟರಲ್ಲಿ ಅದು ಹೇಗೊ, ಮೂಗಿನ ತುದೀಗೆ ಒಂದು ಗವಾಕ್ಷಿಯಿಂದ ಬಂದ ಆ....ಕ್ಷೀ, ಮತ್ತೊಂದು ಗವಾಕ್ಷಿಯಿಂದ ವಾಪಸ್ಸು ಹೋದಾಗ ಆಗುವ ನಿರಾಸೆ ಅಷ್ಟಿಷ್ಟಲ್ಲ.. ದೀಪಾವಳಿಯ ಠುಸ್ ಪಟಾಕಿಯಂತೆ..!

ಎಳೇ ಮಕ್ಕಳಿಂದ ಹಿಡಿದು ಮುದುಕರವರೆಗೆ ಎಲ್ಲರನ್ನೂ ಕಾಡುವ ನೆಗಡಿಯಂದ್ರೆ ಸುಮ್ಮನೆಯೇನು! ಆ ಚತುನಾ ರಸಿಕ ಬ್ರಹ್ಮನೇನಾದ್ರೂ ನಂಗೆ ಅವಕಾಶ ಕೊಟ್ರೆ , ನೆಗಡಿ ಬಂದಾಗಲೆಲ್ಲಾ ಮನುಷ್ಯರು ತಂತಮ್ಮ ಮೂಗುಗಳನ್ನ ತೆಗೆದಿಟ್ಟು, ಬಾಯಲ್ಲಿ ಉಸಿರಾಡ್ಕೋತಾ, ಮೂಗು ಸಂಪೂರ್ಣವಾಗಿ ಒಣಗಿದಮೇಲೋ, ಇಲ್ಲಾ ತೆರೆದುಕೊಂಡ ಮೇಲೋ ಮತ್ತೆ ಮುಖದ ಮೇಲೆ ಜೋಡಿಸಿಕೊಳ್ಳೋ ಹಾಗೆ ಮಾಡ್ತಿದ್ದೆ!

# ದೇಹ ಹೀಗಿರಬೇಕಿತ್ತು



## ಇಂತಿರಲು ಸೊಗ ವಪುವು

–ಎನ್.ರಾಮನಾಥ್

**ಒಮ್ಮೆ ನಾಲಿಗೆಯಿಂದ ಸವರಲು**
**ಚಮಕಿಸುವ ಹಲ್ಲುಗಳು ಇರಲೈ**
**ಘಮವು ಮೈಯದು ಪುನುಗು ಬೆಕ್ಕಿನ ಅಂದದಲ್ಲಿರಲಿ**
**ಅಷ್ಟ ದಿಕ್ಕಿಗು ದೃಷ್ಟಿ ಹಾಯಿಸೆ**
**ಅಷ್ಟು ತಲೆಗಳು ಜೋಡಿಸಿರಲೈ**
**ಇಷ್ಟ ಪಟ್ಟುದ ಬಾಚಿಕೊಳ್ಳೆ ಕಬಂಧ ಬಾಹುಗಳು**

**ಇರಲು ಆಮೆಯ ಚಿಪ್ಪು ಮೂತಿಗೆ**
**ಇರದು ಮಾಸ್ಕಿನ ಕಿರಿಕಿರಿಗಳ್ಳೈ**
**ಕರಡಿಯಂತಹ ಕೂದಲಿರ್ದೊಡೆ ದೂರ ಬೋಳುತನ**
**ಪುರದ ಹಳ್ಳವ ಕೊಳ್ಳ ದಾಟಲು**
**ಉರಗದಂತಹ ಚಲನೆ ಇರಲೈ**
**ಬಿರಡೆ ಬ್ಯುಲ್ಟಿನ್ ಕರ್ಣಕಿರಲೈ ತಡೆಯೆ ಕೊರೆತವನ**

**ಒಂಟೆ ಕಣ್ಣಿನ ರೆಪ್ಪೆ ಇರಲೈ**
**ತಂಟೆ ತಾಳಲು ಧೂಳು ಮಣ್ಣದು**
**ತುಂಟ ಬೆಕ್ಕಿನ ಹೆಜ್ಜೆ ಇರಲೈ ಕಳ್ಳ ನಡೆಯಿಡಲು**

***

## ಒಂದೇ ಕಿವಿ?

– ಸಹನಾ ಪ್ರಸಾದ್

ಹಣೆಯಲ್ಲೇ ಕಣ್ಣು ಹುದುಗಿಸಿದರೆ ಮುಖದಲ್ಲಿ ಜಾಗ ಮಿಕ್ಕುತ್ತೆ.
ಕಣ್ಣಿರುವ ಜಾಗದಲ್ಲಿ ಕಿವಿ ಇಟ್ಟರೆ ಮುಖ ಕಾಂಪ್ಯಾಕ್ಟಾಗಿರುತ್ತೆ. ಕಿವಿ ಓಲೆ, ಝುಂಕಿ ದುಡ್ಡು ಮಿಗುತ್ತೆ.
ಹೃದಯ ಮತ್ತೆ ಮತ್ತೆ ಬದಲಾಯಿಸುವಂತೆ ಇರಬೇಕು. ಅದೂ ಹದಿಹರೆಯದಲ್ಲಿ.
ಕಾಲುಗಳು 4 ಇದ್ದರೆ ಚಂದ. 2 ಓಡಾಡೋಕ್ಕೆ, ಇನ್ನೆರಡು ಸ್ಟೆಪ್ನಿತರ.
ಕೈಗಳು ಒಂದ್ಕೈದಾದರೂ ಇರಬೇಕು. ಅದರಲ್ಲೂ ಹೆಂಗಸರಿಗೆ. ಮೊಬೈಲ್ನೋಡಲು, ಸೌಟು ಆಡಿಸಲು, ಚಪಾತಿ ಒತ್ತಲು, ಗಂಡನ ಕಿವಿ ಹಿಂಡಲು ಇತ್ಯಾದಿ.
ಗಂಡಸರಿಗೆ ಒಂದೇ ಕಿವಿ ಸಾಕು. ಆಗ ಹೆಂಡತಿ ಹೇಳಿದ್ದು ಕೇಳಿ ಮನದಲ್ಲೇ ಉಳಿಯುತ್ತೆ!!

# ದೇಹ ಹೀಗಿರಬೇಕಿತ್ತು



## ಮಾನವ ಇರ್ರಿಪೇರೆಬಲ್ ತಡಿಕೆ

– ಇಂದುಶ್ರೀ ರವೀಂದ್ರ

ಭಗವಂತನ ಪ್ರಾಡಕ್ಟ್ ಆದ ಈ ದೇಹದ ಬಗ್ಗೆ ನನ್ನದು ಹೆಚ್ಚು ಆಕ್ಷೇಪಣೆ ಏನಿಲ್ಲ. ದೇಹದ ಇಂಜಿನಿಯರಿಂಗ್ ಸರಿಯಾಗೇ ಇದೆ. ರಕ್ತ, ಮಾಂಸ, ಮೂಳೆ, ಮಜ್ಜಿಗೆ, ನೊಣ.... ಕ್ಷಮಿಸಿ... ಮಜ್ಜೆ, ನೆಣ ಎಲ್ಲವೂ ಸರಿಯಾಗಿ ಪ್ಯಾಕ್ ಆಗೋಹಾಗೇ ಅಳವಡಿಸಿದಾನೆ. ಆದರೆ... ನೀವೇ ನೋಡಿದೀರಲ್ಲಾ... ಬೈಕೋ, ಕಾರೋ ಲೆಕ್ಕಕ್ಕೆ ತೊಗೊಂಡ್ರೆ ಪ್ರತೀ ಮೂರು ವರ್ಷಕ್ಕೊಂದು ಫೇಸ್ ಲಿಫ್ಟ್ ಮಾಡ್ತಾರೆ, ಇನ್ನೊಂದು ಸ್ವಲ್ಪ ವರ್ಷಕ್ಕೆ ಅಪ್‌ಡೇಟೆಡ್ ವರ್ಷನ್ ಬರತ್ತೆ. ನಮ್ಮ ದೇಹ ಮಾತ್ರ ಮ್ಯಾನುಫ್ಯಾಕ್ಚರ್ ಆದ ದಿನದಿಂದ ಈವರೆಗೆ ಅದೇ ಓಲ್ಡ್ ಮಾಡಲ್, ಬರ್ತಾ ಬರ್ತಾ ವಾಟ್ಸಪ್ಪು, ನೆಟ್‌ನಿಂದ ಫೇಸ್ ಡೌನ್, ಅಪ್‌ಡೇಟ್ ಬದಲು ಔಟ್‌ಡೇಟ್. ಅಪ್‌ಡೇಟೆಡ್ಡೋ, ಲೇಟೆಸ್ಟೋ ವರ್ಷನ್ನೇ ಇಲ್ಲದ ಲಕ್ಷಾಂತರ ವರ್ಷಗಳ ಓಲ್ಡ್ ಮಾಡಲ್ ಆಗಿದ್ದರೆ ಏನು ಚೆನ್ನ ಅಲ್ಲವೆ? ಸೆಲ್ಫ್ ಸ್ಟಾರ್ಟ್ ಆಗೋ ಗಾಡಿ ಬಂದ್ಮೇಲೂ ಕಿಕ್ ಸ್ಟಾರ್ಟ್ ಮಾಡ್ಕೊಂಡೇ ಇರೋಕ್ಕಾಗತ್ತಾ?

ಪಾರ್ಟ್ ಬೈ ಪಾರ್ಟೇ ನೋಡಿ –ಮುಂದೆ ಎರಡು ಕಣ್ಣು ಕೊಟ್ಟ. ಆದರೆ ರಿಯರ್ ವ್ಯೂಗೆ ಇನ್ನೆರಡು ಕಣ್ಣು ಕೊಟ್ಟಿದ್ದಿದ್ರೆ ಬೆನ್ನಿಗೆ ಚೂರಿ ಹಾಕೊವ್ರೇ ಇರ್ತಿರ್ಲಿಲ್ಲ. ಎಕ್ಸಾಮ್‌ನಲ್ಲಿ ಸ್ಟೂಡೆಂಟ್ಸ್‌ಗೆ ಕಾಪಿ ಮಾಡಿ ಪಾಸ್ ಆಗೋಕೂ ಸುಲಭ ಆಗೋದು. ಅಕ್ಕಪಕ್ಕದಲ್ಲೂ ಒಂದೊಂದು ಇದ್ದಿದ್ರೆ ಒಂಥರಾ ಪ್ಯಾನೋರಾಮಿಕ್ ವ್ಯೂ ಇರೋದು. ಅತ್ತೆ, ಮಾವ, ಗಂಡ, ಮಗುವಿನ ಮೇಲೆ ತಲಾ ಒಂದು ಕಣ್ಣು ಇಡಬಹುದಿತ್ತು. ಝೂಮ್ ಆಪ್ಷನ್ನೂ ಇದ್ದಿದ್ರೆ ಕನ್ನಡಕದ ಖರ್ಚೂ ಉಳೀತಿತ್ತು. ಇದೆಂಥಾ ಡಬ್ಬ ಡಿಸೈನ್ ಅನ್ಸಲ್ವಾ?

ಕೆಲವರ ಕಿವೀನ ಹಿತ್ತಾಳೆ ಕಿವಿ ಅಂತಾರಲ್ಲ, ಹಾಗೆ ಅನ್ನಿಸಿಕೊಳ್ಳದಿರಕ್ಕೆ ಚಿನ್ನದ್ದೋ, ತಾಮ್ರದ್ದೋ, ಬೆಳ್ಳೀದೋ ಕಿವಿ ಚೇಂಜ್ ಮಾಡ್ಕೊಳಕ್ಕೆ ಅನುಕೂಲ ಆಗೋಹಾಗೆ ಕಿವಿಯನ್ನ ಡಿಟ್ಯಾಚೆಬಲ್ ಮಾಡಬೇಕಿತ್ತು. 'ಫ್ರೆಂಡ್ಸ್, ರೋಮನ್ಸ್ ಅಂಡ್ ಕಂಟ್ರೀಮೆನ್, ಲೆಂಡ್ ಮೀ ಯುವರ ಇಯರ್ಸ್' ಎಂದರೆ 'ಓಕೆ. ರಿಟರ್ನ್ ಇಟ್ ಲೇಟರ್' ಎನ್ನುತ್ತಾ ಬಿಚ್ಚಿಕೊಟ್ಟು ಹೋಗಬಹುದಿತ್ತು.

ಬ್ರೈನ್‌ನಲ್ಲಿ ಮೆಮೊರಿ ಚಿಪ್ ಇನ್‌ಸ್ಟಾಲ್ ಮಾಡೋ ಅವಕಾಶ ಇರಬೇಕಿತ್ತು. ಎಕ್ಸ್‌ಟೆಂಡೆಬಲ್ ಮೆಮೊರಿ ಇದ್ದು ಈ ಜನ್ಮದ್ದಷ್ಟೇ ಅಲ್ಲದೆ ಹಿಂದಿನ ಎಲ್ಲಾ ಜನ್ಮಗಳ ಡಾಟಾ ಸ್ಟೋರೇಜ್‌ಗೆ ಅವಕಾಶ ಇರಬೇಕಿತ್ತು. ಆಗ ಪ್ರತಿ ಜನ್ಮದಲ್ಲೂ ಮತ್ತೆ ಮತ್ತೆ 1–10ರವರೆಗೆ ಕ್ಲಾಸ್ ಓದೋದು ತಪ್ಪಿತ್ತು. ರೀಬೂಟ್/ಸ್ವಿಚ್ ಆಫ್ ಸ್ವಿಚ್ ಆನ್ ಆಪ್ಷನ್ ಇದ್ದಿದ್ದರೆ ತಲೆ ಕೆಟ್ಟಾಗ ಒಮ್ಮೆಲೆ ರೀಬೂಟ್ ಮಾಡಿ ಫ್ರೆಷ್ ಸ್ಟಾರ್ಟ್ ಮಾಡಬಹುದಾಗಿತ್ತು. ಹಾಗೆ ಮಾಡುವುದರಿಂದ ಕೌನ್ಸೆಲಿಂಗ್/ಸೈಕಿಯಾಟ್ರಿ ಫೀಸುಗಳನ್ನು ತೆರೋದು ತಪ್ಪೋದು. ನಮಗೆ ಯೂಷುಯಲಿ ಮೋಸ ಆಗೋದು ಯಾಕ್ಹೇಳಿ ನೋಡೋಣ? ಈ ಹಾಳಾದ್ ಹೊಟ್ಟೇಗೋಸ್ಕರಾನೇ ಕಣ್ರೀ. ಜಸ್ಟ್ ಥಿಂಕ್! ಹೊಟ್ಟೇನೇ ಇಲ್ಲದಿದ್ದಿದ್ರೆ? ಅಡಿಗೆ ಕೆಲಸ ಇರುತ್ತಿರಲಿಲ್ಲ, ಅನವಶ್ಯಕವಾಗಿ ಹೊಟ್ಟೆ ಉರ್ಕೊಳ್ಳೋವ್ರು ಇರ್ತಿರ್ಲಿಲ್ಲ. 'ಕೊಯಿ ಮಿಲ್ ಗಯಾ' ಫಿಲ್ಮ್‌ನಲ್ಲಿ 'ಧೂಪ್ ಧೂಪ್' ಅಂತ ಸನ್‌ಲೈಟ್‌ಗೆ ಬಂದಾಗ ಚಾರ್ಜ್

# ದೇಹ ಹೀಗಿರಬೇಕಿತ್ತು



ಆಗ್ತಿದ್ದ ಹಾಗೇನೇ ಬ್ಯಾಟರಿಯಿಂದಾನೋ, ಎಣ್ಣೆಯಿಂದಾನೋ... ಐ ಮೀನ್ ಪೆಟ್ರೋಲ್ ಡೀಸೆಲ್‌ನಿಂದಾನೋ ಚಾರ್ಜ್ ಆಗೋ ಹಾಗಿದ್ದಿದ್ರೆ ಚೆನ್ನಾಗಿರೋದು.

ಸೆಂಟ್ರಲ್ ಥೀಮ್‌ಗೆ ಬರೋಣ. ಹನುಮಂತ ತನ್ನ ಎದೆಯನ್ನ ಬಗೆದು ತೋರಿಸಿದ ಹಾಗೇನೇ ಬೇಕಾದಾಗ ಓಪನ್ ಆಗಿ, ವಾಪಸ್ ಕೂಡಿಸಿದಾಗ ಗಟ್ಟಿಯಾಗಿ ಅಂಟ್ಕೊಳ್ಳೋ ಹಾಗೆ ಕಟ್ & ಪೇಸ್ಟ್ ಆಪ್ಷನ್ ಇರಬೇಕಿತ್ತು. ಆಗ ಡಾಕ್ಟರ್ ಹತ್ರ ಹೋದಾಗ, ಏನಾಗಿದೆ ಅಂತ ಕೇಳ್ದಾಗ, ದೇಹದ ಎಲ್ಲಾ ಭಾಗಗಳನ್ನೂ ಓಪನ್ ಮಾಡಿ ತೋರಿಸೋ ಹಾಗಿದ್ದಿದ್ರೆ ಆಪರೇಷನ್, ಎಂಆರ್‌ಐ, ಎಕ್ಸ್‌ರೇ ಇತ್ಯಾದಿಗಳ ಖರ್ಚೂ ಉಳೀತಿತ್ತು. ಎದೆಯಿಂದ ಕೆಳಗಿಳಿದರೆ ಹೊಟ್ಟೆಯ ಕಥೆ. ಎಷ್ಟೇ ಪೀಟ್ಸಾ, ಬರ್ಗರ್, ಬೋಂಡಾ ಬಜ್ಜಿಗಳನ್ನ ತಿಂದರೂ ಹೊಟ್ಟೆ ಸಣ್ಣದಾಗೇ, ಫ್ಲ್ಯಾಟ್ ಸ್ಟೊಮಕ್ ಆಗೇ ಇರಬೇಕಾಗಿತ್ತು. ಲಾಸ್ಟ್ ಬಟ್ ನಾಟ್ ದ ಲೀಸ್ಟ್ – ದೇಹ ಕೆಟ್ಹೋದಾಗ, ಇಷ್ಟವಾಗದೇಯಿದ್ದಾಗ ಪರಕಾಯ ಪ್ರವೇಶ ಮಾಡಿ ಇಷ್ಟವಾದ ದೇಹಕ್ಕೆ ಹೋಗೋಹಾಗೆ ಮತ್ತೆ ಗೇಮ್ಸ್‌ನಲ್ಲಿ ಡಿಕ್ಕಿ ಹೊಡೆದು ಸತ್ತ ಕ್ಯಾರೆಕ್ಟ್ರ ಎಕ್ಸ್‌ಟ್ರಾ ಲೈಫ್ ಪಡೆದು ಎದ್ದುಬರೋ ಹಾಗೆ ನಮಗೂ ಐದಾರು ಲೈಫ್ಸ್ ಇರಬೇಕಿತ್ತು. ಮಿಸ್ಟರ್ ಭಗವಾನ್, ಪ್ಲೀಸ್ ಲೆಂಡ್ ಮೀ ಯುವರ್ ಇಯರ್ಸ್... ನಾ ಹೇಳಿದ ಸಿಸ್ಟಮ್ನಲ್ಲಲ್ಲ, ಇನ್ ದ ಗುಡ್ ಓಲ್ಡ್ ಸಿಸ್ಟಮ್ಮು ಅಂಡ್ ಜಾರ್ಗನ್ನು.

***

## ಸಣ್ಣ ಬದಲಾವಣೆ

– ರವೀಂದ್ರ ರಾವ್

ನನ್ನ ಪ್ರೀತಿಯ ಮೂರು ಮಂಗಗಳು ನಿಮಗೆಲ್ಲಾ ಪರಿಚಯವಿರಲೇಬೇಕು. ಅವುಗಳ ಮೂಲಕ ಕಣ್ಣು, ಕಿವಿ ಮತ್ತು ಬಾಯಿಗಳನ್ನು ಮುಚ್ಚಿ, ಅವುಗಳ ಅಗತ್ಯವನ್ನೇ ನಾನು ಪ್ರಶ್ನಿಸುತ್ತಿರುವಾಗ ನೀವುಗಳು ಇನ್ನೇನೆಲ್ಲಾ ಹೊಸ ಅಂಗಗಳು ಬೇಕು ಎಂಬುದರ ಬಗ್ಗೆ ತಿಣುಕುತ್ತಿರುವುದನ್ನು ಕಂಡು 'ನಗೆಯು ಬರುತಿದೆ, ಎನಗೆ ನಗೆಯು ಬರುತಿದೆ'.

'ಅವೆಲ್ಲಾ ಕಪಿಗಳಿಗೆ ಬೇಡದಿರಬಹುದು, ನಮಗೆ ಬೇಕೇಬೇಕು' ಎನ್ನುತ್ತೀರೇನೋ?

'ಬೇಡ ಅನ್ನುವಂತಿಲ್ಲ, ಏನು ಬದಲಾವಣೆ ಬೇಕು ಅನ್ನುವುದೇ ಇಲ್ಲಿನ ಉದ್ದೇಶ' ಎಂದು ನೀವು ಹೇಳುವುದಾದರೆ, ಇಲ್ಲಿ ಕೇಳಿ.

ಬ್ರಹ್ಮನಲ್ಲಿ ನಾನು ಬೇಡುವುದು ಇಷ್ಟೇ. – ನಮಗೆ ಈಗ ಇರುವ ಕಣ್ಣು, ಕಿವಿ ಹಾಗೂ ಬಾಯಿಗಳು – ಕೆಟ್ಟದ್ದನ್ನು ನೋಡದೇ, ಕೆಟ್ಟದ್ದನ್ನು ಕೇಳದೇ, ಕೆಟ್ಟದ್ದನ್ನು ನುಡಿಯದಿರುವಂತೆ ಮಾಡಿ ಮನುಜರನ್ನು ಭೂಲೋಕಕ್ಕೆ ರವಾನಿಸಿಬಿಡಿ. ಇದೇ ನನ್ನ ಬೇಡಿಕೆ ಅವನಲ್ಲಿ. ಸಣ್ಣ ಬದಲಾವಣೆಯಾದುದರಿಂದ ಬ್ರಹ್ಮನ ಕೆಲಸವೂ ಸುಲಭವಾಗಬಹುದೇನೋ ?

ಹೇ ರಾಮ್ ಹೇ ರಾಮ್. ***ಮೋ.ಕ. ಗಾಂಧಿ***

■

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## ಬೀಚಿ ಪ್ರಕಾಶನ Beechi Prakashana

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ರೇಡಿಯೋ ನಾಟಕಗಳು | ಬೀಚಿ | 70 |
| ಮಾತ್ರೆಗಳು | ಬೀಚಿ | 125 |
| ತಿಂಮನ ತಲೆ | ಬೀಚಿ | 70 |
| ಹುಚ್ಚು ಹುರುಳು | ಬೀಚಿ | 50 |
| ಸತೀ ಸೂಳೆ | ಬೀಚಿ | 110 |
| ಖಾದಿ ಸೀರೆ | ಬೀಚಿ | 170 |
| ಸತ್ತವನು ಎದ್ದು ಬಂದಾಗ | ಬೀಚಿ | 60 |
| ಕಾಣದ ಸುಂದರಿ | ಬೀಚಿ | 150 |
| ಕಲ್ಲು ಹೇಳಿತು | ಬೀಚಿ | 150 |
| ತಿಂಮ ರಸಾಯನ | ಬೀಚಿ | 120 |
| ದೇವನ ಹೆಂಡ | ಬೀಚಿ | 170 |
| ಮೇಡಮ್ಮನ ಗಂಡ | ಬೀಚಿ | 110 |
| ಟೆಂಟ್ ಸಿನಿಮಾ | ಬೀಚಿ | 100 |
| ಬೆಳ್ಳಿ ತಿಂಮ ನೂರೆಂಟು ಹೇಳಿದ | ಬೀಚಿ | 75 |
| ಮುರಿದ ಬೊಂಬೆ | ಬೀಚಿ | 100 |
| ಸೀತೂ ಮದುವೆ | ಬೀಚಿ | 80 |

| ಪುಸ್ತಕದ ಹೆಸರು | ಲೇಖಕರು | ಬೆಲೆ |
|---|---|---|
| ಲೇವಡಿ ಟೈಪಿಸ್ಟ್ | ಬೀಚಿ | 100 |
| ಬೆಳ್ಳಿ ಪತ್ರಗಳು | ಬೀಚಿ | 100 |
| ಮಹಾಯುದ್ಧ | ಬೀಚಿ | 100 |
| ಅಮ್ಮಾವ್ರ ಕಾಲ್ಗುಣ | ಬೀಚಿ | 100 |
| ಕತ್ತಲಲ್ಲಿ ಬಂದವಳು | ಬೀಚಿ | 90 |
| ಮಾತನಾಡುವ ದೇವರುಗಳು | ಬೀಚಿ | 75 |
| ಮನೆತನದ ಗೌರವ | ಬೀಚಿ | 100 |
| ಗರತಿಯ ಗುಟ್ಟು | ಬೀಚಿ | 60 |
| ನಂಬರ್ ಐವತ್ತೈದು | ಬೀಚಿ | 60 |
| ಉತ್ತರ ಭೂಪ | ಬೀಚಿ | 250 |
| ನರಪ್ರಾಣಿ | ಬೀಚಿ | 75 |
| ನನ್ನ ಭಯಾಗ್ರಫಿ | ಬೀಚಿ | 270 |
| ಹುಲಿಯ ಬೆನ್ನು ಮೇಲಿಂದ | ಬೀಚಿ | 125 |
| ಅಂದನಾ ತಿಂಮ | ಬೀಚಿ | 125 |
| ಹೆಂಡತಿ ನಕ್ಕಾಗ | ಬೀಚಿ | 125 |
| ಕಮಲಮ್ಮನ ಕುಂಕುಮ ಬಲ | ಬೀಚಿ | 125 |

| | | |
|---|---|---|
| ಬೀchi ಬುಲ್ಲೆಟಿನ್ | ಕೇಶವ ರಾವ್ | 200 |
| ಬೀchi ತೋಚಿದ್ದು ಗೀಚಿದ್ದು | ಸ್ವಾಮಿ ರಾವ್ ಕುಲ್ಕರ್ಣಿ | 120 |
| ಬೊಂಬಾಟ್ ಬೀಚಿ | ಬೇಲೂರು ರಾಮಮೂರ್ತಿ | 60 |
| ವಾಗ್ಬಾಣಗಳು | ಗಂಗಾವತಿ ಪ್ರಾಣೇಶ್ | 50 |
| ನಗಿಸುವವನ ನೋವುಗಳು | ಗಂಗಾವತಿ ಪ್ರಾಣೇಶ್ | 50 |
| ಪೊಲೀಸ್ ಎನಕೌಂಟರ್ | Dr..ಡಿ.ವಿ.ಗುರುಪ್ರಸಾದ್ IPS | 200 |
| ಪೊಲೀಸ್ ಜೀವನದಲ್ಲಿ ಹಾಸ್ಯ | Dr.ಡಿ.ವಿ.ಗುರುಪ್ರಸಾದ್ IPS | 200 |
| ವಿಶ್ವಪರ್ಯಟನೆ | Dr.ಡಿ.ವಿ.ಗುರುಪ್ರಸಾದ್ IPS | 300 |
| ರಾಜೀವ್ ಗಾಂಧಿ ಭೀಕರ ಹತ್ಯಾ | Dr.ಡಿ.ವಿ.ಗುರುಪ್ರಸಾದ್ IPS | 250 |

ಇಂಗ್ಲಿಷ್ ಮೂಲ: ಪದ್ಮಶ್ರೀ ಡಿ ಆರ್ ಕಾರ್ತಿಕೇಯನ್

**ಪ್ರತಿಗಳಿಗೆ ಸಂಪರ್ಕಿಸಿ.: 9845264304**